ಸಂಚಿಕೆ
೧೦
ಮೇ, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



Karnataka Cultural Organization – Brindavana (KCOB) 501(C)(3), NJ

Copyright © KCO – Brindavana

ಸಂಚಿಕೆ
೧೦
ಮೇ, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



ಈ ಸಂಚಿಕೆಯಲ್ಲಿ....

ಸಂಪಾದಕೀಯ ಪು ೧
ಅಭಿಮಾನಿ ತಂಡದ ನುಡಿ ಪು ೨
ಜೀವನ ಚರಿತೆ ಮತ್ತು ಸಂದೇಶ ಪು ೬
ತಾಯಂದಿರ ದಿನಾಚರಣೆ ಪು ೧೦
ಕಥಾ ಸಮಯ ಪು ೧೪
ನಾವು ನೋಡಿದ ಸಿನಿಮಾ ಪು ೧೫
ಹಿನ್ನೋಟ ಪು ೩-೫
ವ್ಯಕ್ತಿ-ಪರಿಚಯ ಪು ೫, ೮
ಹಾಸ್ಯ ಲೇಖನ ಪು ೧೧
ಒದುಗರ ಒಲೆಗಳು ಪು ೧೮

**ಸಂಪಾದಕ ಮಂಡಳಿ**


ಸತ್ಯ ಪ್ರಸಾದ್
ಪ್ರಧಾನ ಸಂಪಾದಕರು


ರಾಘವೇಂದ್ರ ಕುಂದಲಗುರ್ಕಿ
ಸಂಪಾದಕರು


ಕಾವ್ಯಾ ಕಡಮೆ ನಾಗರಕಟ್ಟೆ
ಸಂಪಾದಕ ವರ್ಗ


ಭಾಸ್ಕರ ತೈಲಗೇರಿ
ಸಂಪಾದಕ ವರ್ಗ


ಅನಿಲ್ ಭಾರಧ್ವಾಜ
ಸಂಪಾದಕ ವರ್ಗ


ಪ್ರಶಾಂತ ಎಂ.
ಸಂಪಾದಕ ವರ್ಗ


ಅಮೂಲ್ಯ ಕಟ್ಟೀಮನಿ
ಸಂಪಾದಕ ವರ್ಗ

## ಪ್ರಧಾನ ಸಂಪಾದಕರಿಂದ......

**ಎ**ಲ್ಲರಿಗೂ ನಮಸ್ಕಾರ,

ವಸಂತನ ಆಗಮನ, ಬೆಚ್ಚನೆಯ ಸೂರ್ಯನ ಕಿರಣಗಳು ನಮ್ಮ ಛಳಿಯ ಸೋಮಾರಿತನ ಹೊಡೆದೋಡಿಸಿ ಲವಲವಿಕೆಯನ್ನು ಮೂಡಿಸುತ್ತಿವೆ. ಕನ್ನಡ ಸಾಹಿತ್ಯಕ್ಕೆಂದೇ ಮೀಸಲಾದ ಅಮೆರಿಕಾದ ಏಕೈಕ ರಾಷ್ಟ್ರೀಯ ಸಂಸ್ಥೆ 'ಕನ್ನಡ ಸಾಹಿತ್ಯ ರಂಗ'ವು, ಬಾಸ್ಟನ್ ನ 'ಮಂದಾರ' ಕನ್ನಡ ಸಂಘದ ಸಹಯೋಗದೊಂದಿಗೆ ತನ್ನ ಲನೇ ವಸಂತ ಸಾಹಿತ್ಯೋತ್ಸವವನ್ನು ಇತ್ತೀಚೆಗೆ ಆಚರಿಸಿತು, ಕನ್ನಡದ ವಿಶಿಷ್ಟ ಲೇಖಕ, ಚಿಂತಕ, ವಾಗ್ಮಿ, ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರು ಈ ಸಮ್ಮೇಳನದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಬೃಂದಾವನದ ಸಹಯೋಗದಿಂದ ಇಲ್ಲಿ ನಾವೂ ಒಮ್ಮೆ ಸಾಹಿತ್ಯಾಸಕ್ತರಿಗೆ ಈ ರಸದೌತಣ ಬಡಿಸಿದರೆ ಎಷ್ಟು ಚೆಂದ. ನಮ್ಮ ತಂಡದ, ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪುರಸ್ಕೃತೆ 'ಕಾವ್ಯ ಕಡಮೆ' ಸಮ್ಮೇಳನದ ಕವಿ ಗೋಷ್ಠಿಯಲ್ಲಿ ಭಾಗವಹಿಸಿ, ಪ್ರತಿನಿಧಿಸಿದ್ದು ನಮ್ಮ ಹೆಮ್ಮೆಯ ವಿಷಯ.

ನಮ್ಮ ತಂಡ, ಈ ಬಾರಿಯ ಸಂಚಿಕೆಗೆ ಆಯ್ಕೆ ಮಾಡಿಕೊಂಡಿರುವ ಥೀಮ್: ಹಾಸ್ಯ. ಹಾಸ್ಯ ಅಥವಾ ವಿನೋದ, ಸಾಹಿತ್ಯದ ಒಂದು ಪ್ರಖರವಾದ ಪ್ರಕಾರ. ೧೨ನೇ ಶತಮಾನದಲ್ಲಿಯೇ ವಿನೋದದಿಂದ ಸಮಾಜದ ಓರೆ ಕೋರೆಗಳಿಗೆ ಕೈಗನ್ನಡಿ ಹಿಡಿದ ಸಾಕಷ್ಟು ವಚನ ಮತ್ತು ದಾಸ ಸಾಹಿತ್ಯವನ್ನು ನೋಡಬಹುದು, 'ಮೂರ್ಖಂಗೆ ಬುದ್ಧಿಯನು ... ' ಎಂದು ಸರ್ವಜ್ಞ ಹಾಸ್ಯ ವಿಡಂಬನೆ ಮಾಡಿದ ತ್ರಿಪದಿಗಳನ್ನು ಕಾಣಬಹುದು, ಮುದ್ದಣ್ಣ ಮನೋರಮೆಯ ಸರಸ ಸಲ್ಲಾಪದಲ್ಲಿ ನವಿರಾದ ಹಾಸ್ಯ ಹಾಸು ಹೊಕ್ಕಾಗಿರುವುದನ್ನು ಕಾಣಬಹುದು. ಈ ಶತಮಾನದ ಬೀಚಿ, ಆ ರಾ ಮಿತ್ರ, ಡುಂಡಿರಾಜ್ ಮುಂತಾದವರಿಂದ ಕನ್ನಡ ಸಾಹಿತ್ಯದಲ್ಲಿ ಹಾಸ್ಯದ ಹೊನಲನ್ನೇ ಸವಿಯಬಹುದು.

ಇಡೀ ಸಂಚಿಕೆಯನ್ನು ನಮ್ಮ ತಂಡ ಅತ್ಯಂತ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ, ಅವರಿಗೆ ನಾನು ಅಭಾರಿ.

ಮತ್ತೆ ಸಿಗೋಣ

*-ಸತ್ಯ*



## ಸಂಪಾದಕರಿಂದ......

### ಸತ್ಯತೆಯ ಪ್ರಸ್ತುತತೆ

**ನ್ಯೂ**ಜೆರ್ಸಿಯ ಎಲ್ಲ ಕನ್ನಡ ಬಾಂಧವರಿಗೆ ನಮಸ್ಕಾರಗಳು

ಚಿಕ್ಕವನಾಗಿದ್ದಾಗ ಪ್ರತಿದಿನ ಬೆಳಗ್ಗೆ ನಮ್ಮ ಗುರುಗಳ ಹಿತೋಪದೇಶ ಶಾಲೆಯಲ್ಲಿ ಕೇಳುತ್ತಾ ಇರ್ತಿದ್ವಿ "ಸತ್ಯವನ್ನು ಹೇಳಬೇಕು, ಸುಳ್ಳನ್ನು ಹೇಳಬಾರದು". ಎಷ್ಟೇ ಸತ್ಯ ಹೇಳಿದರೂ, ಸುಳ್ಳು ಅನ್ನುವುದು ಬಿಡುವುದಿಲ್ಲ. ಕೆಲವೊಮ್ಮೆ ಹಾನಿಕಾರಕವಲ್ಲದ ಸುಳ್ಳನ್ನು ಹೇಳುವುದು ಅನಿವಾರ್ಯ, ಆದರೂ ಸತ್ಯ ಹೇಳುವುದು ಕರ್ತವ್ಯ. ನಾವು ಮಕ್ಕಳಿಗೂ ಸತ್ಯ ನುಡಿಯುವಂತೆ ಸದಾ ಹೇಳುತ್ತಿರುತ್ತೇವೆ.

ಈ ವಿಷಯ ಈಗೇಕೆ? ಕೆಲವು ದಿನಗಳ ಹಿಂದೆ ಒಬ್ಬ ಆತ್ಮೀಯರೊಬ್ಬರು ಒಂದು ಚಾರಿತ್ರಿಕ ವಿಷಯ ಮಾತನಾಡುವಾಗ ಹೇಳಿದ ಮಾತಿದು "ನೀವು ಅಂದು ಕೊಂಡ ಸತ್ಯ ಬೇರೆಯವರಿಗೆ ಸತ್ಯವಾಗಿಲ್ಲದಿರಬಹುದು. ನಿಮ್ಮ ಸತ್ಯ ಬೇರೆ ಅವರ ಸತ್ಯ ಬೇರೆ ".

ಇದು ೧+೧=೨ ನಿಮಗೆ, ಬೇರೆಯವರಿಗೆ ಅದು ೩ ಎಂದು ಹೇಳಿದ ಹಾಗೆ ಆಯಿತು.

ಸತ್ಯದ ಚಿಂತನೆ ಎರಡು ರೀತಿ ಮಾಡಬಹುದು. ಒಂದು ಪಾರಮಾರ್ಥಿಕ, ಇನ್ನೊಂದು ಲೌಕಿಕ/ಪ್ರತ್ಯಕ್ಷ. ಇದು ಪಾರಮಾರ್ಥಿಕ ವಿಷಯದಲ್ಲಾದರೆ ಒಪ್ಪಬಹುದಾದ ವಿಷಯ ವಾದರೂ ಕಣ್ಣಿಗೆ ಕಾಣುವ ಸತ್ಯದ ವಿಷಯದಲ್ಲಿ ಸಾಧ್ಯವಿಲ್ಲದ ಮಾತು. ಪಾರಮಾರ್ಥಿಕ ಸತ್ಯತೆ ಈ ಲೇಖನದ ಉದ್ದೇಶವಲ್ಲ. ನಿಜ ಜೀವನದಲ್ಲಿ ದಿನ ನಿತ್ಯ ನೋಡುವ, ಅನುಭವಿಸುವ ಸತ್ಯಗಳು ಹಲವಾರು. ಒಬ್ಬ ವಿದ್ಯಾರ್ಥಿ ಶಾಲೆಯಲ್ಲಿ ತೇರ್ಗಡೆ ಹೊಂದಿದ್ದಾನೆ ಅಂದರೆ ಅವನಿಗೆ ಸರ್ಟಿಫಿಕೇಟ್ ಕೊಡುತ್ತಾರೆ. ಒಂದು ರಾಜಕೀಯ ವ್ಯಕ್ತಿ ಚುನಾವಣೆಯಲ್ಲಿ ಗೆದ್ದಿದ್ದಾರೆ ಅಂದರೆ ಚುನಾವಣಾ ಆಯೋಗ ಪ್ರಶಸ್ತಿ ಪತ್ರ ಕೊಡುತ್ತದೆ. ನಮಗೆ ಯಾರು ಗೆಲ್ಲಬೇಕೋ ಅವರು ಗೆಲ್ಲದಿದ್ದರೂ, ಬೇರೆಯವರ ಗೆಲುವು, ಸೋಲು ಅಂತ ಹೇಳಲಾಗದು. ಇದು ಅನುಭವದ ಸತ್ಯಗಳು. ಹಲವಾರು ಮಹನೀಯರು/ದಾರ್ಶನಿಕರು ಕನ್ನಡದ/ಕರ್ನಾಟಕದ ಅಭ್ಯುದಯಕ್ಕಾಗಿ ಹೋರಾಡಿದ್ದಾರೆ. ತಾತ್ವಿಕ ನೆಲೆಗಳಲ್ಲಿ ಏನೇ ಬಿನ್ನಾಭಿಪ್ರಾಯವಿದ್ದರೂ ಅವರ ಕೊಡುಗೆಗಳು ಸತ್ಯ. ಅದು ಕಾಣಿಸುವ ಸತ್ಯ.

"ಪತ್ರಿಕೆಗಳು ಸಂಪೂರ್ಣ ಸುಳ್ಳು ಹೇಳುತ್ತಿವೆ", "ಚುನಾವಣೆಗಳ ಮತದಾನ ಯಂತ್ರ ಸುಳ್ಳು ಹೇಳುತ್ತಿದೆ" ಎಂದು ಹಲವಾರು ಆರೋಪಗಳನ್ನು ರಾಜಕೀಯ ಪಕ್ಷಗಳು/ ವ್ಯಕ್ತಿಗಳು ಇತ್ತೀಚಿನ ದಿನಗಳಲ್ಲಿ ಆರೋಪ ಮಾಡುವುದನ್ನು ನೋಡಿದ್ದೇವೆ, ಕೆಲವು ಲೇಖನಗಳು, ಕೆಲವು ಯಂತ್ರಗಳ ದೋಷಗಳು ಇದ್ದರು, ಸಂಪೂರ್ಣ ಪತ್ರಿಕೋದ್ಯಮ ಸುಳ್ಳಲ್ಲ. ಚುನಾವಣೆಗಳು ಸುಳ್ಳಲ್ಲ. ಆದ್ದರಿಂದ ಸತ್ಯದ ಪ್ರಸ್ತುತತೆ ಹಿಂದೆಂದಿಗಿಂತಲೂ ಈಗ ಹೆಚ್ಚಿದೆ. ಸತ್ಯವೆಲ್ಲ ಸುಳ್ಳೆಂಬ ವ್ಯವಸ್ಥಿತ ಪ್ರಚಾರ ನಡೆಯುತ್ತಿದೆ. ಇದು ಪ್ರಜಾಪ್ರಭುತ್ವಕ್ಕೆ ಎಸೆಯುತ್ತಿರುವ ಕೊಡಲಿ ಪೆಟ್ಟು.

ಸುಳ್ಳನ್ನು ಹೇಳಲು ಧೈರ್ಯವಿಲ್ಲದಿದ್ದರೂ, ಸತ್ಯವನ್ನು ಹೇಳಲು ಧೈರ್ಯ ಬೇಕು. ಪ್ರಜಾಪ್ರಭುತ್ವದ ನಾಲ್ಕನೇ ಕಂಬ ಬೀಳದೆ ನೋಡಿಕೊಳ್ಳುವ ಜವಾಬ್ದಾರಿ ಎಲ್ಲರ ಮೇಲಿದೆ. ಮಹಾತ್ಮಾ ಗಾಂಧಿಯ "ಆತ್ಮ ಕಥೆ" ಯಲ್ಲಿ ಬರುವ "ಸತ್ಯವಂತನಾಗು, ಸೌಮ್ಯನಾಗು, ಧೈರ್ಯವಂತವನಾಗು" ಎಷ್ಟೊಂದು ಪ್ರಸ್ತುತ ವಾಕ್ಯಗಳು.

**"ಸತ್ಯ ಮೇವ ಜಯತೇ !"**

ನಿಮ್ಮ ಅನಿಸಿಕಗಳನ್ನು ತಿಳಿಸಿ

ಮತ್ತೊಮ್ಮೆ ಮುಂದಿನ ಸಂಚಿಕೆಯಲ್ಲಿ ಸಿಗೋಣ ...

*-ರಾಘವೇಂದ್ರ ಕುಂದಲಗುರ್ಕಿ*

ಮುಖಪುಟ ಚಿತ್ರ:
ಉಂಚಳ್ಳಿ ಜಲಪಾತ (ಕೆಪ್ಪ ಜೋಗ್)
ಶಿರಸಿ- ಸಿದ್ದಾಪುರ.
ಕೃಪೆ : ಅಂತರ್ಜಾಲ
http://chaayabindu.blogspot.com/

ಸಂಪಾದಕೀಯ ಪುಟ ಚಿತ್ರ:
ಯಣ, ಶಿರಸಿ
ಕೃಪೆ: ಅಂತರ್ಜಾಲ

ಪತ್ರಿಕೆ ವಿನ್ಯಾಸ:
ಪ್ರಶಾಂತ ಎಂ.
ರಾಘವೇಂದ್ರ ಕುಂದಲಗುರ್ಕಿ




Copyright © KCO – Brindavana

ಸಂಚಿಕೆ
೧೦
ಮೇ, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಕನ್ನಡದ ಕನಸುಗಳ ಸಾಕಾರ... ನಿಮ್ಮ ಸಹಕಾರದಿಂದ ನಡೆಯಲಿ ನಿರಂತರ..

### ಅಭಿಮಾನಿ ತಂಡದ ನುಡಿ

**ನೆ**ಚ್ಚಿನ ನ್ಯೂಜೆರ್ಸಿ ಕನ್ನಡ ಸ್ನೇಹಿತರಿಗೆ ಪ್ರೀತಿಪೂರ್ವಕ ನಮಸ್ಕಾರಗಳು,

ಅಭಿಮಾನಿ ತಂಡದ ಮೂರನೆಯ ಬೃಂದಾವನ ವಾಣಿ ಸಂಚಿಕೆಗೆ ನಿಮಗೆಲ್ಲ ತುಂಬು ಹೃದಯದ ಸ್ವಾಗತ.

ಮಾತೃ ದಿವಸದ ಈ ಸಂದರ್ಭದಲ್ಲಿ ಕನ್ನಡದ ತಾಯಂದರಿಗೆಲ್ಲಾ ನಮ್ಮ ಹಾರ್ದಿಕ ಶುಭಾಶಯಗಳು. ತಾಯಿ ಗುರುವಿನ ಬಗ್ಗೆ ನಾನು ಶಾಲಾ ದಿನಗಳಲ್ಲಿ ಕೇಳಿದ ಒಂದು ಹಾಡು ನೆನಪಿಗೆ ಬರುತ್ತಿದೆ...

ಮನೆಯೆ ಮೊದಲ ಪಾಠಶಾಲೆ,
ಜನನಿ ತಾನೇ ಮೊದಲ ಗುರುವು,
ಜನನಿಯಿಂದ ಪಾಠ ಕಲಿತ ಜನರು ಧನ್ಯರು..

ಎಷ್ಟು ಸುಂದರ ಸತ್ಯ, ಈ ಪದ್ಯ. ಅಮ್ಮಂದಿರಿಂದ ಪಾಠ ಕಲಿತ ನಾವೆಲ್ಲರೂ ನಿಜಕ್ಕೂ ಧನ್ಯರು. ಇಂದಿನ ನಮ್ಮ ಯಶಸ್ಸಿಗೆ, ಬಾಲ್ಯದಲ್ಲಿ ಜತನದಿಂದ ಶಿಲ್ಪವನ್ನು ಕಡೆದು ಮೂರ್ತಿ ಮಾಡಿದ, ನಮಗೆ ಅಮೃತಧಾರೆಯೆರೆದ ಆ ತಾಯಿ ಶಿಲ್ಪಿಗೆ ಅಮ್ಮನ ದಿನದಂದು ಪ್ರೀತಿ ಪೂರ್ವಕ ನಮನಗಳು.
ಮೊದಲನೆಯದಾಗಿ, ಏಪ್ರಿಲ್ ೮ ರಂದು ಅಭಿಮಾನಿ ತಂಡ ಏರ್ಪಡಿಸಿದ್ದ ವಸಂತೋತ್ಸವ ಕಾರ್ಯಕ್ರಮದ ಯಶಸ್ಸಿಗೆ, ಎಲ್ಲರ ಮೆಚ್ಚುಗೆಗೆ, ನಿಮ್ಮೆಲ್ಲರ ಸಹಕಾರ ಮತ್ತು ಸಹಯೋಗವೇ ಕಾರಣ. ಪ್ರಥಮ ಬಾರಿಗೆ ಬೃಂದಾವನ ಕನ್ನಡ ಕೂಟದ ಕಾರ್ಯಕ್ರಮದಲ್ಲಿ ೮೦೦ ಕ್ಕೂ ಹೆಚ್ಚು ಕನ್ನಡಿಗರು ಸೇರಿ, ಹೊಸ ದಾಖಲೆ ಸ್ಥಾಪಿಸಿದ್ದೀರಿ. ನಿಮ್ಮ ಈ ಅಭೂತಪೂರ್ವ ಉತ್ತೇಜನ, ಕಾರ್ಯಕ್ರಮದ ಶ್ಲಾಘನೆಗಳಿಂದ, ಮುಂದೆ ಕೂಡ ಬೃಂದಾವನದಲ್ಲಿ ಅತ್ಯುತ್ತಮ ಕಾರ್ಯಕ್ರಮಗಳನ್ನು ನಡೆಸಿಕೊಡುವ ಜವಾಬ್ದಾರಿ ನಮ್ಮ ಮೇಲೆ ಹೊರಿಸಿದ್ದೀರಿ. ನಿಮ್ಮ ನಿರೀಕ್ಷೆಯನ್ನು ನಾವು ಸುಳ್ಳಾಗಿಸುವುದಿಲ್ಲ.

ಮೊದಲೇ ತೀರ್ಮಾನಿಸಿದಂತೆ, ಮಧ್ಯಾಹ್ನ ೧೨ ಕ್ಕೆ ಪ್ರಾರಂಭವಾದ ವಸಂತೋತ್ಸವ ಕಾರ್ಯಕ್ರಮ, ಸಂಜೆ ಮುಕ್ತಾಯವಾದಾಗ ಸರಿಯಾಗಿ ೮.೦೦ ಗಂಟೆ. ಈ ಕಾರ್ಯಕ್ರಮದಲ್ಲಿ ಹೆಸರಾಂತ ಕಲಾವಿದರಾದ ಶ್ರೀಮತಿ ಬಿ. ಆರ್ ಛಾಯಾ ಮತ್ತು ಶ್ರೀ ಜಗ್ಗೇಶ್ ರೊಂದಿಗೆ, ನ್ಯೂಜೆರ್ಸಿಯ ೧೭೫ ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿದ್ದರು. ಸುಮಾರು ನಲವತ್ತಕ್ಕೂ ಹೆಚ್ಚು ಕನ್ನಡ ಶಾಲೆಯ ಮಕ್ಕಳು ತಮ್ಮ ನೃತ್ಯ, ನಾಟಕಗಳಿಂದ ತಾವೇನು ಕಡಿಮೆ ಇಲ್ಲವೆಂದು ತೋರಿಸಿಕೊಟ್ಟರು. ಗಾನ ಕೋಗಿಲೆ ಬಿ. ಆರ್ ಛಾಯಾ ತಮ್ಮ ಸುಮಧುರ ಗಾನ ಲಹರಿಯಿಂದ ನಮ್ಮನ್ನು ಬೇರೊಂದು ಲೋಕಕ್ಕೆ ಕರೆದೊಯ್ದರೆ, ನಮ್ಮ ನೆಚ್ಚಿನ ನವರಸ ನಾಯಕ ನಟ ಶ್ರೀ ಜಗ್ಗೇಶ್ ತಮ್ಮ ಜೀವನ ಮತ್ತು ಚಲನ ಚಿತ್ರ ರಂಗದ ವಿಶೇಷ ಅನುಭವಗಳನ್ನು ಹಂಚಿಕೊಂಡು ಎಲ್ಲರ ಮನಗೆದ್ದರು. ಬಹಳ ಹತ್ತಿರದಿಂದ ಈ ಕಲಾವಿದರನ್ನು ನೋಡಿದಾಗ, ಇವರ ಸರಳತೆ, ತಿಳುವಳಿಕೆ, ಜನಗಳ ಜೊತೆ ಬೆರೆತ ರೀತಿ, ಚಿತ್ರರಂಗದ ಕಲಾವಿದರ ಬಗ್ಗೆ ನಮ್ಮ ಗೌರವ ಹೆಚ್ಚವಂತೆ ಮಾಡಿತು.

ಇದರ ಜೊತೆಗೆ ಯುಗಾದಿ ಹಬ್ಬದ ಊಟ ಕೇಳಬೇಕೆ? ಮಧಾಹ್ನ ಬೇವು-ಬೆಲ್ಲ ಮತ್ತು ಗೊಜ್ಜವಲಕ್ಕಿಯಿಂದ ಪ್ರಾರಂಭವಾದದ್ದು, ರಾತ್ರಿ ಲಾಡುವಿನ ಹಬ್ಬದೂಟದೊಂದಿಗೆ ಮುಕ್ತಾಯವಾಯಿತು. ಹಬ್ಬದೂಟದ ಮತ್ತೊಂದು ಆಕರ್ಷಣೆ ಗುಲ್ಬರ್ಗದ ಸಜ್ಜೆ ರೊಟ್ಟಿ, ಚಟ್ನಿ, ಎಲ್ಲರ ಮನ ಗೆದ್ದಿತು. ಈ ಮಧ್ಯ ಮಕ್ಕಳಿಗಾಗಿ ಕೇಕ್...ಒಟ್ಟಾರೆ ಈ ವಸಂತೋತ್ಸವ ಬಹಳಷ್ಟು ದಿವಸ ನಮ್ಮ ಮನಸ್ಸಿನಲ್ಲಿ ಉಳಿಯುವಂತೆ ಮಾಡಿತು.

ಇತ್ತೀಚಿನ ದಿನಗಳಲ್ಲಿ ಕನ್ನಡ ಚಲನ ಚಿತ್ರರಂಗ ಪ್ರಬುದ್ಧ ರೀತಿಯಲ್ಲಿ ಬೆಳೆಯುತ್ತ ಎಲ್ಲರ ಆಸಕ್ತಿ ಹೆಚ್ಚಿಸುತ್ತಿದೆ. ಹೆಚ್ಚು ಹೆಚ್ಚು ಉತ್ತಮ ಚಿತ್ರಗಳು ನಮ್ಮನ್ನು ಚಿತ್ರ ಮಂದಿರಗಳಿಗೆ ಸೆಳೆಯುತ್ತಿರುವುದು ಒಂದು ದೊಡ್ಡ ಸಾಧನೆಯೇ ಸರಿ. ಹೊಸ ಹೊಸ ಕನ್ನಡ ಚಿತ್ರಗಳು ಅಮೇರಿಕಾದಲ್ಲಿ ಬಿಡುಗಡೆಯಾಗುತ್ತಿರುವುದು ನಮಗೆಲ್ಲ ಹೆಮ್ಮೆಯ ವಿಷಯ. ಕನ್ನಡ ಚಿತ್ರ ರಂಗದ ಮಾರುಕಟ್ಟೆ ಬೆಳೆದರೆ ಅದಕ್ಕಿಂತ ಹೆಚ್ಚಿನ ಸಂತೋಷ ಇನ್ನೇನಿದೆ? ಚಲನ ಚಿತ್ರ ಮಾಧ್ಯಮ, ನಮ್ಮ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ. ಅಭಿಮಾನಿ ತಂಡ, ಉತ್ತಮ ಚಲನ ಚಿತ್ರಗಳಿಗೆ ಪ್ರೋತ್ಸಾಹ ಕೊಡುವ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಕನ್ನಡ ಚಲನ ಚಿತ್ರರಂಗ ಪ್ರಬುದ್ಧ ರೀತಿಯಲ್ಲಿ ಬೆಳೆಯುತ್ತ ಎಲ್ಲರ ಆಸಕ್ತಿ ಹೆಚ್ಚಿಸುತ್ತಿದೆ. ಹೆಚ್ಚು ಹೆಚ್ಚು ಉತ್ತಮ ಚಿತ್ರಗಳು ನಮ್ಮನ್ನು ಚಿತ್ರ ಮಂದಿರಗಳಿಗೆ ಸೆಳೆಯುತ್ತಿರುವುದು ಒಂದು ದೊಡ್ಡ ಸಾಧನೆಯೇ ಸರಿ. ಹೊಸ ಹೊಸ ಕನ್ನಡ ಚಿತ್ರಗಳು ಅಮೇರಿಕಾದಲ್ಲಿ ಬಿಡುಗಡೆಯಾಗುತ್ತಿರುವುದು ನಮಗೆಲ್ಲ ಹೆಮ್ಮೆಯ ವಿಷಯ. ಕನ್ನಡ ಚಿತ್ರ ರಂಗದ ಮಾರುಕಟ್ಟೆ ಬೆಳೆದರೆ ಅದಕ್ಕಿಂತ ಹೆಚ್ಚಿನ ಸಂತೋಷ ಇನ್ನೇನಿದೆ? ಚಲನ ಚಿತ್ರ ಮಾಧ್ಯಮ, ನಮ್ಮ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗ. ಅಭಿಮಾನಿ ತಂಡ, ಉತ್ತಮ ಚಲನ ಚಿತ್ರಗಳಿಗೆ ಪ್ರೋತ್ಸಾಹ ಕೊಡುವ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದೆ.

ಇತ್ತೀಚೆಗೆ ಕಿರಿಕ್ ಪಾರ್ಟಿ ಚಿತ್ರ ತಂಡ, ನ್ಯೂಜೆರ್ಸಿಗೆ ಬಂದಾಗ ಅವರೊಂದಿಗೆ ಕುಳಿತು "ಕಿರಿಕ್ ಪಾರ್ಟಿ" ಸಿನಿಮಾ ನೋಡಿದೆವು. ಮತ್ತೋರ್ವ ಉದಯೋನ್ಮುಖ ಕನ್ನಡ ನಾಯಕ ನಟ ನಾಗಾಭರಣರ "ಅಲ್ಲಮ" ಚಲನ ಚಿತ್ರದಲ್ಲಿ ಅಲ್ಲಮ ಪ್ರಭುವಾಗಿ ಎಲ್ಲರ ಮನ ಗೆದ್ದ ಶ್ರೀ ಧನಂಜಯ ನ್ಯೂಜೆರ್ಸಿಯಲ್ಲಿದ್ದರು. ಹಲವಾರು ಸ್ಥಳೀಯ ಕನ್ನಡಿಗರು ಸೇರಿ ಹೊಯ್ಸಳ ರೆಸ್ಟಾರೆಂಟ್ನಲ್ಲಿ ಅವರೊಂದಿಗೆ ಕಳೆದ ಸಂಜೆ ಮತ್ತು ಸಂವಾದ, ಬಹು ದಿನ ನೆನಪಿನಲ್ಲಿ ಉಳಿಯುವಂಥದ್ದು. ಧನಂಜಯ ಒಬ್ಬ ಸಾಫ್ಟ್ವೇರ್ ಇಂಜಿನಿಯರ್. ಇನ್ಫೋಸಿಸ್ನಲ್ಲಿ ಕೆಲಸ ಮಾಡಿ, ಮೈಸೂರಿನ ಬಿ ವಿ ಕಾರಂತರ ರಂಗಾಯಣದಲ್ಲಿ ಅನುಭವ ಪಡೆದು, ನಂತರ ಚಲನಚಿತ್ರ ರಂಗಕ್ಕೆ ಬಂದವರು. ಉತ್ತಮ ಕೆಲಸ ಮಾಡಬೇಕೆನ್ನುವ ಪ್ರೊಫೆಷನಲಿಸಮ್, ಶ್ರಮ ಪಟ್ಟು ಕೆಲಸ ಮಾಡುವ ಉತ್ಸಾಹವಿರುವ ಧನಂಜಯ, ಮುಂದೊಂದು ದಿನ ಕನ್ನಡ ಚಿತ್ರರಂಗದಲ್ಲಿ ಹೆಸರಾಂತ ನಾಯಕ ನಟರಾಗಲಿ ಎನ್ನುವ ಹಾರೈಕೆ ನಮ್ಮದು. ಜೆರ್ಸಿ ಸಿಟಿಗೆ ಕಾರು ಓಡಿಸುತ್ತಿದ್ದೆ. ಜೊತೆಗೆ ಧನಂಜಯ ಕುಳಿತಿದ್ದರು. ಮಾತು ಬಾಹುಬಲಿ ಚಿತ್ರದ ಸುತ್ತ ನೆಡೆದಿತ್ತು. ಕೃಷ್ಣ ದೇವರಾಯ, ಮಯೂರದಂತಹ ಉತ್ತಮ ಐತಿಹಾಸಿಕ ಚಿತ್ರಗಳನ್ನು ನಿರ್ಮಿಸಿದ ಕನ್ನಡಿಗರಿಗೆ, ಬಾಹುಬಲಿಯಂತಹ ಚಲನ ಚಿತ್ರ ನಿರ್ಮಿಸಲು ಆಗದೆ ಇರದು.. ಅಂತಹ ಪ್ರಯತ್ನಕ್ಕೆ ಹೊರನಾಡ ಕನ್ನಡಿಗರ ಬೆಂಬಲ ಇದ್ದೆ ಇರುತ್ತದೆ.

ಕನ್ನಡ ಸಾಹಿತ್ಯ ರಂಗದ ಎಂಟನೆಯ ಸಮ್ಮೇಳನ ಬಾಸ್ಟನ್ ಕನ್ನಡ ಕೂಟದ ಸಹಯೋಗದಲ್ಲಿ ನೆಡೆಯಿತು. ಅದೊಂದು ಅಚ್ಚುಕಟ್ಟಾದ ಕನ್ನಡ ಸಾಹಿತ್ಯ ಕಾರ್ಯಕ್ರಮ. ಅನೇಕ ಕನ್ನಡ ಸಾಹಿತ್ಯಾಸಕ್ತರು ಭಾಗವಹಿಸಿದ್ದರು. ನ್ಯೂ ಜೆರ್ಸಿ ಕನ್ನಡತಿಯರಾದ ಶ್ರೀಮತಿ ಮೀರಾ ರಾಜಗೋಪಾಲ್ ಮತ್ತು ಶ್ರೀಮತಿ ಕಾವ್ಯ ಕಡಮೆ ಅವರ ಪುಸ್ತಕಗಳನ್ನು, ಸಮ್ಮೇಳನದಲ್ಲಿ ಚರ್ಚಿಸಲಾಯಿತು. ಸಮ್ಮೇಳನದಲ್ಲಿ ಅವರು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದು ನಮಗೆಲ್ಲ ಹೆಮ್ಮೆಯ ವಿಷಯ. ಶ್ರೀ ಲಕ್ಷ್ಮಿ ತೋಲ್ಪಾಡಿಯವರ ಭಾಷಣ, ಭಕ್ತಿ ಮಾರ್ಗದ ಬಗ್ಗೆ ಆಳವಾದ ಚಿಂತನೆಗೆ ಅಡಿಪಾಯ ಹಾಕಿತು. ಅಭಿಮಾನಿ ತಂಡದ ಪರವಾಗಿ ನಾವೆಲ್ಲಾ ಭಾಗವಹಿಸಿದ್ದೆವು. ಕಾರ್ಯಕ್ರಮದಲ್ಲಿ ನಮ್ಮೊಂದಿಗಿದ್ದ ಶ್ರೀ ಮೈಸೂರ್ ನಟರಾಜ್ ಮತ್ತು ಶ್ರೀ ಶ್ರೀಕಾಂತ್ ಬಾಬು, ಕನ್ನಡ ಸಾಹಿತ್ಯ ರಂಗದ ೨೦೧೯ ರ ಸಮ್ಮೇಳನವನ್ನ ನ್ಯೂಜೆರ್ಸಿಯಲ್ಲಿ ಮಾಡಬಾರದೇಕೆ, ಎಂದಾಗ ಮತ್ತೆ ಮಾತಾಡೋಣ ಎಂದು ಕೊಂಡೆವು. ಹಾಗೇನಾದರೂ ಆದರೆ ಅದಕ್ಕಿಂತ ಸಂತಸದ ವಿಷಯ ಇನ್ನೇನಿದೆ? ಸಮ್ಮೇಳನದಲ್ಲಿ ಭಾಗವಹಿಸಲು ಶ್ರೀ ಎಂ. ಜಿ. ಪ್ರಸಾದರೊಂದಿಗೆ ಕಾರಿನಲ್ಲಿ ಕಳೆದ ಎಂಟು ಗಂಟೆಗಳು, ಹಲವಾರು ವಿಷಯಗಳ ಬಗ್ಗೆ ನನ್ನ ಜ್ಞಾನ ಪರಿಧಿಯನ್ನು ವಿಸ್ತರಿಸಿತು.

ನಮ್ಮ ಮುಂಬರುವ ಕಾರ್ಯಕ್ರಮಗಳ ಬಗ್ಗೆ ಒಂದೆರಡು ಮಾತು. ಈ ವರ್ಷದ ಪಿಕ್ನಿಕ್ (ವನವಿಹಾರ) ಕಾರ್ಯಕ್ರಮವನ್ನು, ಜುಲೈ ೮ ರಂದು ಎಡಿಸನ್ನಲ್ಲಿರುವ ಮೆರ್ರಿಲ್ ಪಾರ್ಕ್ ನಲ್ಲಿ ಏರ್ಪಡಿಸಿದ್ದೇವೆ. ಈ ಸಲದ ಪಿಕ್ನಿಕ್ ನಿಮಗೊಂದು ವಿಶೇಷ ಅನುಭವ ಕೊಡಲೆಂದು ನಮ್ಮ ಆಸೆ. ಮಕ್ಕಳು, ಪುರುಷರಿಗೆ, ಮಹಿಳೆಯರಿಗೆ ಹಲವಾರು ಆಟಗಳನ್ನು ಏರ್ಪಡಿಸಲಿದ್ದೇವೆ. ವಾಲೀ ಬಾಲ್, ಕ್ರಿಕೆಟ್, ೧೦ ಕೆ ಓಟ... ನಿಮಗೆ ದಿನವೆಲ್ಲ, ಆಟ, ಖುಷಿ, ಮಜಾ. ನೀವು ಬೃಂದಾವನ ಸದಸ್ಯರಾಗಿದ್ದಲ್ಲಿ ಯಾವುದೇ ಪ್ರವೇಶ ಶುಲ್ಕ ಕೊಡಬೇಕಾಗಿಲ್ಲ. ಬನ್ನಿ, ಭಾಗವಹಿಸಿ, ನಿಮ್ಮ ಸ್ನೇಹಿತರನ್ನೂ ಕರೆತನ್ನಿ.

ಮುಂಬರುವ ಸೆಪ್ಟೆಂಬರ್ ತಿಂಗಳಲ್ಲಿ ಸಾಹಿತ್ಯ ಬೃಂದಾವನ ಮತ್ತು ಗಣೇಶ ಹಬ್ಬದ ಕಾರ್ಯಕ್ರಮವಿದೆ. ಅದಕ್ಕಾಗಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇವೆ. ಸಾಹಿತ್ಯ ಬೃಂದಾವನದ ಅಂಗವಾಗಿ, ನ್ಯೂ ಜೆರ್ಸಿ ಕನ್ನಡ ಲೇಖಕರು ಬರೆದಿರುವ ಒಂದು ಪುಸ್ತಕವನ್ನು ಬಿಡುಗಡೆಮಾಡುವ ಕನಸಿದೆ. ನಿಮ್ಮೆಲ್ಲರ ಸಹಕಾರದಿಂದ ಅದು ನನಸಾಗುವುದರಲ್ಲಿ ಸಂದೇಹವಿಲ್ಲ.

ಬೃಂದಾವನದ ಡ್ರೀಮ್ ಪ್ರಾಜೆಕ್ಟ್ - ಬೃಂದಾವನ ಕನ್ನಡ ಕಲಿಸೋಣ, ಬಹಳ ಚೆನ್ನಾಗಿ ನೆಡೆಯುತ್ತಿದೆ. ನಮ್ಮ ಮಕ್ಕಳೆಲ್ಲ ಚೆನ್ನಾಗಿ ಕನ್ನಡ ಓದಲು, ಮಾತಾಡಲು, ಬರೆಯಲು ಕಲಿತರೆ ಅದಕ್ಕಿಂತ ಹೆಚ್ಚಿನ ಸಂತೋಷ ಇನ್ನೇನಿದೆ? ಈ ಕಾರ್ಯದಲ್ಲಿ ಸಾಕಷ್ಟು ಶ್ರಮಿಸುತ್ತಿರುವ ಸ್ವಯಂ ಸೇವಕ ಶಿಕ್ಷಕರಿಗೆ, ಪೋಷಕರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು. ಸ್ವಲ್ಪ ದಿನಗಳಲ್ಲಿ ಹೊಸದಾದ ಪಠ್ಯ ಕ್ರಮ ಬಿಡುಗಡೆ ಮಾಡುತ್ತಿದ್ದೇವೆ. ಅದು ನಿಮ್ಮ ಮಕ್ಕಳು ಇನ್ನೂ ಚೆನ್ನಾಗಿ ಕನ್ನಡ ಕಲಿಯಲು ಸಹಾಯವಾದೀತು. ನಿಮ್ಮ ಮಕ್ಕಳನ್ನು ತಪ್ಪದೆ ಕನ್ನಡ ಶಾಲೆಗೆ ಕರೆತನ್ನಿ, ಸ್ನೇಹಿತರಿಗೂ ತಿಳಿಸಿ.

ನಿಮ್ಮ ಬೃಂದಾವನವಾಣಿ ಸುಂದರವಾಗಿ ಮೂಡಿ ಬರುತ್ತಿದೆ. ಅದಕ್ಕಾಗಿ ಶ್ರಮಿಸುತ್ತಿರುವ ಸಂಪಾದಕ ವರ್ಗಕ್ಕೆ ಅಭಿನಂದನೆಗಳು.

ನಿಮ್ಮೆಲ್ಲರ ಸಹಯೋಗ, ಸಹಕಾರವೇ ನಮ್ಮ ಚೈತನ್ಯ. ಮುಂಬರುವ ಕಾರ್ಯಕ್ರಮಗಳಲ್ಲಿ ಭೇಟಿಯಾಗೋಣ.

ಡಾ. ಅಶೋಕ್ ಕಟ್ಟಿಮನಿ

ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ.


Copyright © KCO – Brindavana

ಸಂಚಿಕೆ
೧೦
ಮೇ, ೨೦೧೭



ಹಿನ್ನೋಟ

## ವಸಂತೋತ್ಸವ



ಅನುರಾಧ ದೀಪಕ್

**ಕನ್ನಡ** ಕಲಾಭಿಮಾನಿಗಳಿಗೆ ನಮಸ್ಕಾರ,

ಏಪ್ರಿಲ್ ೮ ೨೦೧೭ ರಂದು ಬೃಂದಾವನ ಕನ್ನಡ ಕೂಟದ ಅಭಿಮಾನಿ ತಂಡ ಏರ್ಪಡಿಸಿದ್ದ ವಸಂತೋತ್ಸವ ಕಾರ್ಯಕ್ರಮ ಹೊಸದೊಂದು ದಾಖಲೆಯನ್ನೇ ಸಾಧಿಸಿದೆ. ಹೈಸ್ಕೌನ್ ಶಾಲಾ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಪ್ರಥಮ ಬಾರಿಗೆ, ೮೦೦ಕ್ಕೂ ಹೆಚ್ಚು ನ್ಯೂಜೆರ್ಸಿ ಕನ್ನಡಿಗರು ಒಂದೆಡೆ ಸೇರಿ ಯುಗಾದಿ ಹಬ್ಬವನ್ನು ಆಚರಿಸಿದ್ದು. ಒಂದು ಸಾಧನೆಯೇ ಸರಿ!
ಮಧ್ಯಾಹ್ನ ೧ಗಂಟೆಯಿಂದ ರಾತ್ರಿ ೮ ಗಂಟೆಯವರಗೆ ಸತತವಾಗಿ ೧೭೫ಕ್ಕೂ ಹೆಚ್ಚು ಸ್ಥಳೀಯ ಕನ್ನಡಾಭಿಮಾನಿ ಕಲಾವಿದರ ಸಂಗೀತ, ನೃತ್ಯ, ನಾಟಕಗಳು ಪ್ರದರ್ಶನಗೊಂಡವು. ಬಹಳಷ್ಟು ಶ್ರಮಪಟ್ಟು, ತಮ್ಮ ನಿರತ ಕೆಲಸಗಳ ಮಧ್ಯೆ ಸಮಯವನ್ನು ಮಾಡಿಕೊಂಡು ಅಭ್ಯಾಸ ಮಾಡಿ, ನಿಗದಿತ ಸಮಯದಲ್ಲಿ ಸಜ್ಜಾದ ರಂಗಮಂಚದ ಮೇಲೆ ಮಾಡಿದ ಪ್ರದರ್ಶನಗಳು ಶ್ಲಾಘನೀಯ.

ಶ್ರೀ ಯೋಗೇಂದ್ರ ಭಟ್ ಅವರು ಗಣಪತಿ ಪೂಜೆ ಮತ್ತು ಹೊಸ ವರುಷ ಹೇವಿಳಂಬಿ ಸಂವತ್ಸರ ಪಂಚಾಂಗ ಶ್ರಾವಣ ಮಾಡಿ ಕಾರ್ಯಕ್ರಮ ಸುಸೂತ್ರವಾಗಿ ನೆಡೆಯಲಿ ಎಂದು ಶುಭ ಹಾರೈಸಿದರು. ಡಾ.ಎಂ. ಜಿ. ಪ್ರಸಾದ್ ಅವರು ಯುಗಾದಿ ಹಬ್ಬದ ವಿಶೇಷತೆಯ ಬಗ್ಗೆ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟಿದ್ದು ವಸಂತೋತ್ಸವ ಕಾರ್ಯಕ್ರಮವನ್ನು ಮುಂದುವರಿಸಲು ನಾಂದಿಯಾಯಿತು.

ಬೃಂದಾವನ ಕನ್ನಡ ಶಾಲೆಯ ಮಕ್ಕಳ - ಕಿತ್ತೂರು ಚೆನ್ನಮ್ಮ, ವಚನ ಸಾಹಿತ್ಯ, ದಾಸ ಸಾಹಿತ್ಯ, ನಗುವುದೋ ಅಳುವುದೋ..ಮತ್ತು ಇತರ ಸಂಸ್ಥೆಗಳ ನೂರಕ್ಕೂ ಹೆಚ್ಚು ಕನ್ನಡ ಮಕ್ಕಳ, ನೃತ್ಯ, ಮಾತು, ಅಭಿನಯ, ಹಾಡುಗಳು ಕಣ್ಣ ಮುಂದೆ ಕಟ್ಟಿದಂತಿವೆ. ಇವುಗಳೊಂದಿಗೆ ನಮ್ಮ ಸ್ಥಳೀಯ ಕನ್ನಡ ಕಲಾವಿದರ ಹಲವಾರು ಕಾರ್ಯಕ್ರಮಗಳು ಮನಸೂರೆಗೊಂಡವು.

ಈ ಬಾರಿಯ ವಸಂತೋತ್ಸವ ಕಾರ್ಯಕ್ರಮದ ಮುಖ್ಯ ಆಕರ್ಷಣೆ ಮತ್ತು ವಿಶೇಷ ಮೆರಗನ್ನು ನೀಡಿದ್ದು ನಮಗಾಗಿ ಬೆಂಗಳೂರಿನಿಂದ ಅಮೇರಿಕದವರೆಗೆ ಬಂದು, ನಮ್ಮೊಂದಿಗೆ ಒಬ್ಬರಾಗಿ, ಬಹಳ ಸಂತೋಷದಿಂದ ಪಾಲ್ಗೊಂಡಂತಹ ಕಲಾವಿದರು.

ಕನ್ನಡ ಚಿತ್ರರಂಗದಲ್ಲಿ ನವರಸನಾಯಕ ನಟ ಎಂದು ಹೆಸರು ಮಾಡಿರುವ ನಮ್ಮೆಲ್ಲರ ನೆಚ್ಚಿನ ನಟ ಶ್ರೀ ಜಗ್ಗೇಶ್ ರವರ ಮನರಂಜನೆ, ಅನುಭವದ ಮಾತು, ಮಿಮಿಕ್ರಿ, ಭಾಗ್ಯದ ಲಕ್ಷ್ಮಿ ಬಾರಮ್ಮ ಹಾಡಿಗೆ ಪ್ರೇಕ್ಷಕರಿಂದ ಚಪ್ಪಾಳೆಗಳ ಸುರಿಮಳೆಯಾಯಿತು.

ಕರ್ನಾಟಕದ ಹೆಸರಾಂತ ಹಿನ್ನೆಲೆ ಗಾಯಕರಲ್ಲಿ ಒಬ್ಬರಾದ, ಗಾನ ಕೋಗಿಲೆ ಎಂದೇ ಪ್ರಖ್ಯಾತರಾಗಿರುವ ಶ್ರೀಮತಿ ಬಿ.ಆರ್.ಛಾಯಾರವರು, ಶ್ರೀಪದ್ಮಪಾಣಿಯವರೊಂದಿಗೆ ನೆಡೆಸಿಕೊಟ್ಟ ಸಂಗೀತ ಕಾರ್ಯಕ್ರಮ, ಅವರ "ಹಿಂದುಸ್ಥಾನವು ಎಂದೂ ಮರೆಯದ .." ಎಂಬ ಹಾಡಿನಂತೆ ಎಂದಿಗೂ ಅಚ್ಚಳಿಯದೆ ನೆನಪಿನಲ್ಲಿ ಉಳಿಯಿತು. ಅವರು ಹಾಡಿದ ನಿನ್ನಂತ ಅಪ್ಪ ಇಲ್ಲಾ ಹಾಡಿಗೆ ಶ್ರೀ ಸಿಂಹಾದ್ರಿ ಸಂತೇಬೆನ್ನೂರು ಅವರು ಧ್ವನಿಗೂಡಿಸಿದರು ಮತ್ತು ಸುಮಾರು ೩೦ ಕ್ಕೂ ಹೆಚ್ಚು ಅಪ್ಪ ಮಗಳ ಜೋಡಿ ಹೆಜ್ಜೆಹಾಕಿದ್ದು ಬಹಳ ವಿಶೇಷವಾಗಿತ್ತು.ಇಷ್ಟೇ ಅಲ್ಲದೆ ಮೂಡಲ್ ಕುಣಿಗಲ್ ಕೆರೆ ಮತ್ತು ಭಾಗ್ಯದ ಬಳೆಗಾರ ಜಾನಪದ ಹಾಡುಗಳಿಗೆ ಬೃಂದಾವನ ಬೆಡಗಿಯರು ಸುಂದರವಾಗಿ ಅಲಂಕಾರ ಮಾಡಿಕೊಂಡು ನೃತ್ಯ ಮಾಡಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಸ್ಥಳೀಯ ಗಾಯಕ ಗಾಯಕಿಯರು ಹಾಡಿದ ಹಾಡುಗಳು ಕೇಳುಗರಿಗೆ ಇಂಪನ್ನು ನೀಡಿತು. ಈ ಕಾರ್ಯಕ್ರಮದ ತಯಾರಿಗಾಗಿ ಸಹಾಯ ಮಾಡಿದ ಪ್ರಸನ್ನ ಕುಮಾರ ಮತ್ತು ಉಷ ಪ್ರಸನ್ನ ಅವರಿಗೆ ನಮ್ಮ ಹೃದಯಪೂರ್ವಕ ವಂದನೆಗಳು.

ಒಟ್ಟಾರೆ ಬೃಂದಾವನ ಅಭಿಮಾನಿ ತಂಡದ ಈ ವಸಂತೋತ್ಸವ ಕಾರ್ಯಕ್ರಮ - ಯುಗಾದಿ ಹಬ್ಬ, ಎಂದೂ ಮರೆಯಲಾರದ ಅನುಭವ. ೮೦೦ ಹೆಚ್ಚು ನ್ಯೂಜೆರ್ಸಿ ಕನ್ನಡಿಗರೆಲ್ಲ ಒಂದೆಡೆ ಸೇರಿ ಯುಗಾದಿ ಹಬ್ಬ ಆಚರಿಸಿದ್ದು ಒಂದು ಸಾಧನೆ. ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣ ನೂರಾರು ಸ್ವಯಂ ಕಾರ್ಯಕರ್ತರ ನಿಸ್ವಾರ್ಥ ದುಡಿಮೆ, ನಮ್ಮೆಲ್ಲಾ ಕಾರ್ಯಕ್ರಮದಲ್ಲೂ ಸಹಾಯ ನೀಡುವ ಪ್ರಾಯೋಜಕರು.

ವಸಂತೋತ್ಸವ ಕಾರ್ಯಕ್ರಮಕ್ಕೆ ಬಂದು, ವಿನಯದಿಂದ ಕೂತು ಕಾರ್ಯಕ್ರಮಗಳನ್ನು ವೀಕ್ಷಿಸಿದ ಎಲ್ಲಾ ಕನ್ನಡ ಅಭಿಮಾನಿಗಳಿಗೆ, ಬೃಂದಾವನ ಕನ್ನಡ ಕೂಟದ ಪರವಾಗಿ ಅಭಿಮಾನಿ ತಂಡದ ತುಂಬು ಹೃದಯದ ಕೃತಜ್ಞತೆಗಳು.

ಇನ್ನೂ ಉತ್ತಮ ಕನ್ನಡ ಕಾರ್ಯಕ್ರಮಗಳನ್ನು ಸತತವಾಗಿ ನೆಡಿಸಿಕೊಂಡು ಹೋಗಲು ನಿಮ್ಮೆಲ್ಲರ ಸಹಾಯ, ಸಹಕಾರ ಬಹಳ ಮುಖ್ಯ. ದಯವಿಟ್ಟು ಹೆಚ್ಚು ಸಂಖ್ಯೆಯಲ್ಲಿ ನಿಮ್ಮ ಕುಟುಂಬ ಮತ್ತು ಸ್ನೇಹಿತರೊಂದಿಗೆ ಬಂದು ಪಾಲ್ಗೊಳ್ಳಿ.

ಎಲ್ಲಿದ್ದರೇನು ಹೇಗಿದ್ದರೇನು ಆಡೋಕೆ ಒಂದೇ ಭಾಷೆ ಕನ್ನಡ. ಕನ್ನಡಿಗರೆಲ್ಲ ಯಾವುದೇ ಜಾತಿ, ಮತ ಭೇದಗಳಿಲ್ಲದೆ ಒಂದಾಗಬೇಕು, ನಮ್ಮ ಆಚಾರ ವಿಚಾರ ಸಂಸ್ಕೃತಿ ಮೆರೆಸಿ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ಕೊಡಬೇಕು ಎನ್ನುವ ಸದುದ್ದೇಶದಿಂದ ಕೆಲವೇ ಸದಸ್ಯರುಗಳು ಪ್ರಾರಂಭ ಮಾಡಿದ ಈ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಈ ಮರವನ್ನು ಕಾಪಾಡುವ ಜವಾಬ್ದಾರಿ ಇಲ್ಲಿ ನೆಲೆಸಿರುವ ಎಲ್ಲಾ ಕನ್ನಡಿಗರದ್ದು.

ಮುಖತಹ ಮತ್ತೆ ಭೇಟಿಯಾಗೋಣ.

**- ಸಿರಿಗನ್ನಡಂಗಲ್ಗೆ-**








Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಹಿನ್ನೋಟ











Copyright © KCO – Brindavana


ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

# ನವರಸ ನಾಯಕನೊಡನೆ ಯುಗಾದಿ ಸಂಭ್ರಮ



ರಾಘವೇಂದ್ರ ಕುಂದಲಗುರ್ಕಿ

ನವರಸ ನಾಯಕ, ಕಾಮಿಡಿ ಕಿಂಗ್  ಹಲವಾರು ಬಿರುದುಗಳೊನ್ನೊತ್ತ ನಮ್ಮೆಲ್ಲರ ಪ್ರೀತಿಯ ಜಗ್ಗೇಶ್ ನ್ಯೂಜೆರ್ಸಿಯ ಬೃಂದಾವನದ ಯುಗಾದಿಯ ವಸಂತೋತ್ಸವಕ್ಕೆ ಆಗಮಿಸುವರೆಂದು ತಿಳಿದು ಬಹಳ ಸಂತೋಷದಿಂದ ಜನ ಸಂಭ್ರಮ ನೆರೆದಿತ್ತು. ಜಗ್ಗೇಶ್ ಕನ್ನಡ ಚಿತ್ರರಂಗ ಕಂಡ ವಿಶೇಷ ನಟ. ಅವರ ಹಾವಭಾವ, ಡೈಲಾಗ್ ಹೇಳುವ ರೀತಿಯಿಂದ, ಅವರು ಕನ್ನಡದ ಮನೆ ಮಾತಾಗಿದ್ದಾರೆ. ತರ್ಲೆನನ್ಮಗ , ಸರ್ವರ್ ಸೋಮಣ್ಣ , ಮಠ, ಎದ್ದೇಳು ಮಂಜುನಾಥ ಇನ್ನು ಹಲವಾರು ಚಿತ್ರಗಳಲ್ಲಿ ಅವರದೇ ಆದ ಒಂದು ವಿಶೇಷ ಛಾಪು ಮೂಡಿಸಿದ್ದಾರೆ. ಒಬ್ಬ ಹಾಸ್ಯನಟ, ನಾಯಕನಟ, ನಿರ್ದೇಶಕ ಹಾಗು ನಿರ್ಮಾಪಕನಾಗಿ ಹಲವಾರು ಚಲನಚಿತ್ರ ವಿಭಾಗ ಗಳಲ್ಲಿ ತಮ್ಮ ಕೌಶಲ್ಯ ಮೆರೆದಿದ್ದಾರೆ. ಕಲಾಕಾರನ ಬಣ್ಣದು ಬದುಕು, ತೆರೆಯ ಮೇಲೆಯೆ ಚಿತ್ರಣ ನಿಜ ಜೀವನದಲ್ಲಿ ಮುಖಾಮುಖಿಯಾದಾಗ ಕೆಲವೊಮ್ಮೆ ಸಂಪೂರ್ಣ ಭಿನ್ನವಾಗಿ ಕಾಣಿಸುವುದು ಸಹಜ. ವಿಶೇಷ ಮಾನ್ಯರಿಸಂ ನಟನೆಯ ಜಗ್ಗೇಶ್ ಅವರೊಡನೆ ಒಡನಾಟ, ಅವರ ಭಕ್ತಿ ಸಾರ ವಿಷಯಗಳು, ಹಿಂದೂ ಸಂಸ್ಕೃತಿ ವಿಷಯಗಳು, ತತ್ವದಿಂದ - ಹಾಸ್ಯಕ್ಕೆ ಸರಾಗವಾಗಿ ಬರುವ ರೀತಿ, ಕನ್ನಡ ಭಾಷಾ ಪ್ರಯೋಗ ಹಲವಾರು ಜನರನ್ನು ವಿಸ್ಮಯಗೊಳಿಸಿತು.  ಒಬ್ಬ ರಾಜಕೀಯ ಧುರೀಣರಾದ ನವರಸ ನಾಯಕರೊಡನೆ ಕಳೆದ ಯುಗಾದಿ ಮರೆಯಲಾರದ ನೆನಪನ್ನು ಉಳಿಸಿತು. ಮಾಜಿ ಶಾಸಕನಾಗಿ, ರಾಜಕೀಯದ ಅಖಾಡದಲ್ಲಿರುವ ಜಗ್ಗೇಶ್ ತಮ್ಮ ಭಕ್ತಿಯ ಚಿಂತನೆ, ಗುರುಗಳ ಅನುಗ್ರಹ, ಬೆಂಗಳೂರಿನ ಬಗ್ಗೆ ಹಲವಾರು ವಿಷಯಗಳನ್ನು ಹಂಚಿಕೊಂಡರು, ಅವರ ಮಾತುಗಳಲ್ಲೆ ಕೇಳೋಣ ಬನ್ನಿ.



***೧. ನಿಮ್ಮ ಅನುಭವದಲ್ಲಿ ಭಕ್ತಿಯ ಚಿಂತನೆ***

**ಜಗ್ಗೇಶ್:** ನಾನೊಬ್ಬ ಸಾಮನ್ಯರಲ್ಲಿ ಸಾಮನ್ಯ ಭಕ್ತ. ನಮ್ಮ ತಾಯಿಯವರು ನನಗೆ ಹೇಳಿಕೊಟ್ಟ ಪಾಠ "ಅರ್ಪಣಾ ಮನೋಭಾವದಿಂದ ಆತ್ಮವನ್ನು ಶುದ್ಧಿಯಾಗಿ ಇಟ್ಟುಕೊಂಡು ದೇವರು ಎಂಬ, ನಮ್ಮ ಹಿರಿಯರು ಹೇಳಿಕೊಟ್ಟ ಭಯವನ್ನು ನಂಬಿ ಮುಂದೆ ಹೋಗು, ನೀನು ಎಲ್ಲದರಲ್ಲೂ ಗೆಲ್ಲುತ್ತಿಯ". ಭಕ್ತಿ ಎಂದರೇನು? ಭಕ್ತಿ ಎಲ್ಲಿರುತ್ತದೆಯೋ ಅಲ್ಲಿ ಒಂದು ರೀತಿಯ ಭಯ ಹುಟ್ಟಿಕೊಳ್ಳುತ್ತೆ ಮತ್ತು ಆ ಭಯ ಬಂದರೆ ಮನುಷ್ಯ ತಂತಾನೇ ಪರಿಶುದ್ಧನಾಗಿ ಜೀವನದಲ್ಲಿ ಮುಂದಿನ ಹೆಜ್ಜೆ ಇಡುತ್ತಾನೆ.

***೨. ನಿತ್ಯಜೀವನದಲ್ಲಿ ರಾಮಯಣದ ಜೀವನದ ತತ್ವ ?***

**ಜಗ್ಗೇಶ್:** ಮನುಷ್ಯನ ದೇಹವೇ ರಾಮಯಣ, ಹೃದಯವನ್ನು ರಾಮನಿಗೆ ಕೊಡಬಹುದು, ಚಿಂತನೆಯನ್ನು ರಾವಣನಿಗೆ ಕೊಡಬಹುದು. ಇವರ ಮಧ್ಯೆ ನಿರಂತರ ಯುದ್ಧ ನಡೆಯುತ್ತಿರುತ್ತದೆ,ಇದರಲ್ಲಿ ಮನಸ್ಸು ಗೆದ್ದಾಗ ಅಂದರೆ ಕೆಟ್ಟ ಆಲೋಚನೆಗಳು ಗೆದ್ದಾಗ ಅದು ರಾವಣನ ಗೆಲವು, ಹೃದಯ ಗೆದ್ದಾಗ ಅಂದರೆ ಒಳ್ಳೆಯ ಚಿಂತನೆ ಗೆದ್ದಾಗ, ಅದು ರಾಮನ ಗೆಲವು.




***೩.ನೀವು ಮಂತ್ರಾಲಯ ಪ್ರಭುಗಳಾದ ಶ್ರೀ ರಾಘವೇಂದ್ರ ಸ್ವಾಮಿಯ ಭಕ್ತರು. ಅವರು ನಿಮ್ಮ ಜೀವನದ ಮೇಲೆ ಬೀರಿದ ಪ್ರಭಾವ ಏನು?***

**ಜಗ್ಗೇಶ್:** ನನ್ನ ಹೆಂಡತಿ ಪರಿಮಳ, ರಾಯರ ಗ್ರಂಥ ಪರಿಮಳ(ಪರಿಮಳಾ ಚಾರ್ಯರು), ಮಕ್ಕಳು ಗುರುರಾಜ, ಯತಿರಾಜ. ಮೊಮ್ಮಗ ಅರ್ಜುನ. ಎಲ್ಲವೂ ಕಾಕತಾಳೀಯ. ಇಂದಿನ ನನ್ನ ಉನ್ನತ ಮಟ್ಟಕ್ಕೆ ಅವರ ಅನುಗ್ರಹವೆ ಕಾರಣ.

***೪. ಕನ್ನಡದ ಇತಿಹಾಸ, ಕನ್ನಡತನ ,ಅನಿವಾಸಿ ಕನ್ನಡಿಗರೊಡನೆ ಕಳೆದ ಕ್ಷಣ... ನಿಮ್ಮ ಅನುಭವ***

**ಜಗ್ಗೇಶ್:** ಕನ್ನಡ ಇತಿಹಾಸದ ಎಲ್ಲಾ ದ್ರಾವಿಡ ಭಾಷೆಗಳಲ್ಲಿ ಅತ್ಯಂತ ಪ್ರಾಚೀನವಾದ ಭಾಷೆ, ಹಳೆಗನ್ನಡ, ನಡುಗನ್ನಡ ಹಾಗು ನವ್ಯಗನ್ನಡ. ಅಮೇರಿಕಾದಲ್ಲಿ ಜೀವನ ಸಂಸ್ಕೃತಿ ಬೇರೆಯಾದರೂ, ಮದುವೆ ಮುಂಚೆ ಮಕ್ಕಳು, ಲಿವ್ ಇನ್ ರಿಲೇಷನ್ಶಿಪ್ ಇಲ್ಲಿ ಕಾಮನ್ ಆದರೂ, ಜನರೆಲ್ಲಾ ಸೇರಿ ಮಾಡುವ ಈ ಯುಗಾದಿ ಹಬ್ಬ, ಇಲ್ಲಿ ಜಾತಿ, ಮತ ಭೇದ ಭಾವ ಇಲ್ಲ ಅನ್ನುವುದನ್ನು ತೋರಿಸುತ್ತದೆ. ಎಲ್ಲಾ ಅನಿವಾಸಿ ಕನ್ನಡಿಗರಿಗೂ ಒಂದೇ ಜಾತಿ, ಅದೇ ಕನ್ನಡ ಜಾತಿ.

***೫. ನೀವು ಬಿಜೆಪಿಯಲ್ಲಿ ಶಾಸಕರಾಗಿದ್ದವರು ,ಈಗ ಪ್ರಧಾನ ಮಂತ್ರಿ ಶ್ರೀ ಮೋದಿ ಅವರ ಬಗ್ಗೆ ಕೆಲವು ಮಾತುಗಳು.***

**ಜಗ್ಗೇಶ್:** ರಾಷ್ಟ್ರಕ್ಕೆ ಹೊಸ ಯಜಮಾನ ಬಂದ ಮೇಲೆ ದೇಶದಲ್ಲೆಡೆ ಬದಲಾವಣೆಯ ಗಾಳಿ ಬೀಸತೊಡಗಿದೆ. ನಮ್ಮ ಹಳೆಯ ಗಾದೆ "ಯಜಮಾನ ಇಲ್ಲದ ಮನೆ, ಮನೆ ಅಲ್ಲ, ಮಜ್ಜಿಗೆ ಇಲ್ಲದ ಊಟವಿಲ್ಲ" ಈಗ ಸಂಪೂರ್ಣ ಅನ್ವಯವಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ಯಜಮಾನ ತಂದ ವರ್ಚಸ್ಸು, ರಾಷ್ಟ್ರಕ್ಕೆ ಹೆಚ್ಚಿದ ಗೌರವ ಅದ್ಭುತ. ಅವರ ಡಿಜಿಟಲ್ ಕ್ರಾಂತಿಯಲ್ಲಿ ಇಂದು ತರಕಾರಿ ಮಾರುವವರು, ಆಟೋದವರು ಎಲ್ಲರೂ ಭಾಗಿಗಳು. ಇನ್ನು ಹಲವಾರು ವರ್ಷ ಆದ ಮೇಲೆ, ಅಮೆರಿಕದಲ್ಲಿರುವ ಎಲ್ಲಾ  ಸೌಲಭ್ಯ ಭಾರತದಲ್ಲಿ ಸಿಗಲಿದೆ, ಜನರಲ್ಲಿ ಇನ್ನು ಹೆಚ್ಚಿನ ಶಿಸ್ತು ಮೂಡಿ ಜನಜೀವನ ಸುಧಾರಿಸುವುದರಲ್ಲಿ ಎರಡು ಮಾತಿಲ್ಲ.

ಜಗ್ಗೇಶ್ ಅವರೊಂದಿಗೆ ಸಮಯ ಕಳಿಯುವುದು ಗೊತ್ತಾಗುವುದೇ ಇಲ್ಲಾ, ಬಂದಿದ್ದ ಎಲ್ಲರೊಡನೆ ಸೆಲ್ಫಿ, ಫೋಟೋಗಳಿಗೆ ಮುಖಮಾಡಿ, ವಿವಿಧ ನಟರ ಮಿಮಿಕ್ರಿ ಮಾಡಿ, ಅಭಿಮಾನಿಗಳ ಡೈಲಾಗಗಳಿಗೆ ಚೆಪ್ಪಾಳೆ ತಟ್ಟಿ ಎಲ್ಲರಿಗೂ ಯುಗಾದಿಯ ಮರೆಯದ ಅನುಭವ ಕೊಟ್ಟರು.




Copyright © KCO – Brindavana

ಸಂಚಿಕೆ
೧೦
ಮೇ, ೨೦೧೭




# ಜಗದ್ಗುರು ಶ್ರೀ ಭಗವದ್ ರಾಮಾನುಜ ಆಚಾರ್ಯರ ಜೀವನ ಮತ್ತು ಸಂದೇಶ

## (೧೦೦೦ನೇ ವರ್ಷದ ಜನ್ಮ ದಿನಾಚರಣೆಯ ಶುಭ ಸಂದರ್ಭದಲ್ಲಿ ಒಂದು ಕಿರು ನೋಟ)



ಎಂ.ಜಿ. ಪ್ರಸಾದ್

**ಪೀಠಿಕೆ**



ಭಗವದ್ ರಾಮಾನುಜ ಆಚಾರ್ಯರು ಕ್ರಿ ಶ ೧೦೧೭ ರಿಂದ ೧೧೩೭ ರವರೆಗೆ ೧೨೦ ವರ್ಷಗಳ ಕಾಲ ಜೀವಿಸಿದ್ದರು. ಅವರು ತಮಿಳುನಾಡಿನ ಚೆನ್ನೈ ಬಳಿಯಿರುವ ಶ್ರೀ ಪೆರಂಬುದೂರಿನಲ್ಲಿ ಜನಿಸಿದರು. ಅವರ ತಾಯಿ ಶ್ರೀಮತಿ ಕಾಂತಿಮತಿ ಮತ್ತು ತಂದೆ ಶ್ರೀ ಆಸುರೀ ಕೇಶವ ಸೋಮಯಾಜಿಗಳು. ಆಚಾರ್ಯರ ತಂದೆ ತಾಯಿಗಳಿಬ್ಬರೂ ಸನಾತನ ಧರ್ಮನಿಷ್ಠರಾಗಿದ್ದುದಲ್ಲದೆ, ಅವರ ತಂದೆಯವರು ಸನಾತನ ಧರ್ಮದಲ್ಲಿ ಮತ್ತು ಯಜ್ಞ ಯಾಗಾದಿಗಳ ಆಚರಣೆಗಳಲ್ಲಿ ಅತ್ಯಂತ ಜ್ಞಾನಿಗಳೂ ಆಗಿದ್ದರು. ೨೦೧೭ರ ಈ ವರ್ಷ ಭಗವದ್ ರಾಮಾನುಜ ಆಚಾರ್ಯರ ಸಹಸ್ರ ವರ್ಷಗಳ ಜನ್ಮ ವರ್ಷಾಚರಣೆಯನ್ನು ವಿಶ್ವದಾದ್ಯಂತ ಆಚರಿಸುತ್ತಿದ್ದೇವೆ. ಶ್ರೀ ರಾಮಾನುಜ ಆಚಾರ್ಯರು ಸನಾತನ ಧರ್ಮದ ಒಬ್ಬ ಮಹಾನ್ ಸಂತರೆನ್ನುವುದು ಜಗದಾದ್ಯಂತವಾಗಿ ಪ್ರಸಿದ್ಧವಾದ ವಿಷಯ. "ಆಚಾರ್ಯ" ಎಂಬ ಶಬ್ದವನ್ನು ಈ ಕೆಳಗಿನ ಶ್ಲೋಕದಲ್ಲಿ ವರ್ಣಿಸಲಾಗಿದೆ.

**ಆಚಿನೋತಿ ಚ ಶಾಸ್ತ್ರಾರ್ಥಾನ್ ಆಚಾರೇ ಸ್ಥಾಪಯತ್ಯಪಿ।**
**ಸ್ವಯಮಾಚರತೇ ಯಸ್ತು ತಮಾಚಾರ್ಯಮ್ ಪ್ರಚಕ್ಷತೇ॥**

ಅರ್ಥಾತ್ "ಆಚಾರ್ಯ ಎಂಬುವವರು ವೇದ ಶಾಸ್ತ್ರಗಳಲ್ಲಿ ಪರಿಣಿತರಾಗಿರುವುದಷ್ಟೇ ಅಲ್ಲದೇ ಶಾಸ್ತ್ರಗಳನ್ನು ಸಮರ್ಪಕವಾಗಿ ವಿವರಿಸಿ ಮನದಟ್ಟು ಮಾಡುತ್ತಾರೆ. ಪರತತ್ವದ ದಾರಿಯಲ್ಲಿ ತಾವು ಸಂಪೂರ್ಣವಾಗಿ ನಡೆಯುವುದಲ್ಲದೆ, ತಮ್ಮ ಅನುಯಾಯಿಗಳನ್ನೂ ಅಧ್ಯಾತ್ಮ ಮಾರ್ಗದಲ್ಲಿ ಕರೆದೊಯ್ದು, ಆ ಮಾರ್ಗದಲ್ಲಿ ನೆಲೆಗೊಳ್ಳಿಸುತ್ತಾರೆ". ಭಗವದ್ ರಾಮಾನುಜ ಆಚಾರ್ಯರು ಈ ಶ್ಲೋಕದ ನಿಜವಾದ ಮತ್ತು ಪೂರ್ಣ ಅರ್ಥದಲ್ಲಿ "ಆಚಾರ್ಯ"ರಾಗಿದ್ದರು. ಜಗದ್ಗುರು ಎಂದರೆ ಜಗತ್ತಿನ ಯಾವುದೇ ಸಾಧಕನಿಗೆ ಮಾರ್ಗದರ್ಶನ ನೀಡುವುದು. ಭಗವದ್ ಎಂದರೆ ಭಗವಂತನ ಸದಾ ಸಂಬಂಧ ಹಾಗೂ ಶಕ್ತಿಯಿಂದ ಕಾರ್ಯ ಮಾಡುವವರು.

**ಆಚಾರ್ಯರ ಜೀವನ**

ಬಾಲ್ಯದಿಂದಲೇ ಶ್ರೀ ರಾಮಾನುಜಾಚಾರ್ಯರು ಅತ್ಯಂತ ಪ್ರತಿಭಾನ್ವಿತರಾಗಿದ್ದರಲ್ಲದೇ, ಅತ್ಯಂತ ಮೃದು ಮನಸ್ಸಿನವರಾಗಿದ್ದರು. ಮಹಾ ಜ್ಞಾನಿಗಳಾಗಿದ್ದ ಅವರ ತಂದೆಯವರನ್ನೂ ಕೂಡಿ ಅವರು ಅನೇಕ ಮಹನೀಯರಿಂದ ಶಿಕ್ಷಣ ಪಡೆದರು. ಸಂಪ್ರದಾಯಸ್ಥ ವಾತಾವರಣದಲ್ಲಿ ಬೆಳೆದರೂ ಕೂಡಾ, ಅವರು ತುಂಬಾ ವಿಶಾಲ ಮನೋಭಾವದವರಾಗಿದ್ದರು. ಪ್ರಾಮಾಣಿಕ ಶ್ರದ್ಧೆ ಮತ್ತು ಭಕ್ತಿಯಿಂದ ಭಗವಂತನನ್ನು ಪೂಜಿಸುವವರನ್ನು ಅವರು ಯಾರೇ ಆಗಲಿ ಗೌರವಿಸಬೇಕೆಂದೂ, ಹಾಗೆಯೇ ಕೇವಲ ಪುಸ್ತಕಜ್ಞಾನ ಪಡೆದು ಅಹಂಕಾರ ತುಂಬಿದವರನ್ನಲ್ಲವೆಂದೂ ಅವರು ಭಾವಿಸಿದ್ದರು. ಶ್ರೀ ರಾಮಾನುಜಾಚಾರ್ಯರು ಅಧ್ಯಯನದಲ್ಲಿ ತುಂಬಾ ಆಸಕ್ತಿಯುಳ್ಳವರಾಗಿದ್ದರು. ಆಗಿನ ಕರ್ಮಠ ಆಚರಣೆಗಳ ಕಾಲದಲ್ಲಿಯೇ ಅವರು ಬ್ರಾಹ್ಮಣರಲ್ಲದ ಶ್ರೀ ಕಾಂಚೀಪೂರ್ಣರು ಎಂಬ ಪ್ರಮುಖ ಗುರುಗಳೊಬ್ಬರ ಬಳಿ ಅಧ್ಯಯನ ಮಾಡಿದರು. ಪ್ರಾಥಮಿಕ ಅಭ್ಯಾಸದ ನಂತರ, ಐವರು ಶ್ರೇಷ್ಠ ಗುರುಗಳ ಬಳಿ ಶಾಸ್ತ್ರಾಧ್ಯಯನ ಮಾಡಿ 'ಆಚಾರ್ಯ' ರಾದರು. ತಮ್ಮ ಜೀವನದ ಪೂರ್ತಿ ದಯೆ, ಅನುಕಂಪ ಮತ್ತು ಕರುಣೆಗಳ ಸಾಕಾರ ಮೂರ್ತಿಯಾಗಿದ್ದರು.

ಶ್ರೀ ರಾಮಾನುಜಾಚಾರ್ಯರ ಜೀವನದಲ್ಲಿ ಅನೇಕಾನೇಕ ಮಹತ್ವಪೂರ್ಣ ಘಟನೆಗಳು ನಡೆದವು. ಈ ಸಂಕ್ಷಿಪ್ತ ಲೇಖನದಲ್ಲಿ ಕೆಲವನ್ನು ಮಾತ್ರ ನೀಡಿದೆ. ಶ್ರೀ ರಾಮಾನುಜರು ತಮ್ಮ ಹದಿನಾರನೆಯ ವರ್ಷದಲ್ಲಿ ಆಗಿನ ಹೆಸರಾಂತ ಗುರುಗಳಾದ ಶ್ರೀ ಯಾದವಪ್ರಕಾಶರ ಬಳಿ ವೇದಾಂತ ಶಾಸ್ತ್ರಗಳ ಅಧ್ಯಯನಕ್ಕೆ ಹೋದರು. ಶ್ರೀ ರಾಮಾನುಜರು ಶ್ರದ್ಧಾ ಭಕ್ತಿಗಳಿಂದ ವ್ಯಾಸಂಗ ಮಾಡುತ್ತಾ ಶ್ರೀ ಯಾದವಪ್ರಕಾಶರ ಅಚ್ಚುಮೆಚ್ಚಿನ ಶಿಷ್ಯ ಎನಿಸಿಕೊಂಡರು. ಶ್ರೀ ರಾಮಾನುಜರ ಜೊತೆಗೆ ಅವರ ಚಿಕ್ಕಮ್ಮನ ಮಗನಾದ ಶ್ರೀ ಗೋವಿಂದ ಎಂಬುವವರು ಶಿಷ್ಯರಾಗಿ ಸೇರಿದ್ದರು. ಶ್ರೀ ಗೋವಿಂದನಿಗೆ ಅವನ ಅಣ್ಣನಾದ ಶ್ರೀ ರಾಮಾನುಜರ ಮೇಲೆ ಬಹಳ ಗೌರವ ಹಾಗೂ ಪ್ರೀತಿಯಿದ್ದಿತು.

ಶ್ರೀ ರಾಮಾನುಜರು ಅತಿ ಶ್ರದ್ಧೆಯಿಂದ ಶೀಘ್ರವಾಗಿ ಪಾಠಗಳನ್ನು ಕಲಿತು ಒಪ್ಪಿಸುತ್ತಿದ್ದರ ಜೊತೆಗೆ, ಅವರು ಕಲಿತ ಶಾಸ್ತ್ರವಾಕ್ಯಗಳ ಬಗ್ಗೆ ಸ್ವತಂತ್ರವಾಗಿ ಅವರೇ ಆಳವಾಗಿ ಚಿಂತಿಸುತ್ತಿದ್ದರು. ಅವರು ಸಂಸ್ಕೃತದಲ್ಲಿನ ಶಾಸ್ತ್ರಗಳ ಜೊತೆಗೆ ಹನ್ನೆರಡು ಆಳ್ವಾರರುಗಳು ತಮಿಳಿನಲ್ಲಿ ತಮ್ಮ ಆಧ್ಯಾತ್ಮಿಕ ಅನುಭವ ಹಾಗೂ ಭಗವದ್ಗುಣ ತತ್ವಗಳ ಬಗ್ಗೆ ರಚಿಸಿರುವ ನಾಲಾಯಿರ ದಿವ್ಯ ಪ್ರಬಂಧ ಸಾಹಿತ್ಯವನ್ನು ಅವರ ಇನ್ನೊಂದು ಗುರುಗಳಾದ ಶ್ರೀ ಕಾಂಚೀಪೂರ್ಣರಿಂದ ಕಲಿಯುತ್ತಿದ್ದರು. ಹೀಗಾಗಿ ಕೆಲವು ಬಾರಿ ಶ್ರೀ ರಾಮಾನುಜರಿಗೆ ಶ್ರೀ ಯಾದವಪ್ರಕಾಶರು ಸಂಸ್ಕೃತ ಶಾಸ್ತ್ರಗಳಿಗೆ ನೀಡುತ್ತಿದ್ದ ವಿವರಣೆ ಒಪ್ಪಿಗೆ ಆಗುತ್ತಿರಲಿಲ್ಲ.

ಒಮ್ಮೆ ತೈತ್ತಿರಿಯೋಪನಿಷತ್ತಿನ ಒಂದು ವಾಕ್ಯ "ಸತ್ಯಂ ಜ್ಞಾನಂ ಅನಂತಂ ಬ್ರಹ್ಮ" ಎನ್ನುವುದಕ್ಕೆ ಶ್ರೀ ಯಾದವಪ್ರಕಾಶರು "ಬ್ರಹ್ಮನೇ ಇರುವುದು, ಅರಿಯುವುದು ಹಾಗೂ ಮಿತಿಯಿಲ್ಲದ ಅನಂತವಾಗಿರುವ ನಿರ್ಗುಣ ಹಾಗೂ ನಿರಾಕಾರ ತತ್ವ. ಬ್ರಹ್ಮ ನಿರ್ಗುಣ ಏಕೆಂದರೆ ಹೇಗೆ ಒಂದು ಹಸುವಿಗೆ ಮುರಿದ ಕೊಂಬು, ಪೂರ್ತಿ ಕೊಂಬು ಹಾಗೂ ಕೊಂಬಿಲ್ಲದಿರುವಿಕೆ ಎಂಬೀ ಮೂರು ಒಟ್ಟಿಗೆ ಇರುವುದು ಸಾಧ್ಯವಿಲ್ಲವೋ ಹಾಗೇ ಬ್ರಹ್ಮನಲ್ಲಿ ಗುಣಗಳಿರುವುದು ಸಾಧ್ಯವಿಲ್ಲ. ಸಗುಣ ಬ್ರಹ್ಮನ ಕಲ್ಪನೆ ಸರಿಯಲ್ಲ" ಎಂದು ವಿವರಣೆ ನೀಡಿದರು.

ಶ್ರೀ ರಾಮಾನುಜರಿಗೆ ಈ ವಿವರಣೆ ಒಪ್ಪಿಗೆಯಾಗಲಿಲ್ಲ. ಆಗ ಅವರು ವಿನಯದಿಂದ "ಗುರುಗಳೇ ಈ ವಾಕ್ಯಕ್ಕೆ ಈ ಅರ್ಥ ವಿವರಣೆ ಸರಿಯಿಲ್ಲವೆಂದು ನನಗೆ ತೋರುತ್ತದೆ" ಎಂದರು. ಅದಕ್ಕೆ ಶ್ರೀ ಯಾದವಪ್ರಕಾಶರು ಆಶ್ಚರ್ಯದಿಂದ ಇದಕ್ಕೆ ನಿನ್ನದೇನು ವಿವರಣೆ ಎಂದರು. ಅದಕ್ಕೆ ಶ್ರೀ ರಾಮಾನುಜರು "ಒಂದು ವಾಕ್ಯಕ್ಕೆ ಅರ್ಥವನ್ನು ನೇರವಾಗಿ ಮಾಡಬೇಕು. ನೇರವಾದ ಅರ್ಥವೇ ಸರಿಯಾದ ಅರ್ಥ" ಎಂದು ಹೇಳಿ, "ಈ ವಾಕ್ಯದಲ್ಲಿ ಬ್ರಹ್ಮ ವಸ್ತುವು ಸತ್ಯ, ಜ್ಞಾನ ಮತ್ತು ಅನಂತ ಎಂದು ಹೇಳಿದೆ. ಇದರಲ್ಲಿ ಬ್ರಹ್ಮ ವಸ್ತುವು ನಿರ್ಗುಣ ಎಂದು ಅರ್ಥ ಬರುವುದಿಲ್ಲ. ಬ್ರಹ್ಮ ವಸ್ತುವು ಇರುವುದಾದರೆ ಅದಕ್ಕೆ ಗುಣಗಳು ಇರಲೇ ಬೇಕು. ಒಂದು ವಸ್ತುವಿಗೆ 'ಇರುವಿಕೆಯೇ' ಗುಣ. ಸತ್ಯ, ಜ್ಞಾನ, ಅನಂತಗಳೆಲ್ಲಾ ಗುಣಗಳೇ. ಅದ್ದರಿಂದ ಬ್ರಹ್ಮವು ನಿರ್ಗುಣವಲ್ಲ, ಸಗುಣ. ಹೇಗೆ ಒಂದೇ ಹೂವಿನಲ್ಲಿ ಬಣ್ಣ, ಮೃದುತ್ವ, ಸುವಾಸನೆಗಳು ಇರುತ್ತವೆಯೋ ಹಾಗೆ. ಹೇಗೆ ಸೂರ್ಯನಲ್ಲಿ ಬೆಳಕು, ಶಾಖ ಇವುಗಳು ಹೊಂದಿಕೊಂಡಿರುವ ಹಾಗೆ ಬ್ರಹ್ಮನಲ್ಲಿ ಸತ್ಯ, ಜ್ಞಾನ ಮತ್ತು ಅನಂತ ಎಂಬೀ ಗುಣಗಳು ನೆಲೆಸಿವೆ." ಎಂದು ಹೇಳಿದರು.ಈ ರೀತಿಯಾದ ಹಿಂದೆಂದೂ ತಾವು ಕೇಳದ ಅರ್ಥವನ್ನು ಕೇಳಿದ ಮೇಲೆ ಶ್ರೀ ಯಾದವಪ್ರಕಾಶರ ಮುಖ ಕೆಂಪಾಯಿತು. ಕೋಪ ಬಂದರೂ ತೋರಿಸಿಕೊಳ್ಳದೆ "ಎಲಾ! ಹುಡುಗ. ನನ್ನೊಡನೆ ವಾದ ಮಾಡುವುದಕ್ಕೆ ಬಂದೆಯಾ ನೀನು? ಇಷ್ಟೆಲ್ಲಾ ಕಲಿತಿರುವ ನೀನು ನಿನ್ನದೇ ಆದ ಶಾಲೆಯನ್ನೇಕೆ ಸ್ಥಾಪಿಸಬಾರದು? ಈ ವಿವರಣೆಯು ಶ್ರೀ ಶಂಕರಾಚಾರ್ಯರೇ ಅಲ್ಲದೆ ಹಿಂದಿನ ಎಲ್ಲಾ ಆಚಾರ್ಯರ ವಿವರಣೆಗೂ ವಿರುದ್ಧವಾಗಿದೆ. ಸಾಕುಮಾಡು ನಿನ್ನ ತಿಳಿಗೇಡಿತನ. ಸುಮ್ಮನಿರು ಇನ್ನು ಮೇಲೆ" ಎಂದು ಗದರಿಸಿದರು.ಇಷ್ಟೆಲ್ಲಾ ಆದರೂ ಶ್ರೀ ಯಾದವಪ್ರಕಾಶರಿಗೆ ಒಳಗಿಂದೊಳಗೆ ಶ್ರೀ ರಾಮಾನುಜರ ಮಹಾ ಪ್ರತಿಭೆಯ ಮೇಲೆ ಅಸೂಯೆ ಬೆಳೆದು ಎಲ್ಲಿ ಶ್ರೀ ರಾಮಾನುಜರು ತನ್ನನ್ನೂ ಮೀರಿ ಹೆಸರು ಗಳಿಸುತ್ತಾರೆಯೋ ಎಂಬ ಹೆದರಿಕೆ ಉಂಟಾಯಿತು. ಶ್ರೀ ಯಾದವಪ್ರಕಾಶರು ಮತ್ತಿತರರು ಸೇರಿ ಒಂದು ಕೆಟ್ಟ ಯೋಚನೆ ಮಾಡಿದರು. ಎಲ್ಲರೂ ಸೇರಿ ಕಾಶಿಗೆ ಹೋಗಿ ಗಂಗಾ ಸ್ನಾನದಲ್ಲಿ ಶ್ರೀ ರಾಮಾನುಜರನ್ನು ಗಂಗೆಯಲ್ಲಿ ಮುಳುಗಿಸಿ ಅವರನ್ನು ಮುಗಿಸಿಬಿಡಬೇಕೆಂದು ಯೋಜನೆ ಮಾಡಿದರು.

ಶ್ರೀ ರಾಮಾನುಜ, ಅವರ ತಮ್ಮ ಶ್ರೀ ಗೋವಿಂದ ಮತ್ತು ಎಲ್ಲ ಶಿಷ್ಯರೂ ಸೇರಿ ಶ್ರೀ ಯಾದವಪ್ರಕಾಶರೊಡನೆ ಹೊರಟರು. ಮಾರ್ಗ ಮಧ್ಯದಲ್ಲಿ ಶ್ರೀ ಗೋವಿಂದನಿಗೆ ಈ ಯೋಜನೆ ತಿಳಿದು ತಕ್ಷಣ ಅವನು ಗುಪ್ತವಾಗಿ ಶ್ರೀ ರಾಮಾನುಜರಿಗೆ ತಿಳಿಸಿ ಅವನನ್ನು ಆ ಗುಂಪಿನಿಂದ ಬೇರೆಯಾಗಿ ಹತ್ತಿರದ ಅರಣ್ಯದಲ್ಲಿ ತಪ್ಪಿಸಿಕೊಳ್ಳಲು ಒತ್ತಾಯ ಮಾಡಿದನು. ಅದರಂತೆ ಶ್ರೀ ರಾಮಾನುಜರು ಅರಣ್ಯದಲ್ಲಿ ತಪ್ಪಿಸಿಕೊಂಡರು. ಅಂದು ರಾತ್ರಿ ಅರಣ್ಯದಲ್ಲಿ ಮಲಗಿದ್ದಾಗ, ದಿವ್ಯ ದಂಪತಿಗಳಾದ ಶ್ರೀ ಲಕ್ಷ್ಮೀ ನಾರಾಯಣರು ಬೇಡ ದಂಪತಿಗಳಾಗಿ ಬಂದು ಶ್ರೀ ರಾಮಾನುಜರನ್ನು ಕಾಂಚೀಪುರಕ್ಕೆ ತಲುಪಿಸಿದರು. ಈ ರೀತಿಯಾಗಿ ರಾಮಾನುಜರು ಭಗವದನುಗ್ರಹದಿಂದ ಆ ಗಂಡಾಂತರದಿಂದ ಪಾರಾದರು. ಅನೇಕ ವರ್ಷಗಳಾದ ಮೇಲೆ ಶ್ರೀ ರಾಮಾನುಜರು ಕಾಂಚಿಯ ಶ್ರೀ ವರದಸ್ವಾಮಿಯ ದಿವ್ಯ ಸನ್ನಿಧಿಯಲ್ಲಿ ಸಂನ್ಯಾಸ ಸಂಕಲ್ಪಿಸಿ ಸ್ವೀಕರಿಸಿದರು. ಶ್ರೀ ರಾಮಾನುಜಾಚಾರ್ಯರು ತಮ್ಮ ಭಕ್ತಿ, ಜ್ಞಾನ ಹಾಗೂ ದಯೆಗಳಿಂದ ಪ್ರಖ್ಯಾತರಾದರು. ಅನೇಕ ವರ್ಷಗಳ ನಂತರ ಶ್ರೀ ಯಾದವಪ್ರಕಾಶರು ತಮ್ಮ ತಪ್ಪುಗಳನ್ನರಿತು ಶ್ರೀ ರಾಮಾನುಜಾಚಾರ್ಯರ ಶಿಷ್ಯರಾಗಿ ಶ್ರೀ ಗೋವಿಂದ ಜೀಯರ್ ಎಂದಾದರು. (ಮುಂದಿನ ಪುಟಕ್ಕೆ...)


Copyright © KCO – Brindavana

(..ಹಿಂದಿನ ಪುಟದಿಂದ)

**ಆಚಾರ್ಯರ ಕೊಡುಗೆ**

ವೇದಾಂತ ಮತ್ತು ತತ್ವ ಶಾಸ್ತ್ರಗಳಿಗೆ ಶ್ರೀ ರಾಮಾನುಜ ಆಚಾರ್ಯರು ಅಪಾರವಾದ ಶಾಶ್ವತ ಕೊಡುಗೆಯನ್ನು ನೀಡಿದ್ದಾರೆ. ಶ್ರೀ ರಾಮಾನುಜ ಆಚಾರ್ಯರು ಹನ್ನೆರಡು ಆಳ್ವಾರುಗಳು ಹಾಗೂ ತಮ್ಮ ಮುಂಚಿನ ಆಚಾರ್ಯರುಗಳಾದ ಶ್ರೀ ನಾದಮುನಿ ಮತ್ತು ಶ್ರೀ ಯಾಮುನಮುನಿಗಳ ಪರಂಪರೆಯಲ್ಲಿ, ಸನಾತನ ಧರ್ಮದ ಅಡಿಪಾಯವಾದ ಉಪನಿಷತ್, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳ ಆಧಾರದ ಮೇಲೆ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಕ್ರಮಬದ್ಧವಾಗಿ ನಿರೂಪಿಸಿ, ವಿಶಿಷ್ಟಾದ್ವೈತ ವೇದಾಂತವನ್ನು ಪ್ರತಿಪಾದಿಸಿದರು. ಸಾರಾಂಶದಲ್ಲಿ ಹೇಳಬೇಕೆಂದರೆ, ವಿಶಿಷ್ಟಾದ್ವೈತ 'ಚಿತ್', 'ಅಚಿತ್' ಮತ್ತು 'ಪರತತ್ವ' ಗಳೆಂಬ ಮೂರು ಮೂಲ ತತ್ವಗಳನ್ನೊಳಗೊಂಡಿದೆ. ನಾವು ಅನುಭವದಿಂದ ಅರಿತಂತೆ ಚಿತ್ ಅಸ್ತಿತ್ವವು ಜೀವ ಮತ್ತು ದೇಹಗಳನ್ನು ಹೊಂದಿದೆ. ಜೀವಿಯಲ್ಲಿ ಆತ್ಮ ಮತ್ತು ದೇಹಗಳು ಬೇರ್ಪಡಿಸಲಾಗದಂತೆ ಸಮಗ್ರವಾಗಿ ಒಂದುಗೂಡಿದೆ. ಅಚಿತ್ ಎಂದರೆ ಸೃಷ್ಟಿಯಲ್ಲಿನ ಚೇತನಾರಹಿತ ಜಡ ವಸ್ತುಗಳು. ಚಿತ್ ಮತ್ತು ಅಚಿತ್ ಗಳು ನಾರಾಯಣ, ಪರತತ್ವ, ಈಶ್ವರ ಎಂದು ಕರೆಯಲ್ಪಡುವ ಸರ್ವೋಚ್ಛ ಹಾಗೂ ಸರ್ವವ್ಯಾಪಿ ಶಕ್ತಿಯ ದೇಹ ಎಂದು ವಿಶಿಷ್ಟಾದ್ವೈತ ಸಿದ್ಧಾಂತವು ಪ್ರತಿಪಾದಿಸುತ್ತದೆ. ಏಕಮೇವಾದ್ವಿತೀಯನಾದ ಶ್ರೀಮನ್ನಾರಾಯಣನು ಚಿತ್ ಮತ್ತು ಅಚಿತ್ ಗಳಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವುದನ್ನು ವಿಶಿಷ್ಟಾದ್ವೈತ ಪ್ರಮಾಣೀಕರಿಸುತ್ತದೆ. ಮತ್ತೊಂದು ಬಹು ಪ್ರಮುಖ ವಿಷಯವೆಂದರೆ, ಸರ್ವೋಚ್ಛನಾದ ನಾರಾಯಣನು ತುಲನೆ ಮಾಡಲಾಗದ ಮತ್ತು ಮುಗಿಯಲಾಗದಷ್ಟು ಸದ್ಗುಣಗಳ ನಿಧಿಯಾಗಿದ್ದಾನೆ. ಆ ಸರ್ವೋಚ್ಛನನ್ನು ಮತ್ತು ಇಹ ಜೀವನದ ಸಾರ್ಥಕತೆಯನ್ನು ಮನುಷ್ಯನು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳ ಮೂಲಕ ಹೊಂದಬಹುದು. ಇದಕ್ಕಾಗಿ ಅವನು ಸರ್ವೋಚ್ಛನಲ್ಲಿ ಸಂಪೂರ್ಣ ಶರಣಾಗತಿ ಮತ್ತು ಅನನ್ಯ ಭಕ್ತಿಗಳನ್ನು ಹೊಂದಬೇಕು. ಉಪನಿಷತ್ತುಗಳು ಹಾಗೂ ತಮಿಳಿನ ದಿವ್ಯ ಪ್ರಬಂಧಗಳು ಭಕ್ತಿಯನ್ನು ಎತ್ತಿ ಹಿಡಿದಿವೆ.

ಶ್ರೀಮನ್ ನಾರಾಯಣನಲ್ಲಿ ಉತ್ಕಟವಾದ ಮತ್ತು ಪ್ರಾಮಾಣಿಕವಾದ ಪ್ರೇಮ ಮತ್ತು ಭಕ್ತಿಗಳಿರುವ ಯಾರೇ ಆಗಲಿ ಶರಣಾಗತಿಯ ಮಾರ್ಗವನ್ನು ಅನುಸರಿಸಬಹುದೆಂದು ಶ್ರೀ ರಾಮಾನುಜ ಆಚಾರ್ಯರು ಪ್ರತಿಪಾದಿಸಿದರು. ಕೆಳಗಿನ ಈ ಶ್ಲೋಕ ಶರಣಾಗತಿಯ ವಿವಿಧ ಅಂಶಗಳನ್ನು ವಿವರಿಸುತ್ತದೆ.

**ಆನುಕೂಲಸ್ಯ ಸಂಕಲ್ಪ: ಪ್ರಾತಿಕೂಲಸ್ಯ ವರ್ಜನಂ ರಕ್ಷಿಷ್ಯತೀತಿ ವಿಶ್ವಾಸ:|**

**ಗೋಪ್ತೃತ್ವಾವರಣಂ ತಥಾ ಆತ್ಮನಿಕ್ಷೇಪಃ - ಕಾರ್ಪಣ್ಯೇ ಷಡ್ವಿಧಾ ಶರಣಾಗತಿ:||**

ಈ ಶ್ಲೋಕದಲ್ಲಿ ಹೇಳಿದಂತೆ ಶರಣಾಗತಿಯ ಆರು ಅಂಗಗಳೆಂದರೆ,

೧) "ಆನುಕೂಲಸ್ಯ ಸಂಕಲ್ಪ:"- ಎಂದರೆ ನಿನ್ನ ಚಿಂತನೆ, ಮಾತು ಮತ್ತು ಕೃತಿಗಳನ್ನು ಪರಮಾತ್ಮನ ಇಚ್ಛೆಗನುಗುಣವಾಗಿ ಮಾಡು. ಅವನ ಇಚ್ಛೆಯಂತೆ ಚಿಂತನೆ, ಮಾತು ಮತ್ತು ಕೃತಿಗಳನ್ನು ಹೊಂದಿಸು. ಪರಬ್ರಹ್ಮ ನಾರಾಯಣನೇ ಅಂತರ್ಯಾಮಿಯಾಗಿರುವ ಎಲ್ಲಾ ಚಿತ್ ಮತ್ತು ಅಚಿತ್ ಗಳೊಡನೆ ಸಾಮರಸ್ಯ ಮತ್ತು ಸಹಾನುಭೂತಿಯಿಂದ ಸಂವಹನ ನಡೆಸಬೇಕೆಂದೂ ಇದರಿಂದ ವ್ಯಕ್ತವಾಗುತ್ತದೆ.
೨) ಪ್ರಾತಿಕೂಲಸ್ಯ ವರ್ಜನಂ- ಎಂದರೆ ಸರ್ವೋಚ್ಛನ ಇಚ್ಛೆಗೆ ವಿರುದ್ಧವಾದ ಚಿಂತನೆ, ಮಾತು ಮತ್ತು ಕೃತಿಗಳನ್ನು ತ್ಯಜಿಸಿಬಿಡು. ಅವುಗಳನ್ನು ಸರ್ವಥಾ ಮಾಡಬೇಡ.
೩) ರಕ್ಷಿಷ್ಯತೀತಿ ವಿಶ್ವಾಸ:- ಎಂದರೆ ಶ್ರೀಮನ್ನಾರಾಯಣನೊಬ್ಬನೇ ನಮ್ಮ ರಕ್ಷಕ ಮತ್ತು ಜೀವನಾಧಾರ ಎಂಬ ಅಚಲ ನಂಬಿಕೆ.
೪) ಗೋಪ್ತೃತ್ವಾವರಣಂ: - ಎಂದರೆ ಶ್ರೀಮನ್ನಾರಾಯಣನ ಕೃಪೆ ಮಾತ್ರ ನಮ್ಮ ಪಾರಮಾರ್ಥಿಕ ಪೂರ್ಣತೆ ಮತ್ತು ಲೌಕಿಕ ರಕ್ಷಣೆಗೆ ಭರವಸೆ ಎಂಬ ಅರಿವು.
೫) ಕಾರ್ಪಣ್ಯ - ಎಂದರೆ ಶ್ರೀಮನ್ನಾರಾಯಣನ ಕೃಪೆ ಇಲ್ಲದಿದ್ದರೆ ನಮ್ಮ ಪ್ರಯತ್ನಗಳಲ್ಲಿ ನಾವೆಷ್ಟು ಅಸಹಾಯಕರು ಎಂಬ ಅನುಭವ.
೬) ಆತ್ಮನಿಕ್ಷೇಪ - ಎಂದರೆ ತನ್ನನ್ನು ತಾನು ಸಂಪೂರ್ಣವಾಗಿ ಶ್ರೀಮನ್ನಾರಾಯಣನಿಗೆ ಅರ್ಪಿಸಿಕೊಳ್ಳುವುದು.

**ಅಂತಿಮ ಸಂದೇಶ**

ಶ್ರೀ ರಾಮಾನುಜಾಚಾರ್ಯರ ಅಂತಿಮ ಕಾಲದಲ್ಲಿ ಅವರ ಸುತ್ತಲೂ ನೆರೆದಿದ್ದ ಭಕ್ತರು, ತಮ್ಮ ಜೀವನವನ್ನು ಹೇಗೆ ನಡೆಸಬೇಕೆಂಬುದನ್ನು ತಿಳಿಸಿಕೊಡಬೇಕೆಂದು ಅವರನ್ನು ಪ್ರಾರ್ಥಿಸಿದರು. ಪಾರಮಾರ್ಥಿಕತೆಯ ಸಫಲತೆಗಾಗಿ ಸಾಧಕನು ಜೀವನದಲ್ಲಿ ಏನು ಮಾಡಬೇಕೆಂದು ಆಚಾರ್ಯರು ಈ ಕೆಳಗಿನಂತೆ ಉಪದೇಶಿಸಿದರು.

- ಸರ್ವೋಚ್ಛನಲ್ಲಿ ಶರಣಾಗತನಾದ ಭಕ್ತನು, ತನ್ನ ಭವಿಷ್ಯದ ಬಗೆಗೆ ಯಾವ ರೀತಿಯ ಆತಂಕವನ್ನೂ ಪಡಬಾರದು. ಇಂತಹ ಆತಂಕ ಅವನ ಶರಣಾಗತಿಯನ್ನು ಬರೀ ಬೂಟಾಟಿಕೆಯೆಂದು ತೋರಿಸುತ್ತದೆ.
- ಸಾಧಕನ ವರ್ತಮಾನದ ಸ್ಥಿತಿ ಅವನ ಪೂರ್ವ ಕರ್ಮಗಳ ಮೇಲೆ ಅವಲಂಬಿತವಾಗಿರುತ್ತದೆ. ಹೀಗಾಗಿ ಅವುಗಳ ಬಗ್ಗೆ ದುಃಖಿಸುವುದು ಸರಿಯಲ್ಲ.
- ನೀವು ಪ್ರತಿದಿನ ಮಾಡುವ ಎಲ್ಲಾ ಕೆಲಸ ಕಾರ್ಯಗಳನ್ನು ಕೇವಲ ಲೌಕಿಕ ದೃಷ್ಟಿಯಿಂದ ಮಾಡದೆ, ಪರಮಾತ್ಮನ ಸೇವೆಯೆಂದು ಮಾಡಿ.
- ಶ್ರೀ ಭಾಷ್ಯವನ್ನು (ಶ್ರೀ ವೇದವ್ಯಾಸ ವಿರಚಿತ ಬ್ರಹ್ಮಸೂತ್ರಕ್ಕೆ ಶ್ರೀ ರಾಮಾನುಜ ಆಚಾರ್ಯರು ಬರೆದ ವ್ಯಾಖ್ಯಾನ) ಅಧ್ಯಯನ ಮಾಡಿ ಅದನ್ನು ಸಾಧ್ಯವಾದಷ್ಟು ಜನಕ್ಕೆ ಬೋಧಿಸಿ.
- ಇದು ಸಾಧ್ಯವಾಗದಿದ್ದಲ್ಲಿ ನಮ್ಮಾಳ್ವಾರ್ ಮತ್ತು ಇತರ ಆಳ್ವಾರ್ ಗಳ ನಾಲ್ಕು ಸಾವಿರ ಪದ್ಯಗಳ ದಿವ್ಯ ಪ್ರಬಂಧವಾದ ಪವಿತ್ರ ಕೃತಿಗಳನ್ನು ಅಧ್ಯಯನ ಮಾಡಿ.
- ಇದೂ ಸಾಧ್ಯವಾಗದಿದ್ದಲ್ಲಿ ಶ್ರೀರಂಗಂ ಮತ್ತು ಮೇಲುಕೋಟೆಯಂತಹ ಪವಿತ್ರ ಸ್ಥಳಗಳಲ್ಲಿ ಜೀವನ ಮಾಡಿರಿ.
- ಇದೂ ಆಗದಿದ್ದಲ್ಲಿ, ನೀವೆಲ್ಲಿದ್ದೀರೋ ಅಲ್ಲೇ ನೆಲೆಸಿ, ನಿಮ್ಮೆಲ್ಲಾ ಹೊರೆಯನ್ನೂ ಸರ್ವೋತ್ತಮನ ಮೇಲೆ ಹಾಕಿ, ನಾರಾಯಣ ದ್ವಯ ಮಂತ್ರದ (ಗುರುಗಳ ಉಪದೇಶದಿಂದ ಪಡೆದು) ಜಪದಲ್ಲಿ ಮುಳುಗಿರಿ.
- ಇವ್ಯಾವುದೂ ಸಾಧ್ಯವಾಗದಿದ್ದಲ್ಲಿ, ವಿವೇಕ ಹಾಗೂ ಭಕ್ತಿ ತುಂಬಿದ ಮತ್ತು ಆಸೆಗಳನ್ನು ವರ್ಜಿಸಿದ ನಿಜವಾದ ಜ್ಞಾನಿ ಹಾಗೂ ಭಕ್ತರ ಜೊತೆಯಿದ್ದು ಅವನ ಉಪದೇಶವನ್ನು ಅನುಸರಿಸಿ ಜೀವನ ಮಾಡಿ.
- ಈ ಪ್ರಪಂಚದಲ್ಲಿ ನಿಮ್ಮ ಗೆಳೆಯರು ಯಾರು, ಶತ್ರುಗಳು ಯಾರು ಮತ್ತು ತಾಟಸ್ಥ್ಯ ಲೌಕಿಕ ಮನೋಭಾವದವರು ಯಾರು ಎಂಬುದನ್ನು ವಿವೇಚನೆಯಿಂದ ತಿಳಿಯಿರಿ. ಸಜ್ಜನರು ಮತ್ತು ಸಂತ, ಸಾಧುಗಳೇ ನಿಮ್ಮ ಗೆಳೆಯರು; ನಾಸ್ತಿಕ ಮತ್ತು ದೈವದ್ವೇಷಿಗಳೇ ಶತ್ರುಗಳು; ಲೌಕಿಕದಲ್ಲೇ ಮುಳುಗಿರುವವರೇ ತಾಟಸ್ಥ್ಯ ಲೌಕಿಕ ಮನೋಭಾವದವರು.
- ಉತ್ತಮ ಸ್ನೇಹಿತರನ್ನು ಗಳಿಸಿ ಅವರ ಜೊತೆ ಜೀವನವನ್ನು ಆನಂದಿಸಿ. ಕರುಣಾಸಾಗರನಾದ ಭಗವಂತನು ನಿಮ್ಮ ಪ್ರಾರ್ಥನೆಗಳನ್ನು ಮನ್ನಿಸಿ ನಿಮ್ಮ ಮೇಲೆ ಕೃಪೆತೋರಿ ಸಲುಹುತ್ತಾನೆಂದು ನೆನಪಿಡಿರಿ.
- ಶತ್ರುಗಳಿಂದ ಏನನ್ನೂ ಪಡೆಯಬೇಡಿ ಮತ್ತು ಅವರಿಂದ ಏನನ್ನೂ ಯಾಚಿಸಬೇಡಿ.

**ಸಾರಾಂಶ**

ಈ ಪ್ರಕಾರವಾಗಿ ಆಧ್ಯಾತ್ಮಿಕ ಸಾಧಕರಿಗೆ ಸಂದೇಶಗಳನ್ನು ಮತ್ತು ಉಪದೇಶಗಳನ್ನು ಮಹಾನುಭಾವರಾದ ಶ್ರೀ ರಾಮಾನುಜ ಆಚಾರ್ಯರ ಜೀವನ ನೀಡುತ್ತದೆ. ಅವರ ಬದುಕು, ಸಂದೇಶ ಮತ್ತು ಕೃತಿಗಳು ಇಡೀ ಪ್ರಪಂಚದಲ್ಲಿ ಪ್ರಭಾವ ಬೀರಿವೆ. ಅವರು ಪ್ರತಿಪಾದಿಸಿದ ಸರಳತೆ, ನಿಷ್ಕಪಟ ನಡೆ ನುಡಿ, ಶುದ್ಧ ಭಕ್ತಿ ಮತ್ತು ಭಕ್ತರಲ್ಲಿ ಸಮಾನತೆ ಹಾಗೂ ಸರ್ವೋತ್ತಮನಾದ ಶ್ರೀಮನ್ನಾರಾಯಣನ ಮೇಲಿನ ಸಂಪೂರ್ಣ ಭರವಸೆ ಮತ್ತು ಅವಲಂಬನೆ ಸಾಧಕರಿಗೆ ಸ್ಪಷ್ಟ ಮಾರ್ಗವನ್ನು ತೋರಿಸುತ್ತದೆ. ನಾವೆಲ್ಲಾ ಶ್ರೀ ರಾಮಾನುಜಾಚಾರ್ಯರನ್ನು ಭಕ್ತಿಯಿಂದ ನೆನೆಯೋಣ. ಅವರ ಜೀವನ ಮತ್ತು ಸಂದೇಶಗಳನ್ನು ಬರೀ ಅವರ ೧೦೦೦ನೇ ವರ್ಧಂತಿಯಂದು ಮಾತ್ರ ಅಧ್ಯಯನ ಮಾಡುವುದಲ್ಲದೆ, ಸದಾ ಕಾಲ ಅದನ್ನು ದಾರಿ ದೀಪ ಮಾಡಿಕೊಂಡು, ಪ್ರಪಂಚದಾದ್ಯಂತ ಇರುವ ಸಾಧಕರಿಗೆ ಹಾಗೂ ಅನ್ವೇಷಕರಿಗೆ ತಿಳಿಸೋಣ. ಆಚಾರ್ಯರ ಸಂದೇಶ, ವೇದಾಂತ ದರ್ಶನ ಮತ್ತು ತತ್ವ ಬೋಧನೆ ತತ್ವಾನ್ವೇಷಕರಿಗೆ ದಾರಿ ತೋರಿಸುವುದಲ್ಲದೆ ಪ್ರಪಂಚದ ಸುಧಾರಣೆಗೂ ಮಹತ್ವದ ಕೊಡುಗೆ ನೀಡುತ್ತದೆ.

●


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




# ಬಿ.ಆರ್.ಛಾಯಾ



ಸಂದರ್ಶಕರು: ಶ್ರೀಪರ್ಣಿಕಾ ಕಂಚಿ



**ಪರಿಚಯ:** "ಕರ್ನಾಟಕದ ಕೋಗಿಲೆ" ಎಂದೇ ಪ್ರಸಿದ್ಧಿಯಾಗಿರುವ ಬಿ.ಆರ. ಛಾಯಾ, ಕನ್ನಡದ ಜನತೆಗೆ ಮನೆ ಮಾತಾಗಿರುವ ಗಾಯಕಿ. ೩೦ ವರ್ಷಗಳಿಗೂ ಹೆಚ್ಚು ಕನ್ನಡದ ಸುಗಮ ಸಂಗೀತ , ಭಾವಗೀತೆ, ಜಾನಪದ ಗೀತೆ ಹಾಗು ಚಿತ್ರಗೀತೆಗಳನ್ನು ಸುಮಧುರವಾಗಿ ಹಾಡಿ ಕನ್ನಡಿಗರ ಮನ ಗೆದ್ದಿರುವ ಸುಪ್ರಸಿದ್ಧ ಗಾಯಕಿ. "ಹಿಂದೂಸ್ಥಾನವು ಎಂದು ಮರೆಯದ ಭಾರತ ರತ್ನವು ನೀನಾಗು " ಎಂಬ ಹಾಡಿನಿಂದ, ಕಣಗಾಲ್ ಪುಟ್ಟಣ್ಣ ಅವರ " ಅಮೃತ ಘಳಿಗೆ" ಚಿತ್ರದಿಂದ, ಚಿತ್ರರಂಗಕ್ಕೆ ಪ್ರವೇಶ ಮಾಡಿದ ಕಾಲಾವಿದೆ.

ಈ ವರ್ಷದ ಬೃಂದಾವನ ವಸಂತೋತ್ಸವದಲ್ಲಿ ಕರ್ನಾಟಕದ ಗಾನ ಕೋಗಿಲೆ ಬಿ ಆರ ಛಾಯಾ ಅವರ ಮಧುರ ಧ್ವನಿಯನ್ನ ಕೇಳಿ ಆನಂದಿಸುವ ಸುದವಕಾಶ ದೊರಕಿದ್ದು, ನ್ಯೂ ಜೆರ್ಸಿ ಜನರ ಸೌಭಾಗ್ಯ ಅನ್ನಬಹುದು. ಅವರು ತಮ್ಮ ಸುಪ್ರಸಿದ್ಧ ಹಾಡುಗಳನ್ನು ಹಾಡಿ ಎಲ್ಲರ ಮನವನ್ನು ರಂಜಿಸಿದರು. ಹಾಡು ಹಳೆಯದಾಗಿದ್ದರೂ, ಅದೇ ಭಾವ ಇತ್ತು. ಬೃಂದಾವನ ವಸಂತೋತ್ಸವದಲ್ಲಿ ನನಗೆ ಅವರ ಜೊತೆ ಹಾಡುವ ಅವಕಾಶದೊಂದಿಗೆ, ಸಂದರ್ಶಿಸುವ ಅವಕಾಶವು ದೊರಕಿದ್ದು ಬಹಳ ಸಂತೋಷ ತಂದಿದೆ ಮತ್ತು ಆ ಸಂದರ್ಶನದ ಸಂಕ್ಷಿಪ್ತ ವರದಿ ಇಲ್ಲಿದೆ.

*೧. ನಿಮ್ಮ ಬಾಲ್ಯದ ಯುಗಾದಿ ಅನುಭವ ಎಲ್ಲಿ? ಹೇಗಿತ್ತು ? ಹಾಗು ನಿಮಗೆ ಬಾಲ್ಯದಲ್ಲಿ ಸಂಗೀತ ಆಸಕ್ತಿಗೆ ಪ್ರೇರಣೆ ಯಾರು ?*

**ಛಾಯಾ:** ನನ್ನ ಬಾಲ್ಯ ಬೆಂಗಳೂರಿನ ಐ ಟಿ ಐ ಬಡಾವಣೆಯಲ್ಲಿ ಕಳೆದಿದ್ದು , ಬಾಲ್ಯದ ಯುಗಾದಿಯ ನೆನಪುಗಳು ಹಲವು , ಎಸ್. ಜಾನಕೀ ಅವರ ಮಧುರವಾದ "ಕುಲವಧು" ಚಿತ್ರದ ಹಾಡು "ಯುಗ ಯುಗಾದಿ ಕಳೆದರು" ಇದರಿಂದ ಪ್ರಾರಂಭವಾಗುತ್ತಿತ್ತು, ಮನೆಯಲ್ಲಿ ಹಬ್ಬದ ವಾತಾವರಣ. ಹಬ್ಬದ ವಿಶೇಷ ಅಡುಗೆ ಹೋಳಿಗೆ ಊಟ ಮನೆಯವರೊಡನೆ ಮಾಡಿದ ನೆನಪುಗಳು.



ನನ್ನದು ಸಂಗೀತದ ಕುಟುಂಬ, ನನ್ನ ತಾತ, ಅಜ್ಜಿ, ತಂದೆ ಹಾಗು ತಾಯಿ ಎಲ್ಲರೂ ಹಾಡುತ್ತಿದ್ದರು. ನನ್ನ ಅಜ್ಜಿ ತುಂಬಾ ಚೆನ್ನಾಗಿ ಹಾಡುತ್ತಿದ್ದರು, ನನಗೆ ಅವರಿಂದ ಸಂಗೀತದಲ್ಲಿ ಹೆಚ್ಚು ಆಸಕ್ತಿ ಬೆಳೆಯಿತು. ನನ್ನ ತಾತನವರು ಗುಬ್ಬಿ ವೀರಣ್ಣ ಕಂಪನಿಯಲ್ಲಿ ಹಾರ್ಮೋನಿಯಂ ನುಡಿಸುತ್ತಿದ್ದರು. ಚಿಕ್ಕ ವಯಸ್ಸಿನಲ್ಲಿ ಶಾಸ್ತ್ರೀಯ ಸಂಗೀತವನ್ನು ಕಲಿಯುತಿದ್ದ ನನಗೆ ಸುಗಮ ಸಂಗೀತ, ಚಲನ ಚಿತ್ರಗಳಲ್ಲಿ ಬಹಳ ಆಸಕ್ತಿ ಹುಟ್ಟಿತು.

*೨. ನೀವು ಸುಗಮ ಸಂಗೀತ ಕ್ಷೇತ್ರದಲ್ಲಿ ಹಾಗು ಚಲನಚಿತ್ರ ರಂಗದಲ್ಲಿ ಹೆಸರು ಮಾಡಿರುವವರು, ನಿಮಗೆ ಇವೆರಡರಲ್ಲಿ ಇಷ್ಟವಾದ ಕ್ಷೇತ್ರ ಯಾವುದು ? ಏತಕ್ಕೆ ?*

**ಛಾಯಾ:** ನನಗೆ ಸಂಗೀತ ಅಂದರೇನೇ ತುಂಬ ಇಷ್ಟ. ಸುಗಮ ಸಂಗೀತವಿರಬಹುದು, ಚಲನಚಿತ್ರ ಗೀತೆಗಳಿರಬಹುದು ಎಲ್ಲವೂ ನನಗೆ ಇಷ್ಟ. ಸಂಗೀತದ ಏಳು ಸ್ವರ ಎಲ್ಲಿರುತ್ತದೆಯೋ ಅದೆಲ್ಲವೂ ನನಗೆ ಬಹಳ ಇಷ್ಟ.

*೩. ಕನ್ನಡಿಗರಿಗೆ ಸುಗಮ ಸಂಗೀತದಲ್ಲಿ ಮುಂದೆ ಬರಲು ಯಾವ ಮಾರ್ಗಗಳಿವೆ ? ಅವರಿಗೆ ಕಿವಿ ಮಾತು ಏನು ?*

**ಛಾಯಾ:** ಹಾಡುಗಾರರಿಗೆ ಕಿವಿ ಮಾತು "ಅವಕಾಶಗಳು ಎಲ್ಲೇ ಬಂದರೂ ಹಾಡಿ, ಸಂಗೀತದೊಂದಿಗೆ ಸದಾಕಾಲ ಇರಿ" . ಹಾಡನ್ನು ಯಾವಾಗಲೂ ಕೇಳಿ, ಹೊಸ ಹಾಡುಗಳನ್ನು ಕಲಿಯಿರಿ. ಅವಕಾಶ ಬಂದಾಗ ಮಾತ್ರ ಅಭ್ಯಾಸ ಮಾಡದೆ ಪರಿಶ್ರಮ ನಿರಂತರವಾಗಿರಲಿ. ತುಂಬಾ ನಿರೀಕ್ಷೇ ಬೇಡ, ಪ್ರಯತ್ನ ನಿಮ್ಮದಾಗಲಿ , ಇಚ್ಛೆ ದೇವರದು.

*೪. ಪ್ರತಿಭಾ ಪುರಸ್ಕಾರಗಳು ನಿಮಗೆ ಹಲವಾರು ಬಂದಿದೆ , ಅದರಲ್ಲಿ ನಿಮಗೆ ಅತ್ಯಂತ ಸಂತೋಷ ತಂದ ಕ್ಷಣ ಯಾವುದು?*

**ಛಾಯಾ:** ನನಗೆ ಅತ್ಯಂತ ಹೆಚ್ಚು ಸಂತೋಷ ತರುವ ಪ್ರಶಸ್ತಿ ಅಂದರೆ ನಾನು ಹೇಳಿದ ಹಾಡನ್ನು ಕೇಳಿ "ನಿಮ್ಮ ಹಾಡು ತುಂಬಾ ಚೆನ್ನಾಗಿತ್ತು" ಎಂದು ಜನರು ಹೇಳಿದಾಗ ಸಿಗುವ ಸಂತೋಷ ಬೇರೆ ಯಾವುದೇ ಪ್ರಶಸ್ತಿ, ಪುರಸ್ಕಾರದಿಂದ ಸಿಗುವುದಿಲ್ಲ. ಜನ ಪ್ರೀತಿಯಿಂದ ಪ್ರಶಸ್ತಿ ಕೊಡುತ್ತಾರೆ ಅದನ್ನು ಗೌರವದಿಂದ ತೆಗೆದುಕೊಳ್ಳುತ್ತೇನೆ. ಪ್ರಶಸ್ತಿಗಳು ಬರೀ ನಮಗೆ ಸಂತೋಷ ಕೊಡುವಂಥದ್ದು. ಬೇರೆಯವರಿಗೆ ಏನು ಖುಷಿ ಕೊಡುತ್ತದೆ ? ಆದ್ದರಿಂದ ನನಗೆ ಜನರು ಕೊಡುವ ಮೆಚ್ಚುಗೆಯ ಮಾತುಗಳೇ ನನಗೆ ನಿಜವಾದ ಪ್ರಶಸ್ತಿ.



*೫. ನಿಮಗೆ ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಬೇಕು , ಇದನ್ನೇ ನನ್ನ ವೃತ್ತಿಯಾಗಿ ತೆಗೆದುಕೊಳ್ಳಬೇಕು ಅಂತ ಅನ್ನಿಸಿದ್ದು ಯಾವಾಗ ?*

**ಛಾಯಾ:** ನನ್ನ ಅಜ್ಜಿ ಸದಾಕಾಲ ಹಾಡಲು ಪ್ರೋತ್ಸಾಹಿಸುತ್ತಿದ್ದರು ಹಾಗು ನನಗೂ ಚಿಕ್ಕಂದಿನಿಂದ ಬಹಳ ಆಸಕ್ತಿ ಇತ್ತು, ಹಾಗಾಗಿ ಹಾಡುವುದನ್ನೇ ವೃತ್ತಿಯನ್ನಾಗಿ ತೆಗೆದುಕೊಂಡೆ.

*೬. ನೀವು ಹಲವಾರು ಸಂಗೀತ ನಿರ್ದೇಶಕರ ಜೊತೆ ಕೆಲಸ ಮಾಡಿದ್ದೀರಾ. ನಿಮಗೆ ಮೆಚ್ಚಿನ ನಿರ್ದೇಶಕರು ಯಾರು?*

**ಛಾಯಾ:** ನನಗೆ ಎಲ್ಲ ಸಂಗೀತ ನಿರ್ದೇಶಕರು ಇಷ್ಟ. ಏಳು ಸ್ವರದಿಂದ ಕೂಡಿದ ಸಂಗೀತ ನನಗೆ ಹೇಗೆ ಇಷ್ಟವೋ ಹಾಗೆಯೇ ಎಲ್ಲಾ ನಿರ್ದೇಶಕರು ಇಷ್ಟ. ಒಬ್ಬೊಬರದು ಒಂದೊಂದು ಶೈಲಿ ಹಾಗಾಗಿ ಎಲ್ಲಾರೂ ಇಷ್ಟ.

*೭. ನಿಮಗೆ ಇಷ್ಟವಾದ ರಾಗ ಯಾವುದು ಹಾಗು ಅದನ್ನು ಹೆಚ್ಚಾಗಿ ಉಪಯೋಗಿಸುವ ನಿರ್ದೇಶಕರು ಯಾರು ?*

**ಛಾಯಾ:** ನನಗೆ ಅತ್ಯಂತ ಇಷ್ಟವಾದ ರಾಗವೆಂದರೆ "ಮೋಹನ" ರಾಗ. ಹಲವಾರು ನಿರ್ದೇಶಕರು ಕಲ್ಯಾಣಿ , ಕೀರವಾಣಿ ಇನ್ನು ಇತರ ರಾಗಗಳಲ್ಲಿ ಸಂಗೀತವನ್ನು ರಚಿಸುತ್ತಾರೆ, ಆದರೆ ಹೆಚ್ಚಾಗಿ ಚಲನಚಿತ್ರ ಗೀತೆಗಳಲ್ಲಿ ಮಿಶ್ರ ರಾಗಗಳನ್ನ ಬಳಸುತ್ತಾರೆ. ಹಾಗಾಗಿ ಇಂತದೆ ನಿರ್ದೇಶಕರು/ರಾಗ ಅಂತ ಹೇಳುವುದಕ್ಕೆ ಆಗುವುದಿಲ್ಲ.

*೮. ಮುಂಚಿನ ಸಂಗೀತ ಕ್ಷೇತ್ರಕ್ಕೂ ಈಗಿನ ಸಂಗೀತ ಕ್ಷೇತ್ರಕ್ಕೂ ಬದಲಾವಣೆಗಳು/ವ್ಯತ್ಯಾಸ ಇದೆಯಾ ? ನಿಮ್ಮ ಅಭಿಪ್ರಾಯವೇನು ?*

**ಛಾಯಾ:** ವ್ಯತ್ಯಾಸಗಳಿವೆ , ಆ ಕಾಲಕ್ಕೆ ಆ ಸಂಗೀತ ಚೆನ್ನಾಗಿತ್ತು , ಈಗಿನ ಕಾಲಕ್ಕೆ ಈ ಸಂಗೀತ ಚೆನ್ನಾಗಿದೆ. ಸ್ವಲ್ಪ ಫಾಸ್ಟ್ ಮ್ಯೂಸಿಕ್, ಆದರೆ ಇದು ಒಂದುತರಹ ಚೆನ್ನಾಗಿದೆ. "ಪರಿವರ್ತನೆ ಜಗದ ನಿಯಮ". ಕಾಲ ಕಾಲಕ್ಕೆ ಒಂದೊಂದು ರೀತಿಯ ಸಂಗೀತಗಳು, ಸರಿ ತಪ್ಪು ಅಂತ ಹೇಳಲಾಗದು.

(ಮುಂದಿನ ಪುಟಕ್ಕೆ....)


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




..ಹಿಂದಿನ ಪುಟದಿಂದ

*೦೯. ಮುಂಚಿನ ದಿನಗಳಲ್ಲಿ ಕ್ಯಾಸೆಟ್ಟು/ಟೇಪ್ ರೆಕಾರ್ಡರ್ ಇತ್ತು. ಈಗ ಡಿಜಿಟಲ್ /ಸ್ಟ್ರೀಮಿಂಗ್ ರೀತಿಯಲ್ಲಿ ಸಂಗೀತ ಬರುತ್ತಿದೆ , ಈ ಬದಲಾವಣೆ ಏನು ಅನ್ನಿಸುತ್ತದೆ ?*
ಟೆಕ್ನಾಲಜಿ ಬಂದ ಮೇಲೆ ಸಂಗೀತ ಹಾಡುವುದು ಸುಲಭವಾಗಿಬಿಟ್ಟಿದೆ. ಅಪಶ್ರುತಿ ಹಾಡಿದರೂ ಆಮೇಲೆ ಅದನ್ನು ಸರಿ ಮಾಡಬಹುದು. ಆಟೋಟ್ಯೂನಿಂಗ್ ಯುಪಯೋಗಿಸಿವುದು ನನಗೆ ಅಷ್ಟೊಂದು ಇಷ್ಟವಿಲ್ಲ. ಇದರಿಂದ ಯಾರಾದರೂ ಹಾಡನ್ನು ರೆಕಾರ್ಡಯೇನೋ ಮಾಡಬಹುದು ಆದರೆ ಅವರು ಲೈವ್ ಹಾಡಿದಾಗ ಆ ತಪ್ಪುಗಳು ಎದ್ದು ಕಾಣುತ್ತದೆ.
ಆದರೆ ಬೇರೆಲ್ಲ ಪರಿವರ್ತನೆ ಕಾಲಕ್ಕೆತಕ್ಕಂತೆ ನಾವು ಹೊಂದ್ಕೋಬೇಕು.

*೧೦. ಈಗ ಬೇರೆ ಭಾಷೆಯ ಹಾಡು ಗಾರರನ್ನು ಹೆಚ್ಚಾಗಿ ಚಲನಚಿತ್ರಗಲ್ಲಿ ಬಳಸಿಕೊಳ್ಳುತ್ತಿದ್ದಾರೆ . ಇದಕ್ಕೆ ನಿಮ್ಮ ಅನಿಸಿಕೆ ಏನು ?*
ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ ಅದು ಅವರವರ ಪ್ರಾಪ್ತಿ. ಅವರು ಹಾಡಬೇಕಿತ್ತು ಅವರು ಹಾಡಿದರು. ಜೀವನದ ಈ ಸತ್ಯ ತಿಳಿದುಕೊಂಡರೆ ನಮಗೆ ನಿರಾಶೆ ಆಗೋದಿಲ್ಲ. ಪ್ರಯತ್ನ ನಮ್ಮದು ಇಚ್ಛೆ ದೇವರದು.

*೧೧. ಬೇರೆ ಭಾಷೆಗಳಲ್ಲಿ ಸುಗಮ ಸಂಗೀತ ಹೇಳಿದ್ದಿರಾ?*
ಕೊಂಕಣಿ, ತುಳು ಬಾಷೆಗಳಲ್ಲಿ ಹೇಳಿದ್ದೀನಿ ಆದರೆ ಬೇರೆ ಯಾವ ಭಾಷೆಯಲ್ಲೂ ಹೇಳಿಲ್ಲ .

ಬಿ. ಆರ. ಛಾಯಾ ಅವರ ಹಾಡುಗಳು, ಮಾತು ಹಾಗು ಮನಸ್ಸು ಎಲ್ಲವೂ ಅತಿ ಮಧುರ. ನಮ್ಮ ಎಲ್ಲಾ ಪ್ರಶ್ನೆಗಳಿಗೆ ತಾಳ್ಮೆಯಿಂದ ಉತ್ತರಿಸಿದರು ಹಾಗು ಹಲವಾರು ತಾತ್ವಿಕ ಉತ್ತರಗಳು.ಅವರ ಸಂಗೀತ ಸುಧೆಯ ಧಾರೆಯಂತಿತ್ತು. ಅವರನ್ನು ಸಂದರ್ಶಿಸಿ ಅವರ ಬಗ್ಗೆ ತಿಳುದುಕೊಳ್ಳುವ ಅವಕಾಶ ಮಾಡಿಕೊಟ್ಟ ಅವರಿಗೆ ಬೃಂದಾವನದ ಪರವಾಗಿ ತುಂಬುಹೃದಯದ ಧನ್ಯವಾದಗಳು.












Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ತಾಯಂದಿರ ದಿನಾಚರಣೆ...

ಸುಬ್ರಮಣ್ಯ ಎಂ



ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ .....ನಾವೆಲ್ಲ ಈ ದೊಡ್ಡ ಮತ್ತು ಆತ್ಮೀಯವಾದ ತತ್ವವನ್ನು ಕೇಳಿ ಮತ್ತು ಅನುಭವಿಸಿ ಬೆಳೆದಿದ್ದೇವೆ......ಮನುಷ್ಯನಿಗೆ ಜೀವಾಂಕುರವಾದೊಡನೆಯೆ ಅನುಭವಿಸುವ ಮೊದಲನೇ ಸಂಪರ್ಕ "ತಾಯಿ"...ಈ ಸೇತುವೆ ನಮ್ಮನ್ನು ಈ ಜಗತ್ತಿಗೆ ಪರಿಚಯಿಸುವ ಮತ್ತು ನಮ್ಮ ಜೀವನ ಶಿಕ್ಷಣವನ್ನು ಪ್ರಾರಂಭಿಸುವ ಒಂದು ಜೀವಂತ ಬಂಧನ....

ಮನೆಯೇ ಮೊದಲ ಪಾಠಶಾಲೆ ಮತ್ತು ತಾಯಿಯೇ ಮೊದಲ ಗುರು ಎನ್ನುವುದು ಮನುಷ್ಯನಿಗೆ ಅಕ್ಷರಶಃ ನಿಜ. ನಮ್ಮೆಲರ ಮನಸ್ಸು ಸಹಜವಾಗಿ ತಾಯಿಯೊಂದಿಗೆ ವಾಲುತ್ತದೆ ಮತ್ತು ವಾಲಬೇಕು ಆಗಲೇ ನಮಗೆ ಸಂಪೂರ್ಣ comfort ಜೀವನದಲ್ಲಿ ಸಿಗುತ್ತದೆ......

ಪುನರಪಿ ಮರಣಂ ಪುನರಪಿ ಜನನಂ ಪುನರಪಿ ಜನನಿ ಜಠರೇ ಶಯನಂ ....ಎನ್ನುವುದು ಮತ್ತೊಂದು ನಂಬಿಕೆ....ಇದರಲ್ಲಿ, ಒಂದು ಜೀವದ ಉಗಮ ಅಂತ್ಯ, ಮತ್ತೆ ಉಗಮ ಒಂದೇ ತಾಯಿಯಿಂದ ಎನ್ನುವ ಮತ್ತೊಂದು ನಂಬಿಕೆ ....ಇದು, ತಾಯಿ ಅನ್ನುವ ಒಂದು belongingness ಅನ್ನು ಒತ್ತಿ ಒತ್ತಿ ಹೇಳುತ್ತದೆ.....


ಸೃಷ್ಟಿಯ ಆದಿ-ಅಂತ್ಯ ತಾಯಿಯೊಂದಿಗೆ ಮತ್ತು ಇದು ನಿರಂತರವಾದುದು...ಅದಕ್ಕೆ ನಮ್ಮ ಪೂರ್ವಜರು ಭೂಮಿಗೆ "ಭೂ ಮಾತಾ " ಎಂದರು.....ಅಂದರೆ, ತಾಯಿ ಅನ್ನುವುದೇ ಒಂದು ಅತ್ಯಂತ ದೊಡ್ಡ ಆಸ್ತಿ ಎಂದು ಹೇಳಿದರು......

ತಾಯಂದಿರು ಮಕ್ಕಳನ್ನು ಒಂದು ಮಾಡುತ್ತಾರೆಂಬುದು ನಿಜ, ಅಂತಹ ಈ ಮಧುರ ಈ ನಂಬಂಧವನ್ನು ಹೇಗೆ ಸಂಭ್ರಮಿಸುವುದು? ಎಲ್ಲಾ ಸಂಬಂಧಗಳು ನಿರಂತರ.....

ಅದಕ್ಕೆ ಆ ಶ್ರೀಕೃಷ್ಣ ಕೂಡ ತಾನು ದೇಹ ತ್ಯಾಗ ಮಾಡುವ ಕಟ್ಟ ಕಡೆಯ ಕ್ಷಣದಲ್ಲಿ, ಮತ್ತೇನೂ ಮಾಡಲಿಲ್ಲ... ತನ್ನ ಸಾಕು ತಾಯಿ ಯಶೋಧೆಯನ್ನು ನೆನೆಯುತ್ತಾ, ಅವಳಿಗೆ ಧನ್ಯವಾದ ಹೇಳುತ್ತಾ, ತನ್ನ ಒಂದು ಕಣ್ಣಿನಿಂದ ಒಂದೇಒಂದು ಹನಿ ನೀರು ಸುರಿಸುತ್ತಾನೆ....ಅವನಿಗೆ ತನ್ನ ತಾಯಿಯ ಬಗ್ಗೆ ಇಂತಹ ಗಾಢವಾದ ಭಾವನೆಗಳು ಇತ್ತೆಂದರೆ, ಆ ಕಣ್ಣೀರ ಹನಿಯ ಬಿಸಿಗೆ, ಅಲ್ಲಿ ಮರು ಭೂಮಿಯೇ ಸೃಷ್ಟಿಯಾಯಿತು....ಅದೇ ಇಂದಿನ ಗುಜರಾತ್ ಸಮೀಪದ ಥಾರ್ ಮರುಭೂಮಿ.....

ಈ ಕಥೆ, ಮನುಷ್ಯನ ಮತ್ತು ತಾಯಿಯ ಭಾಂಧವ್ಯ ಎಂತಹುದೆಂದು ವರ್ಣಿಸುತ್ತದೆ ಮತ್ತು ಅದನ್ನು ಸಂಭ್ರಮಿಸುತ್ತದೆ ಕೂಡ....

*So, let's celebrate this Mother's Day Everyday...* !



ಕೃಪೆ: ಅಂತರ್ಜಾಲ

# ಎಲ್ಲಾ ತಾಯಂದರಿಗೆ ನಮ್ಮ ನಮನಗಳು



ಕೃಪೆ: ಅಂತರ್ಜಾಲ



ಕವನ

ಲಕ್ಷ್ಮಿ ಕೊಳಲ್



### .........ಅಮ್ಮನೊಂದಿಗೆ,,,,,,,,

ಕಾಲಚಕ್ರ ಉರುಳಿತು
ಅಭಿಲಾಷೆಯೊಂದು ಉಳಿಯಿತು
ಅರಳಿ ಕನಲಿ ಮತ್ತೆ ಮರಳಿ
ಮನದಲ್ಲಿ ಉದಿಸಿತು....!

ದಿನದ ದಣಿವ ಮರೆಸಿತು
ತುತ್ತು ಕ್ಷಣವ ನೆನೆಸಿತು
ಈ ದೇಹವೆಲ್ಲೆಲ್ಲೋ ಅಲೆಯಲಿ
ನಿನ್ನೊಡಲ ನುಡಿಯ ಕೇಳಬಯಸಿತು...!

ಹೃದಯ ಹಿಗ್ಗಿ ಸುರಿಯಿತು
ಮಮತೆಯ ಮುಗಿಲ ಸ್ನೇಹವಿದು
ಕರುಣೆಯಿರಲಿ ಕಡೆಗಾಣದಿರಲಿ
ಅಮ್ಮ ನಮ್ಮ ಸಂಭಾಷಣೆಗಳು....!


Copyright © KCO – Brindavana

ಸಂಚಿಕೆ
೧೦
ಮೇ, ೨೦೧೭



## ನಾಟಕದ ಡೈಲಾಗು ಮತ್ತು ಸಿಗರೇಟು



**ಕಾವ್ಯಾ ಕಡಮೆ ನಾಗರಕಟ್ಟೆ**

"ಏನ್ರೀ ಇದು? ಕತ್ತೆ ಉಚ್ಚೆ ಹುಯ್ದ ಹಾಗೆ ಡೈಲಾಗು ಹೇಳ್ತೀರಲ್ರೀ!" ವೆಂಕಟೇಶ್ ಸರ್ ದೊಡ್ಡ ದೊಡ್ಡ ಕಣ್ಣುಗಳನ್ನು ಬಿಟ್ಟು ವಿಜಯರೆಡ್ಡಿಯನ್ನು ಗದರುತ್ತಿದ್ದರು. ಹಿಂದಿನ ಬೆಂಚಿನಿಂದ ಕಿಸಕ್ ಅಂತ ಸಣ್ಣ ಸದ್ದಾಯಿತು. ಸರ್ ಹಿಂತಿರುಗಿ ನೋಡದೇ ಮತ್ತದೇ ದನಿಯಲ್ಲಿ "ನೀವಲ್ಲಿ ಹಿಂದೆ ಕೂತು ನಗಬೇಡ್ರೀ ಅಕ್ಷತಾ" ಅಂದರು. ಅರೇ, ಅಕ್ಷುನೇ ನಕ್ಕಿದ್ದು ಅಂತ ಸರ್ ಗೆ ಹೇಗೆ ಗೊತ್ತಾಯಿತು ಅಂತ ನಾನೂ ಕಲಾ ಮುಖಾಮುಖಿ ನೋಡಿಕೊಂಡೆವು. ಅಷ್ಟೇ. ಮತ್ತೆ ನಮ್ಮ ನಮ್ಮ ಡೈಲಾಗ್ ಬಾಯಿಪಾಠ ಮಾಡುವುದರಲ್ಲಿ ನಿರತರಾದೆವು.

ಅವು ಹುಬ್ಬಳ್ಳಿಯ ಪಿ ಸಿ ಜಾಬಿನ್ ಕಾಲೇಜಿನ ನನ್ನ ಬಿಎಸ್ಸಿಯ ದಿನಗಳು. 'ಗೊಂಬೆಮನೆ' ಸಾರಥ್ಯದಲ್ಲಿ ಆಯೋಜಿಸಿದ್ದ ಡಾ ದ ರಾ ಬೇಂದ್ರೆ ಸ್ಮೃತಿ ನಾಟಕ ಶಿಬಿರವಾಗಿತ್ತು. ಆ ಶಿಬಿರದಲ್ಲಿ ಬೇಂದ್ರೆಯವರ 'ಉದ್ಧಾರ' ನಾಟಕವನ್ನು ಆಡಿಸಲು ನೀನಾಸಂ ಪದವೀಧರ ಕೆ.ಕೆ.ವೆಂಕಟೇಶ್ ಸರ್ ನಮಗೆ ಮೇಷ್ಟ್ರಾಗಿ ಬಂದಿದ್ದರು. ಹನ್ನೊಂದು ಜನರ ನಮ್ಮ ತಂಡವನ್ನು ಎರಡು ತಿಂಗಳ ಕಾಲ ಮಮತೆಯಿಂದ ಸಲುಹಿ ನಮಗೆ ರಂಗಕಲೆಯ ಒಳಹೊರಗನ್ನು ಕಲಿಸುತ್ತಿದರು. ಆದರೆ ನಮ್ಮ ಅತಿಯಾದ ಮಂಗಾಟದಿಂದ ಬೇಸತ್ತು ಕೆಲವೊಮ್ಮೆ ಅವರ ತಾಳ್ಮೆ ಕಟ್ಟೆಯೊಡೆದು ಬಿಡುತ್ತಿತ್ತು. ಅಂದು ಆದದ್ದೂ ಅದೇ.

ವಿಜಯರೆಡ್ಡಿ ಸುರಪುರದವನು. ನಮ್ಮ ನಾಟಕದ ಭಾಷೆ ಧಾರವಾಡ ಧಾಟಿಯದು. ಅವನ ಡೈಲಾಗು "ಸಂಕಟಕಾಲಕ್ಕೆ ಹತ್ತ ಹತ್ತರ, ಅದು ತೀರಿದ ಮ್ಯಾಲ ಅತ್ತತ್ತರ" ಎಂಬುದಿತ್ತು. ಅವನು ತನಗೇ ಗೊತ್ತಿಲ್ಲದೇ ಈ ಡೈಲಾಗಿಗೆ ತನ್ನ ಸುರಪುರ ಭಾಷೆಯನ್ನೂ ಜೊತೆಗೆ ತುಸು ಗ್ರಾಂಥಿಕ ಭಾಷೆಯ ಒಗ್ಗರಣೆಯನ್ನೂ ಸೇರಿಸಿ 'ಹ' ಇದ್ದಲ್ಲಿ 'ಅ', 'ಅ' ಇದ್ದಲ್ಲಿ 'ಹ' ಹೇಳಿ, ಸ್ವರವಿದ್ದಲ್ಲಿ ವ್ಯಂಜನ, ವ್ಯಂಜನವಿದ್ದಲ್ಲಿ ಸ್ವರ ಸೇರಿಸಿ ಅಧ್ವಾನ ಮಾಡಿಬಿಡುತ್ತಿದ್ದ. ಅದು ಮೇಷ್ಟ್ರ ತಾಳ್ಮೆಯನ್ನು ಪರೀಕ್ಷಿಸುತ್ತಿತ್ತು.

***

ಹನ್ನೊಂದು ಜನರ ನಮ್ಮ ತಂಡದಲ್ಲಿ ಐವರು ಹುಡುಗಿಯರಿದ್ದೆವು. ಮೊದಲದಿನ ಸ್ಕ್ರಿಪ್ಟನ್ನು ರೀಡಿಂಗ್ ಮಾಡಿಸುತ್ತಿದ್ದಾಗ ನಮಗೊಂದು ಆಘಾತ ಕಾದಿತ್ತು. ಇಡೀ ನಾಟಕದಲ್ಲಿ ಒಂದಾದರೂ ಸ್ತ್ರೀಪಾತ್ರವಿರಲಿಲ್ಲ. ಆ ದಿನದ ಕ್ಲಾಸು ಮುಗಿದ ತಕ್ಷಣ ನಾವು ಹುಡುಗಿಯರು ಮೇಷ್ಟ್ರ ಬಳಿ ಹೋಗಿ ಈ ನಾಟಕ ಬೇಡವೇ ಬೇಡವೆಂದೂ, ಬೇಂದ್ರೆಯವರದೇ 'ಹೊಸ ಸಂಸಾರ' ನಾಟಕವನ್ನು ಆಡಿದರೆ ಒಳ್ಳೆಯದಾಗುತ್ತಿತ್ತೆಂದು ಅಪೀಲ್ ಮಾಡಿದೆವು. ಆದರೆ ಮೇಷ್ಟ್ರು ಮಾತ್ರ ಖಡಾಖಂಡಿತವಾಗಿ ನಮ್ಮ ಮಾತನ್ನು ತಳ್ಳಿಹಾಕಿಬಿಟ್ಟರು. ಅಷ್ಟೇ ಅಲ್ಲ, ಅಲ್ಲಿರುವ ಪುರುಷಪಾತ್ರಗಳನ್ನೇ ನೀವೂ ಮಾಡುತ್ತೀರಿ ಎಂದರು. ಆ ಕ್ಷಣ ನಾವೆಲ್ಲ ಗಲಿಬಿಲಿಗೊಂಡೆವು. ನಾಟಕವೆಂದರೆ ಸ್ಟೇಜಿನ ಮೇಲೆ ಬಣ್ಣಬಣ್ಣದ ಬಟ್ಟೆ ತೊಟ್ಟು ಚೆನ್ನಾಗಿ ಕಾಣುವುದು, ಚೆಂದವಾದ ದನಿಯಲ್ಲಿ ಮಾತನಾಡುವುದು ಅಂತ ಮಾತ್ರ ಅಲ್ಲಿಯವರೆಗೆ ನಾವು ತಿಳಿದಿದ್ದೆವು. ನಾಳೆ ಬರಬೇಕಾದರೆ ಹಳ್ಳಿಯ ಗಂಡಸರು ಹೇಗೆ ಮಾತನಾಡುತ್ತಾರೆ ಅಂತ ಅಭ್ಯಾಸ ಮಾಡಿಕೊಂಡು ಬನ್ನಿ ಅಂತ ಸರ್ ಹೇಳಿದರು. ಅವರ ಸಪ್ಪ ದನಿಯನ್ನು ಕೇಳಿ ನಾವು ಸಪ್ಪೆಮೋರೆ ಮಾಡಿಕೊಂಡು ಮನೆಯತ್ತ ನಡೆದಿದ್ದೆವು. ಆದರೆ ಮುಂದಿನ ಎರಡೇ ತಿಂಗಳಲ್ಲಿ ದುರುಗಪ್ಪ, ಅರಬಣ್ಣ, ಸಿದ್ದಪ್ಪ, ಮಾರಿ ಪಾತ್ರಗಳನ್ನು ಮೈದುಂಬಿಕೊಂಡ ನಮ್ಮ ಖುಷಿ, ಸಂಭ್ರಮ ಹೇಳತೀರದಾಗಿತ್ತು.

***

ನಮ್ಮ ತಂಡದಲ್ಲಿ ಅಕ್ಷು, ಕಲಾ, ಮಾಲತೇಶ, ನವೀನ ಮತ್ತು ಪ್ರಣೀತ್ ತುಂಬ ಚೆನ್ನಾಗಿ ಅಭಿನಯಿಸುತ್ತಿದ್ದರು. ಅದರಲ್ಲೂ ಅಕ್ಷು ಸಿದ್ದಪ್ಪನ ಪಾತ್ರದಲ್ಲೇ ಕರಗಿಹೋದಷ್ಟು ತನ್ಮಯಳಾಗಿಬಿಟ್ಟದ್ದಳು. ಅವಳ "ಮಾತ ದಾರಿ, ತಪ್ಪಿದರ ಮಾರಿ. ಮಾತ ಜ್ಯೋತಿ, ಆದರೂ ತಪ್ಪಿ ಹಿಡಿದರ ಸುಟ್ಟಬಿಡತೈತಿ ಹಿಡಿದವರನ್ನ ಹಿಡಿಸಿಕೊಂಡವರನ್ನ ಕೂಡೇ!" ಎಂಬ ಮಾತು ಪ್ರೇಕ್ಷಕರನ್ನೂ ಅಂತರಂಗಕ್ಕಿಳಿಸಿಕೊಳ್ಳುತ್ತಿತ್ತು. ಆ ಪಾತ್ರಕ್ಕಾಗಿ ಅವಳಿಗೆ ಆ ನಾಟಕ ಸರಣಿಯ ಅತ್ಯುತ್ತಮ ನಟಿ ಪುರಸ್ಕಾರ ಕೂಡ ದೊರಕಿತು.

ಆದರೆ ನಾವು ಉಳಿದವರೆಲ್ಲ ಅಷ್ಟಕ್ಕಷ್ಟೇ. ನನಗೆ 'ದುರುಗಪ್ಪ'ನ ಪಾತ್ರ ಕೊಟ್ಟಿದ್ದರು. ದಲಿತರ ನಾಯಕನ ಪಾತ್ರವದು. ಎಷ್ಟೇ ಪ್ರಯತ್ನಪಟ್ಟರೂ ನನ್ನ ಧ್ವನಿಯಲ್ಲಿ ನಾಯಕನ ಗಡಸುತನ ಬರುತ್ತಲೇ ಇರಲಿಲ್ಲ. ಪ್ರತೀ ಸಲ ಸ್ಟೇಜಿಗೆ ಹೋದಾಗಲೂ ಡೈಲಾಗ್ ಎಲ್ಲಿ ಮರೆತು ಹೋಗುತ್ತದೋ ಅಂತ ಒಂದು ನಮೂನೆ ಆತಂಕದಲ್ಲಿಯೇ ಇರುತ್ತಿದ್ದೆ. ನನ್ನ ಪಾಲಿಗಿದ್ದ ಹದಿನಾರೂವರೆ ಡೈಲಾಗನ್ನು ಉರುಹೊಡೆದಂತೆ ಹೇಳಿಬಿಡುತ್ತಿದ್ದೆ. ಕೊನೆಯ ಸೀನಿನಲ್ಲಿ ನಾನು ಸಾಯಬೇಕಿತ್ತು. ಆ ಸಮಯದಲ್ಲಿ ಐದು ನಿಮಿಷ ಮೊದಲೇ ಸತ್ತು ಬೇರೆಯವರ ಡೈಲಾಗ್ ಕೂಡ ತಪ್ಪಿಸಿ ಪಾಪ ಅವರು ನಿರಾಸೆಗೊಳ್ಳುವ ಹಾಗೆ ಮಾಡಿಬಿಡುತ್ತಿದ್ದೆ. ನಡುವೆ ಒಬ್ಬರು ಮಾತು ತಪ್ಪಿದರೂ ನನಗೆ ಒಂಬತ್ತನೆಯ ಡೈಲಾಗ್ ಹನ್ನೊಂದನೆಯದಾಗಿ, ಹನ್ನೊಂದನೆಯದು ಎಂಟನೆಯದಾಗಿ ಎಲ್ಲ ಗಲಿಬಿಲಿಯಾಗಿ ಬಿಡುತ್ತಿತ್ತು. ಗಂಡಸರ ಮ್ಯಾನರಿಸಂ ತೋರಿಸಬೇಕು ಕಣ್ರೀ ಅಂತ ಮೇಷ್ಟ್ರು ಸೂಕ್ಷ್ಮವಾಗಿ ಹೇಳಿದ್ದರೂ, ಸ್ಟೇಜಿನ ...... ಮೇಲೆ ಹೋದ ಕೂಡಲೆ ನಾನು ಸ್ವಲ್ಪ ಅಬ್ಬರಿಸಿದಂತೆ ಮಾಡಿ ಹದಿನಾಲ್ಕನೆಯ ಡೈಲಾಗಿಗೆ ಬರುವಹೊತ್ತಿಗೆ ಗುಣುಗುಣು ಅಂತಷ್ಟೇ ದನಿ ತೆಗೆದು ಬಂದುಬಿಡುತ್ತಿದ್ದೆ.ನಾಟಕದ ಮೊದಲ ಡೈಲಾಗೇ ನನ್ನದು. ಅದನ್ನು ನಾನು ಕೈಯಲ್ಲಿ ಬೀಡಿ ಹಿಡಿದು ಮಾತನಾಡಬೇಕಿತ್ತು. ರಿಹರ್ಸಲ್ ಮಾಡಬೇಕಿದ್ದರೆ ನವೀನನಿಗೊಂದು ಐಡಿಯಾ ಹೊಳೆಯಿತು. ಅವನು ನನ್ನತ್ತ ತಿರುಗಿ "ಒಂದು ದಮ್ ಎಳೆದ್ರ ನಿನ್ನ ದನಿ ಸರಿ ಆಗ್ಬಹುದು ನೋಡ ಲೇ" ಅಂತಂದ. ಸರ್ ನನ್ನ ಮುಖ ನೋಡಿದರು. "ರೂಢಿ ಇಲ್ಲ ಸರ್, ಆದರೂ ಟ್ರೈ ಮಾಡಬಹುದು" ಅಂತಂದೆ.

ತಗೋ ಈ ವಿಷಯ ಹೇಳಿದ್ದೇ ತಡ ಮನೆಯಲ್ಲಿ ಎಲ್ಲರೂ ಹುರುಪಾಗಿಬಿಟ್ಟರು. ಇಲೆಕ್ಷನ್ ಡ್ಯೂಟಿ ಅಂತ ನಮ್ಮ ಮೇನ್ ಶೋಗೆ ಬರುವುದಿಲ್ಲ ಅಂತ ಹೇಳಿದ್ದ ಪಪ್ಪ ಕೂಡ, ನಿನ್ನ ಅದೊಂದು ಸೀನ್ ನೋಡಲಾದರೂ ನಾಟಕಕ್ಕೆ ಬಂದೇ ಬರುತ್ತೇನೆ ಅಂತ ಅಭಯವಿತ್ತರು. ನನ್ನ ತಂಗಿ ನವ್ಯಾ "ಧೀ, ಮೂಗಿನಿಂದ ಹೊಗೆ ಬಿಡ್ಲೇ, ಎಫೆಕ್ಟಿವ್ ಆಗತ್ತೆತಿ" ಅಂತ ಸಲಹೆ ನೀಡಿದಳು. ಅಮ್ಮನಿಗೇ ಸ್ವಲ್ಪ ಆತಂಕವಿತ್ತು. ಮೊದಲಬಾರಿ ಅದೂ ಸ್ಟೇಜಿನಮೇಲೆ ಸಿಗರೇಟು ಸೇದುತ್ತಿದ್ದ ನನಗೆ ಕೆಮ್ಮು ಹತ್ತಿ ನಾನು ಎಲ್ಲಿ ಮತ್ತೆ ಡೈಲಾಗು ಮರೆಯುತ್ತೇನೋ ಅಂತ ಅಮ್ಮ ಕಳವಳಗೊಂಡಿದ್ದರು.

ಆದರೆ ಪುಣ್ಯಕ್ಕೆ ಅಂಥದೇನೂ ಆಗಲಿಲ್ಲ. ಎಲೆಯಲ್ಲಿ ಮಡಿಸಿ ಕಟ್ಟಿದ್ದ ಹರ್ಬಲ್ ಸಿಗಾರ್ ಹಿಡಿದು ಸುರುಳಿ ಸುರುಳಿಯಾಗಿ ಹೊಗೆ ಬಿಡುತ್ತಲೇ ನಾನು "ಏ ಮಾರಿ, ಆಟ್ ಯಾಕ ಗಡಿಬಿಡಿ? ಹೋಗೂನಲ್ಲ, ಒಂದೀಟು ಸೇದಿ ಪಾದಿ" ಅಂತ ನನ್ನ ಡೈಲಾಗ್ ಹೇಳಿದ್ದೆ. ಆದರೆ ಅಂದು ಶೋ ಮುಗಿದಮೇಲೆ, ಛೇ, ಸಿಗರೇಟು ಕೈಯಲ್ಲಿದ್ದರೂ ನಿನ್ನ ಧ್ವನಿ ದೊಡ್ಡದಾಗಲೇ ಇಲ್ವಲ್ಲಲೇ ಅಂತ ನನ್ನ ಸ್ನೇಹಿತರೆಲ್ಲ ತಲೆತಲೆ ಚಚ್ಚಿಕೊಂಡರು.

ನನ್ನ ಬಿಎಸ್ಸಿಯ ನೆನಪುಗಳ ಜೊತೆ ಆ ನಾಟಕ ಶಿಬಿರ ಕೂಡ ಬೆಸೆದುಕೊಂಡಿದೆ. ಎರಡೇ ತಿಂಗಳಲ್ಲಿ ನಮ್ಮನ್ನು ಹೊಸ ಮನುಷ್ಯರನ್ನಾಗಿ ರೂಪಿಸಿದ್ದ ವೆಂಕಟೇಶ್ ಸರ್ ರ ತಾಯಿಪ್ರೀತಿ, ನಮ್ಮ ರಿಹರ್ಸಲ್ ರೂಮು, "ಆಂಗಿಕಂ ಭುವನಂ ಯಸ್ಯ" ಅಂತ ಶುರುವಾಗುವ ನಮ್ಮ ತಾಲೀಮು, ಗೆಳೆಯ ಗೆಳತಿಯರ ಕಲರವ, ನಮ್ಮ ಕೀಟಲೆಗಳು ಎಲ್ಲ ನೆನೆಸಿಕೊಂಡರೆ ಮನಸ್ಸು ಹಸಿಯಾಗುತ್ತದೆ, ಒಳಗೆ ತಣ್ಣನೆಯ ಗಾಳಿ ಒಮ್ಮೆ ಬೀಸಿ ಇದ್ದಲ್ಲೇ ನಮ್ಮನ್ನು ಹೊಸಬಳನ್ನಾಗಿಸುತ್ತದೆ.

## ಉ. ಕರ್ನಾಟಕ ಮಂದಿಯ ಅಡ್ಡ ಹೆಸರು (ಸರ್ನೇಮ್)

ನಮ್ಮ ಉತ್ತರ ಕರ್ನಾಟಕದ ಮಂದಿಯ ಸರ್ನೇಮ್ ಭಾರೀ ಚಂದ! "ಮಜಾ ಮಜಾ" ಇರತಾವ. ದ.ಕನ್ನಡದಂಗ ಭಟ್, ಶೆಟ್ಟಿ ಹಿಂಗ ಕಾಮನ್ ಹೆಸರು ಇಟಗೊಳ್ಳಲ್ಲರಿ. ಯಾಕಂದ್ರ ಏಕ ವಚನ ಆಗ್ತದ, ಯಾರರ "ಲೇ!, ಶೆಟ್ಟಿ ಬಾರಲಾ ಅಂತ ಮಂದ್ಯಾಗ ಕರದ್ರ, ಮರ್ಯಾದಿ ಪ್ರಶ್ನಿ..ಅದಕ್ಕ, ಶೆಟ್ಟೆಪ್ಪನವರ,ಪಟ್ಟಣಶೆಟ್ಟಿ,ಕೋರಿಶೆಟ್ಟರ್, ಹಿಂಗೆಲ್ಲ ಇಟಗೊತಾರ. ಒಂಥಾರ self respect maintain ಮಾಡ್ತಾರ!. ಯಾವ ಯಾವ ತರಹ ಸರ್ನೇಮ ಇರ್ತವ ಅಂತ ಸ್ವಲ್ಪ ನೋಡೋಣ್ ಬರ್ರಿ..

- ಧರಿಸುವ ಬಟ್ಟೆಯ ಸರ್ನೇಮ್: ವಸ್ತ್ರದ,ಪಟ್ಟೆದ್,ತಾಡಪತ್ರಿ, ಧೋತ್ರದ್, ಕುಬಸದ್, ಟೊಪಗಿ, ಚೊಣ್ಣದ್,ಲಂಗೊಟಿ, ಕಂಬಳಿ, ..
- ಬಾಂಡೆ ಸಾಮಾನುಗಳ ಸರ್ನೇಮ್: ಬಾಂಡಗೆ, ತಂಬಣ್ಣನವರ, ವಾಟಿಗೆ, ಹಂಡಿನವರ, ತಾಟಗೊಳ, ತೋಪದ್.
- ಸಿಹಿ ತಿನಿಸುಗಳ ಸರ್ನೇಮ್: ಬೆಲ್ಲದ್, ಸಕ್ಕರಿ, ಅಂಟಿನ್, ಉಂಡಿ.
- ಜಂಟಿ ಪದದ ಸರ್ನೇಮ್: ಬುರಬುರೆ, ಗಲಗಲಿ, ಕುರಕುರೆ, ಜಿಗಜಿನ್ನಿ, ಜಗಜಂಪಿ.
- ಪ್ರಾಣಿಗಳ ಹೆಸರೂ ಸರ್ನೇಮ್ ಇಟಗೊಂಡಾರ: ಎಮ್ಮಿ, ಗೊಡ್ಡೆಮ್ಮಿ, ಕರಡಿ, ಹುಲಿ, ಜಿಂಕಿ, ಚೋಳದ್, ಚೋಳಪ್ಪನವರ್, ಹಾವುನೂರ್, ಆನೆಗುಂದಿ,ಹಂದಿಗೋಳ.
- ಮನಿಯ ಮೇಲೂ ಸರ್ನೇಮ್: ಮೇಲಿನಮನಿ, ಕೆಳಗಿನಮನಿ, ನಡುವಿನಮನಿ, ಗುಡಸಲಮನಿ, ಹುಲಮನಿ, ಹಂಚಿನಮನಿ, ಹಾದಿಮನಿ, ಕಡೇಮನಿ, ಅಗಸಿಮನಿ,ಮೂಲಿಮನಿ,ಕಳ್ಳಿಮನಿ, ಕಟ್ಟಿಮನಿ..
- ಪಕ್ಷಿಗಳನ್ನು ಬಿಟ್ಟಿಲ್ಲ.: ಚಟಗುಬ್ಬಿ, ಗುಬ್ಬಿ,ಕಾಗಿ,ಗೂಗಿಕೊಳ್ಳ,ಕೋಗಿಲಕರ್,ಗಿಣಿಮಾವ.
- ಇನ್ ಹಲವರು Handicapped ತರಹ ಹೆಸರು: ಕುರುಡಿಕೇರಿ, ಕಿವುಡಸಣ್ಣವರ್, ಕುಂಟೆಪ್ಪನವರ್, ಮೂಕಣ್ಣವರ್.
- ಅಡುಗಿ ಸಾಮಾನ ಸರ್ನೇಮ್: ಉಳ್ಳಾಗಡ್ಡಿ, ಬಳ್ಳೊಳ್ಳಿ, ಮೆಣಸಿನಕಾಯಿ, ಲಿಂಬಿಕಾಯಿ, ಚುರಮುರಿ, ತುರಮರಿ, ಪುಟಾಣಿ, ಕಡ್ಲಿ, ಟೆಂಗಿನಕಾಯಿ, ಖಾರಪುಡಿ, ಕಡ್ಲಿಪುಡಿ.
- ಗಿಡ ಮರಗಳ ಸರ್ನೇಮ್: ಬಿಳಿ ಎಲಿ, ಇಪ್ಪೆ ಎಲಿ, ಬಾರಿಗಿಡದ್, ಜಾಲಿಮರದ್, ತೋಟರ, ತೋಟದ್...
- ಊರನ್ಯಾಗಿನ ಕಟ್ಟೆಗಳನ್ನು ಬಿಟ್ಟಿಲ್ಲ: ಹುಣಸಿಕಟ್ಟಿ, ಬೆವಿನಕಟ್ಟಿ, ತೋರಣಕಟ್ಟಿ, ಬಾವಿಕಟ್ಟಿ, ಬನ್ನಿಕಟ್ಟಿ, ಗೊಂಜಾಳಕಟ್ಟಿ, ಮಾವಿನಕಟ್ಟಿ, ತಾಳಿಕಟ್ಟಿ. ಹೀಗೆ ಇನ್ನೂ ಬಾಳ್ ಬಾಳ ಅದಾವು...

ಮುಂದಿನ ಸಲ ನಮ್ಮ **ಅಶೋಕ್ ಕಟ್ಟಿಮನಿ** ಭೇಟಿ ಅದಾಗ, ಎಷ್ಟು ಮನಿ ಕಟ್ಟಿದ್ದೀರಾ ಅಂತ ಮರೆಯದೆ ಕೇಳ್ರಿ! ಹಾಗೆಯೆ ನಮ್ಮ **ಗಿರೀಶ್ ನಿಂಬೆಕಾಯಿ** ಹತ್ರ ನಿಂಬೆಕಾಯಿ, **ಸಂತೋಷ್ ಕಡ್ಲೆಬೇಳೆ** ಹತ್ರ ಕಡ್ಲೆಬೇಳೆ ಇಸ್ಕೊಳ್ಳದ್ದನ್ನು ಮರಿಬ್ಯಾಡ್ರಿ !

ಸಂಚಿಕೆ
೧೦
ಮೇ, ೨೦೧೭

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಬಾವಲಿಹಂಡಿ ಹುಗ್ಗಿಯಾದ ಬಗೆ



ಆಶಾ ಮೇಲಕೋಟೆ

**ಇಂ**ದು ಬೆಳಗ್ಗೆ (ಭಾನುವಾರ) ನಾನು : ದೋಸೆ ಹಿಟ್ಟಿದೆ ... ಚಟ್ನಿ ಮಾಡಿಬಿಡ್ತೀನಿ, brunch ಮಾಡಿದ್ರಾಯ್ತು ...

ಸಿಂಹ ( ನನ್ನ ಪತಿ ) : ನಂಗೆ ದೋಸೆ ಬೇಡ, ಕಿಚಡಿ ತಿನ್ಬೇಕು ಅನ್ನಿಸ್ತಾ ಇದೆ... ನಾನೇ ಬಾವಲಿಹಂಡಿ ಮಾಡ್ಬಿಡ್ತೀನಿ brunchಗೆ ( ಕೈಗೆ ಸಿಕ್ಕ ತರಕಾರಿ, ಮಸಾಲೆ, ಉಪ್ಪು, ಖಾರ, ಹೆಸರುಬೇಳೆ, ಅಕ್ಕಿ ಎಲ್ಲವನ್ನೂ ಸೇರಿಸಿ, ನೀರು ಸುರಿದು, ಒಟ್ಟಿಗೆ ಬೇಯ್ಸಿ ಬಡಿಯೋ ಅಂತ ಒಂದು ಖಾದ್ಯ :)

ನಾನು ಗಾಬರಿಯಿಂದ 'ಇಲ್ಲ, ಇಲ್ಲ..ನಾನೇ ಬೇಗ ಹುಗ್ಗಿ ಮಾಡಿಬಿಡ್ತೀನಿ..' ಸರಿ, ಅಡಿಗೆಮನೆಯ ಕಡೆ ಹೋಗುತ್ತಾ, ಅಲ್ಲೇ ಮೇಜಿನ ಮೇಲಿದ್ದ, ವಾರದ ಹಿಂದೆ ಅತ್ತಿಗೆ ಕುಂಕುಮ ಕೊಟ್ಟು ಕೊಟ್ಟಿದ್ದ ತೆಂಗಿನಕಾಯಿ ಕಣ್ಣಿಗೆ ಬಿತ್ತು. 'ಅಯ್ಯೋ, ಆಗಲೇ ಒಂದು ವಾರ ಆಯ್ತು, ಕಾಯಿ ಚೆನ್ನಾಗಿದೆ ಅನ್ಸುತ್ತೆ, ಇವತ್ತೇ ಒಡೆದು, ತುರಿದಿಟ್ಟುಬಿಡಬೇಕು' ಯೋಚಿಸುತ್ತಾ, ಹುಗ್ಗಿಗೆ ಎಲ್ಲ ಕೂಡಿಸಿಟ್ಟು, ಕುಕ್ಕರ್ ಜೋಡಿಸಿ, ಅತ್ಲಾಗೆ ಈಗಲೇ ಮುಗಿಸಿಬಿಡೋಣ ಈ ಕೆಲಸ ಅಂದುಕೊಂಡು 'ಸಿಂಹ, ಕಾಯಿ ಒಡೆದು ಕೊಡೋಕೆ ಆಗುತ್ತಾ ?' ... ಸಿಂಹ ಒಡೆದು ತಂದ ಕಾಯಿ ನೋಡಿ ಬಹಳ ಸಂತೋಷ ಆಯ್ತು... ಸಮನಾದ ಎರಡು ಹೋಳುಗಳು, ಮೆತ್ತಗೆ, ಬೆಳ್ಳಗಿರುವ, ದಳವಾದ ಕಾಯಿ :) ಸರಿ ತುರಿಯಲು ಕೂತೆ. ಬೆಣ್ಣೆಯಂತಹ ಕಾಯಿ ತುರಿ ಮೊರದಲ್ಲಿ ಬೀಳುತ್ತಿದ್ದಂತೆ, ಅಣ್ಣನ ( ನನ್ನ ತಂದೆಯ) ನೆನಪು ಉಕ್ಕಿ, ಉಕ್ಕಿ ಬಂತು... ಮನಸ್ಸು ಹಿಂದೆ ಓಡಿತು... ಅವರ ಪರಮಾಪ್ತ ಮಿತ್ರರಾದ ವೆಂಕಟರಾಮಯ್ಯನವರ ತೋಟದಿಂದ ತಂದ ತೆಂಗಿನಸಸಿಯನ್ನು ತಾವೇ ನೆಟ್ಟು, ಪ್ರೀತಿಯಿಂದ ಬೆಳೆಸಿದ ತೆಂಗಿನಮರದ ಕಾಯಿಯನ್ನು ಅವರೇ ಸುಲಿದು, ಸಮನಾಗಿ ಒಡೆದು, ಅದರ ನಾರನೆಲ್ಲ ತೆಗೆದು ನುಣ್ಣಗೆ ಮಾಡಿ, ಅವರೇ ತುರಿಯಲು ಕುಳಿತಾಗಿನ ಅವರ ಹೆಮ್ಮೆ ...ತೆಂಗಿನಕಾಯಿ ಹೇಗೆ ತುರಿಯಬೇಕು ಅನ್ನುವುದರ ಬಗ್ಗೆ ಪಾಠ... ಹೇಗೆ ಎಚ್ಚರಿಕೆ ಇರಬೇಕು ಕೈ ತುರಿದುಕೊಳ್ಳದ ಹಾಗೆ, ತುರಿಯುವಾಗ ಏಕಾಗ್ರತೆ ಹೇಗಿರಬೇಕು, ಸಣ್ಣ ತುರಿ ಬರುವಂತೆ ತುರಿಯಲು ಹೇಗೆ ಭದ್ರವಾಗಿ ಯಾವ ರೀತಿ ತೆಂಗಿನಹೋಳನ್ನು ಹಿಡಿದಿರಬೇಕು, ತುರಿದಮೇಲೆ ಬಿಳಿ ತುರಿ, ಕಂದು ತುರಿಯನ್ನು ಬೇರೆ ಬೇರೆ ಗುಪ್ಪೆಮಾಡುವುದು .... 'ಕರಟ ಕೇರೀಬಾರದು' ಎಚ್ಚರಿಕೆ ಕಿವಿಯಲ್ಲಿ ಮೊಳಗಿತು.



'ನೋಡು ಇದರ ಜುಂಗು ಹೇಗಿದೆ! ನಿನ್ನ ದೋಸೆ ಕಾವಲಿಗೆ ಎಣ್ಣೆ ಸವರೋದಿಕ್ಕೆ ಪರ್ಫೆಕ್ಟ್ ಆಗಿದೆ...,ಕರಟ ನೋಡು, ಒರಳಿನಿಂದ ನೀರು ತೆಗೆಯೋದಿಕ್ಕೆ ಫಸ್ಟ್ ಕ್ಲಾಸ್ ಆಗಿದೆ...

ಅಮ್ಮ : ತೆಂಗಿನಕಾಯಿ ವರ್ಣನೆ ಸಾಕು. ಏಳಿ ಇನ್ನು ... ಹೊತ್ತಾಯ್ತು , ಮಡಿ ಉಟ್ಕೋಳಿ, ಹುಗ್ಗಿ ಮಾಡ್ತಾ ಇದೀನಿ, ಆರಿ ಹೋಗುತ್ತೆ ಅಷ್ಟೇ'.

ಅಣ್ಣ: ಏನೇ ಒಂದು ಕೆಲಸ ಮಾಡಿದ್ರೂ ಬೇರೆಯವರು ನಿಂತು ನೋಡಿ, ಮೆಚ್ಚೋ ಹಾಗಿರಬೇಕು... ಅದೇ ಕೆಲಸವನ್ನ ತಿರುಗಿ ಮಾಡೋ ಹಾಗಿರಬಾರದು. ಅಂದಹಾಗೆ, ಹುಗ್ಗಿಗೆ ಕಾಯಿತುರಿ ಬೆಲ್ಲ ಮಾಡೋದು ಮರೀಬೇಡ'.

ನನ್ನ ಅಣ್ಣನಿಗೆ ಪರಮಪ್ರಿಯವಾದ ಖಾದ್ಯ, ಹುಗ್ಗಿ ಕಾಯಿತುರಿಬೆಲ್ಲ :) ಸ್ನಾನ ಮಾಡಿ, ಅವರ ಬಟ್ಟೆಗಳನ್ನೆಲ್ಲ ಒಗೆದು, ಅಚ್ಚುಕಟ್ಟಾಗಿ ತಂತಿಯಮೇಲೆ ಒಣ ಹಾಕಿ, ಕ್ಲಿಪ್ ಹಾಕಿ, ಶುಭ್ರವಾಗಿ, ಕೊಕ್ಕರನ ಗರಿ ಹಾಗಿರೋ ಬಿಳೀ ಪಂಚೆ, ತುಂಬುತೋಳಿನ, ಮೊಣಕೈವರೆಗೂ ಸಮನಾಗಿ ಸುರುಳಿ ಸುತ್ತಿರುವ, ಬಿಳೀ ಶರ್ಟ್ ಧರಿಸಿರುವ ಪ್ರಸನ್ನ ವದನದ ಅಣ್ಣ ಊಟದ ಮೇಜಿನಲ್ಲಿ ಉಪಸ್ಥಿತರು. ಅಮ್ಮ ಅಣಿಯಾಗಿ, ತಟ್ಟೆಯಲ್ಲಿ ಹಬೆಯಾಡುತ್ತಿರುವ ಹುಗ್ಗಿ, ಮೇಲೆ ಸ್ವಲ್ಪ ಸುರಿದು ಹೋಗುವಂತೆ ಹಾಕಿರುವ ಅಂದೇ ಮಾಡಿರುವ ಬೆಣ್ಣೆ ಕಾಯಿಸಿದ ತುಪ್ಪ, ಪಕ್ಕಕ್ಕೆ ಕಾಯಿತುರಿಬೆಲ್ಲ ಇರುವ ತಟ್ಟೆ ಅಣ್ಣನ ಕೈಗೆ ಕೊಟ್ಟು, ಅವರು ಹುಗ್ಗಿ ಬಾಯಿಗಿಡುವುದನ್ನೇ ಕಾದಿದ್ದು 'ಹೇಗಿದೆ? ಏನೂ ಹೇಳಲೇ ಇಲ್ಲವಲ್ಲ' ಅಣ್ಣ ಕೊಂಚ ರೇಗಿಸುವ ದನಿಯಲ್ಲಿ 'ಉಪ್ಪು, ಖಾರ ಹೆಚ್ಚು ಕಡಿಮೆ ಆಗಿದೆ ಅಂದ್ರೆ ಏನಾದ್ರೂ ಹೇಳ್ತಾರೆ... ಎಲ್ಲ ಸರಿಯಾಗಿರೋವಾಗ ಹೇಳೋದೇನಿದೆ?' ಅಮ್ಮ ಒಂದೆರಡು ನಿಮಿಷ ತಡೆದು 'ಆದರೂ ಗಾದೇನೇ ಇದೆಯಲ್ಲಾ, ವಚನಕ್ಕೆ ದರಿದ್ರವೇ?ಪಿಶಾಚಿ ಬ್ರಾಹ್ಮಣ' ಅಂತ...

## ಆ ಹುಡುಗಿ



ಮಮತ ಜಿ.ಆರ್

**ಆ**ಗ ನನ್ನ ತಮ್ಮ ಬಿಜಾಪುರದ ಆಲ್ ಅಮೀನ್ ಮೆಡಿಕಲ್ ಕಾಲೇಜಿನಲ್ಲಿ ಮೊದಲನೆಯ ವರ್ಷ ಎಂ.ಬಿ.ಬಿ.ಎಸ ಓದುತ್ತಿದ್ದ. ಹಾಸ್ಟೆಲ್ನಲ್ಲಿ ಇರಲು ಇಷ್ಟವಿರದ ಕಾರಣ ಒಂದು ಬೆಡ್ ರೂಮಿನ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡಿದ್ದ. ವಯಸ್ಸಾದ ಮಹಿಳೆಯೊಬ್ಬರು ಮನೆ ಕೆಲಸ ಹಾಗು ಅಡಿಗೆ ಮಾಡಲು ಬರುತ್ತಿದ್ದರು. ನನ್ನ ತಮ್ಮನ ನಾಲ್ಕೈದು ಮಂದಿ ಸ್ನೇಹಿತರು ಆಗಾಗ ಕಂಬೈನ್ಡ್ ಸ್ಟಡಿ ಮಾಡಲು ಬರುತ್ತಿದ್ದರು. ಹಾಗೆ ಬಂದಾಗ ರಾತ್ರಿಯೆಲ್ಲಾ ಎಲ್ಲರೂ ಕೂಡಿ ಓದುವುದು ಅಭ್ಯಾಸವಾಗಿತ್ತು. ನನ್ನ ತಮ್ಮನಿದ್ದ ಆ ಮನೆ ರಸ್ತೆಬದಿಯಲ್ಲಿದ್ದು ಸಮೀಪದಲ್ಲಿ ಯಾವ ಮನೆಗಳಿರದೆ ಸ್ವಲ್ಪ ನಿರ್ಜನ ಅನ್ನಬಹುದಾದಂತಹ ಪ್ರದೇಶವಾಗಿತ್ತು. ಮನೆಯ ಎದುರಿನ ರಸ್ತೆ, ಪಕ್ಕದ ಹಳ್ಳಿಯೊಂದಕ್ಕೆ ಹೋಗುತ್ತಿದ್ದು, ಹಳ್ಳಿಗರು ಅದರಲ್ಲಿ ಓಡಾಡುವುದು ಸಾಮಾನ್ಯ ದೃಶ್ಯವಾಗಿತ್ತು.

ಅದೊಂದು ದಿನ ನನ್ನ ತಮ್ಮ ಮತ್ತು ಅವನ ಸ್ನೇಹಿತರು ಓದುತ್ತ ಕುಳಿತಿದ್ದರು. ರಾತ್ರಿ ಊಟವಾದ ಮೇಲೆ ಮತ್ತೆ ಓದಲು ಮುಂದುವರಿಸಿದರು. ಮಧ್ಯ ರಾತ್ರಿಯ ವೇಳೆಗೆ ಕರೆಂಟ್ ಹೊರಟುಹೋಯಿತು. ಎಲ್ಲರಿಗೂ ಸುಸ್ತಾಗಿತ್ತು. ತಂಗಾಳಿಯ ಹಾಗು ಬಿಸಿ ಚಹಾದ ಅಗತ್ಯವಿತ್ತು. ಆ ಮನೆಯಿಂದ ಒಂಧರ್ದ ಕಿ.ಮೀ. ನಲ್ಲಿ ಚಹಾದ ಚಿಕ್ಕ ಪೆಟ್ಟಿಗೆ ಅಂಗಡಿಯೊಂದಿತ್ತು. ಚಂದ್ರನಿರದ ಕತ್ತಲ ರಾತ್ರಿಯಾದರೂ ಹಿಂಜರಿಯದೆ ಚಹಾ ಕುಡಿಯಲು ಹೊರಟರು. ಸ್ನೇಹಿತರಲ್ಲಿ ಒಬ್ಬನಿಗೆ ಹೋಗಲು ಇಷ್ಟವಿರಲಿಲ್ಲವಾದ್ದರಿಂದ ಆತ ಮನೆಯಲ್ಲೇ ಉಳಿದುಕೊಂಡ.



ಪೆಟ್ಟಿಗೆ ಅಂಗಡಿಯ ಸೇರಿ, ಅದರ ಸಣ್ಣ ಮೇಣದ ದೀಪದ ಸುಖದಲ್ಲಿ ಚಹ ಹೀರುತ್ತಿದ್ದಂತೆ ದೂರದಲ್ಲಿ ಯಾರೋ ಓಡಿ ಬರುತ್ತಿದ್ದಂತೆ ಕಂಡಿತು. ಹತ್ತಿರ ಬಂದ ಮೇಲೆ ತಿಳಿಯಿತು ಆತ ಮನೆಯಲ್ಲೇ ಉಳಿದು ಕೊಂಡಿದ್ದ ಸ್ನೇಹಿತನೆಂದು. ಉಸಿರಾಡಲು ಆಗದಂತೆ ಓಡಿ ಬಂದಿದ್ದ ಆತ ಬೆವರುತ್ತಾ , ನಡುಗುತ್ತಾ ಹೇಳಿದ್ದಿಷ್ಟು. ಒಬ್ಬನಿಗೇ ಮನೆಯೊಳಗೆ ಬೇಜಾರಾಗಿ ಆತ ಮನೆಯ ಹೊರಗಿನ ಮೆಟ್ಟಿಲ ಮೇಲೆ ಕುಳಿತಿದ್ದ. ಆ ಕ್ಷಣದಲ್ಲಿ ,ಕತ್ತಲಲ್ಲಿ ಸೈಕಲ್ಲೊಂದನ್ನು ತಳ್ಳಿಕೊಂಡು ಹಳ್ಳಿಗರೊಬ್ಬರು ರಸ್ತೆಯ ಮೇಲೆ ನಡೆದುಕೊಂಡು ಬಂದರು. ನಿಧಾನವಾಗಿ ನನ್ನ ತಮ್ಮನ ಸ್ನೇಹಿತನ ಹತ್ತಿರ ಬಂದ ಅವರು ಹೀಗೆ ಕೇಳಿದರು, "ದಿನಾ ಇದೇ ಹೊತ್ನಲ್ಲಿ ಬಿಳಿ ಡ್ರೆಸ್ಸಲ್ಲಿ ಈ ಮೆಟ್ಲ್ ಮೇಲೆ ಕೂರ್ತಿದ್ದಲ್ಲ ಆ ಹುಡುಗಿ ಎಲ್ಲಿ?!!!". ಬರಿ ಗಂಡು ವಿಧ್ಯಾರ್ಥಿಗಳಿದ್ದ ಆ ಮನೆಯಲ್ಲಿ ಬಿಳಿ ಡ್ರೆಸ್ಸಿನ ಹುಡುಗಿಯ ಬಗ್ಗೆ ಕೇಳಿ ತಮ್ಮನ ಸ್ನೇಹಿತನ ರಕ್ತವೆಲ್ಲ ಹಿಂಗಿ ಹೋಗಿ ಹಳ್ಳಿಯಾತನನ್ನು ಬಿಟ್ಟು, ಮನೆಯನ್ನು ಬಿಟ್ಟು, ಮೆಡಿಕಲ್ ವಿದ್ಯಾರ್ಥಿಯೆಂದೂ ಮರೆತು, ಆತ ಬರಿಗಾಲಲ್ಲಿ ಚಹಾದ ಅಂಗಡಿಯತ್ತ ಓಡಿಬಂದಿದ್ದ!. ನನ್ನ ತಮ್ಮ ಮತ್ತು ಸ್ನೇಹಿತರೆಲ್ಲ ಹಿಂತಿರುಗಿ ಬಂದು ನೋಡಿದರೆ ಅಲ್ಲಿ ಹಳ್ಳಿಯಾತನಿರಲಿಲ್ಲ ದೆವ್ವವೆಂದು ಹೆದರಿದ್ದ ಬಿಳಿ ಡ್ರೆಸ್ನ ನೀರೆಯಂತೂ ಖಂಡಿತವಾಗಿಯೂ ಇರಲಿಲ್ಲ!. ನೆರೆಯ ಹಳ್ಳಿಗರು ಬಹಳವೇ ಹಾಸ್ಯ ಪ್ರಜ್ಞೆಯುಳ್ಳವರಾಗಿದ್ದು ಈ ಪರಿಯ ಚೇಷ್ಟೆ ಸಾಮಾನ್ಯವೆಂದು ಆಮೇಲೆ ತಿಳಿಯಿತು.

ಉತ್ತರ ಕರ್ನಾಟಕದ, ಕಠಿಣ ಜೀವನದ ಭಾಂದವರ, ಉಡುಗೆ, ಅಡಿಗೆಯಂತೆ ಭಾಷೆ ಹಾಗು ಹಾಸ್ಯಪ್ರಜ್ಞೆಯೂ ಬಹಳವೇ ವಿಶಿಷ್ಟ, ವಿಶೇಷ ಹಾಗು ಅಮೂಲ್ಯ. ಹಾಸ್ಯ ಪ್ರಜ್ಞೆ ಎಂದೊಡನೆ ಗಂಗಾವತಿ ಪ್ರಾಣೇಶ್ ಅವರ ಸಮ್ಮೇಳನಗಳ ಹಾಸ್ಯದ ನೆನಪುಗಳು ಮುದ ನೀಡುತ್ತವೆ.

( ದಯವಿಟ್ಟು ಜಾತಿಯ ವಿಷಯ ಇಲ್ಲಿ ತರುವುದು ಬೇಡ! ಗಾದೆ ಇರೋದು ಹಾಗೆ ) ಏನೋ ಊಟ,ತಿಂಡಿ ತಿಂದೋರು ಒಂದು ಮಾತು. 'ಆಹಾ! ಸೊಗಸಾಗಿದೆ' ಅಂದ್ರೆ, ಮಾಡಿದೋರಿಗೆ ಏನೋ ಸಂತೋಷ' ಅಂತ ಅಣ್ಣನಿಗೆ ಮೆತ್ತಗೆ ಚುರುಕು ಮುಟ್ಟಿಸುತ್ತಿರುವಾಗ, ಅವರಿಬ್ಬರ ಸರಸ ಸಂಭಾಷಣೆ ಕೇಳ್ತಾ, ಕೇಳ್ತಾ ನಾನು ಮೆತ್ತಗೆ ಅಡಿಗೆಮನೆಗೆ ನುಗ್ಗಿ, ಮನಸೋಇಚ್ಛೆ ಕಾಯಿತುರಿ ಬೆಲ್ಲ ಮುಕ್ತಾ, ಮುಕ್ತಾ....

ನೋಡಿ, ನಾನು ಮಾಡಿರುವ ಹುಗ್ಗಿ ಹೇಗಿದೆ? ಸ್ವಲ್ಪ ಹಾಗೆ onlineನಲ್ಲೆ ರುಚಿ ನೋಡಿ, ಹೇಳಿಬಿಡಿ ಮತ್ತೆ !.


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಜಾನಿಯ ರೋಬೊ ಹಾರ್ಸ್ v/s. ಕಲ್ಲೇಶಿಯ ಕ್ಯಾತೆ ಕತ್ತೆ

*( ಇದೊಂದು“ ಟೆಕ್ನಾಲಜಿಯ” ವಿಡಂಬನೆ)*

ಡಾ. ಅಶೋಕ್ ಕಟ್ಟಿಮನಿ


**ಜಾ**ನಿ ಅಂದರೆ ಜನಾರ್ಧನ, ಅಮೇರಿಕದಿಂದ ಬಂದು ತನ್ನ ಮೊದಲ ಸ್ಟಾರ್ಟ್ ಅಪ್ ಕಂಪನಿ, ರೋಬೊ ಹಾರ್ಸ್ ಪ್ರಾರಂಭಿಸಿ ಎರಡು ವರ್ಷ ಕಳೆದಿವೆ. ಹದಿನೈದು ವರ್ಷ ಅಮೇರಿಕದಲ್ಲಿ ಸಾಫ್ಟ್ ವೆರ್ ಇಂಜಿನೀಯರ್, ಆರ್ಕಿಟೆಕ್ಟ್, ಪ್ರೋಗ್ರಾಮ್ ಮ್ಯಾನೇಜರ್, ಹೀಗೆ ಹಲವಾರು ಹುದ್ದೆಗಳಲ್ಲಿ, ಗೂಗಲ್, ಅಮೇಜಾನ್ನಂತಹ ಹೆಸರಾಂತ ಕಂಪೆನಿಗಳಲ್ಲಿ ಕೆಲಸ ಮಾಡಿದ ಜಾನಿಗೆ, ತನ್ನ ಸ್ವಂತ ಊರು ಬೆಂಗಳೂರಿನಲ್ಲಿ ಏನಾದರೂ ಮಾಡಬೇಕೆಂಬ ಮಹದಾಸೆ.

ನಿಮಗೆ ಇದರ ಹಿಂದಿನ ಕಥೆಯನ್ನು ಸ್ವಲ್ಪ ಹೇಳಲೇ ಬೇಕು.... ಜನಾರ್ದನನ ತಂದೆ ರೈತ ಸಿದ್ದಪ್ಪ, ಹೇಗಾದರೂ ಮಾಡಿ ಮಗನನ್ನು ಇಂಜಿನೀರಿಂಗ್ ಓದಿಸಬೇಕೆಂದು ಕನಸು ಕಟ್ಟಿದ್ದ. ಜನಾರ್ಧನ ಕೂಡ ಅಪ್ಪನ ಆಸೆಯಂತೆ ಚೆನ್ನಾಗಿ ಓದಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅಮೇರಿಕಕ್ಕೆ ಬಂದು ಓದಿನಲ್ಲಿ ಎಲ್ಲರ ಮೆಚ್ಚುಗೆ ಗಳಿಸಿದ್ದ, ಜಾನಿಯಾಗಿದ್ದ. ಸಿದ್ದಪ್ಪನ ಮನೆಯ ಹತ್ತಿರ ಇದ್ದ ಮಾಚಯ್ಯನೆಂಬ ಅಗಸನ ಮಗ ಕಲ್ಲೇಶಿ, ಪ್ರೈಮರಿ ಶಾಲೆಯಲ್ಲಿ ಜನಾರ್ದನನ ಕ್ಲಾಸ್ ಮೇಟ್. ಚುರುಕು ಬುದ್ಧಿಯ ಕಲ್ಲೇಶಿಗೆ "ನೀನು ಅಗಸನ ಕೆಲಸವನ್ನೇ ಮುಂದುವರಿಸಿಕೊಂಡು ಹೋಗು" ಎಂದು ಅಪ್ಪ ಮಾಚಯ್ಯನ ತಾಕೀತು. ಅಮೇರಿಕಕ್ಕೆ ಹೋಗುವೆನೆಂದು ಗೆಳೆಯ ಜನಾರ್ಧನ ಹೇಳಿದಾಗ, ಕಲ್ಲೇಶಿ " ಅಲ್ಲೇನಿರತೈತೆ, ಕೆಂಗೇರಿಲಿ ಇಲ್ಲದ್ದು, ಇಲ್ಲೇ ಇರಾಕ್ ಏನಾಗ್ಯೆತೆ? " ಜಾನಿಗೆ ಸಿಟ್ಟು ಬಂತು. "ಬರಿ ಬಟ್ಟೆ ಒಗೆದು, ಕತ್ತೆ ಹಿಂದೆ ಹೋದರೆ ಏನು ಸಿಕ್ಕಿತು?... ದೇಶ, ಊರು ನೋಡು" ಎಂದು ಬಿಟ್ಟ. ತನ್ನ ಕತ್ತೆಗಳನ್ನ ಮನಸಾರೆ ಪ್ರೀತಿಸುತ್ತಿದ್ದ ಕಲ್ಲೇಶಿಗೆ ತಡೆಯಲಾಗಲಿಲ್ಲ. ಹೋಗಿ ಬರಲಿ ಏನು ಕಿಸಿತಾನೋ ನಾನು ನೋಡ್ತೀನಿ ಎಂದು ಸುಮ್ಮನಾದ.

ಭಾರತಕ್ಕೆ ಬಂದು ಏನಾದರೂ ಸಾಧನೆ ಮಾಡಬೇಕೆಂದುಕೊಂಡಿದ್ದ ಜಾನಿಗೆ ತಾನೇಕೆ ಒಂದು ರೋಬೊ ಕುದುರೆ ಮಾಡಬಾರದು ಎಂದು ಯೋಚನೆ ಬಂತು. ಅಮೇರಿಕಾದ ಕಾರುಗಳಂತೆ, ಈ ರೋಬೊ ಕುದುರೆ, ಇಲ್ಲಿಯ ಹಳ್ಳಿಗರಿಗೆಲ್ಲ ಉಪಯೋಗವಾಗಿ, ಕ್ರಾಂತಿಕಾರಕ ಯಶಸ್ಸು ಕಂಡೀತು, ಎಂದು ಕನಸು ಕಂಡ. ಹೀಗೆ ಪ್ರಾರಂಭವಾಯಿತು ಜಾನಿಯ ಕಂಪನಿ ರೋಬೊ ಹಾರ್ಸ್.


ಹಲವಾರು ಏಂಜೆಲ್ ಕಂಪನಿಗಳು ಬಂಡವಾಳ ಹೂಡಿದವು. ಈ ರೋಬೊ ಹಾರ್ಸ್, ವಿಶೇಷವಾಗಿ ಹಳ್ಳಿಯವರಿಗೆ ಹತ್ತಿರವಾಗಿರಬೇಕೆಂದು, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ವಾಯ್ಸ್ ಕಮ್ಯಾಂಡ್ ಉಪಯೋಗಿಸಿ ಜಾನಿಯ ನಿರ್ದೇಶನದಲ್ಲಿ ತಯಾರಿಸಲಾಯಿತು. ಹಳ್ಳಿಯ ರೈತರಿಗೆ ಸುಲಭವಾಗಿ ಅರ್ಥವಾಗುವಂತೆ ಕಮ್ಯಾಂಡುಗಳನ್ನು ನಿರ್ಧರಿಸಲಾಯಿತು. ರೋಬೊ ಕುದುರೆ ಓಡುವುದಕ್ಕೆ, "ದೇವರು ದೊಡ್ಡವನು" ಎಂದೂ ಕುದುರೆ ನಿಲ್ಲಿಸುವುದಕ್ಕೆ "ದೇವರು ಪಾಪ" ಎಂದು ಕೊಡಲಾಯಿತು.

ಈ ಮಧ್ಯ ಕಲ್ಲೇಶಿ ಕೆಂಗೇರಿಯಲ್ಲಿ ಸಿಕ್ಕಾಗ, ಜಾನಿ ರೋಬೊ ಹಾರ್ಸ್ ಬಗ್ಗೆ ಹೇಳಿದ. ಕಲ್ಲೇಶಿ " ನೀನು ಏನೇ ಮಾಡು ಜಾನಿ, ನಿನ್ನ ಕುದುರೆ, ನನ್ನ ಕತ್ತೇನ ಮೀರ್ಸಾಕಿಲ್ಲ ಬಿಡು" ಎಂದ. ಜಾನಿಗೆ ಉರಿದು ಹೋಯಿತು. ನನ್ನ ಅಮೇರಿಕದ ಅನುಭವಕ್ಕೆ ಅವಮಾನ ಮಾಡುತ್ತಾನಲ್ಲ ಈ ಅಗಸ. ಏನಾದರಾಗಲಿ, ಈ ಅಗಸನಿಗೆ ಬುದ್ಧಿ ಕಲಿಸಲೇಬೇಕೆಂದು ತೀರ್ಮಾನಿಸಿ, "ಹಾಗಾದರೆ ಕಟ್ಕೋಣ ಪಂದ್ಯ" ಎಂದ. ಕಲ್ಲೇಶಿಯ ಕತ್ತೆಗೂ, ಜಾನಿಯ ರೋಬೊ ಹಾರ್ಸಿಗೂ ಓಟದ ಪಂದ್ಯ ನೆಡೆಸಲು ತೀರ್ಮಾನಿಸಲಾಯಿತು.



ಪಂದ್ಯದ ದಿನ ಕಲ್ಲೇಶಿ ತನ್ನ ನೆಚ್ಚಿನ ಕ್ಯಾತೆ ಕತ್ತೆಯನ್ನು ಕರೆತಂದ. ಕ್ಯಾತನ ಸ್ಪೆಷಾಲಿಟಿ ಯಾವಾಗಲೂ ಕ್ಯಾತೆ ತೆಗೆಯುವುದು.... ಕತ್ತೆಯ ಮೇಲೆ ಕಲ್ಲೇಶಿ, ಮತ್ತು ರೋಬೊ ಹಾರ್ಸ್ ಮೇಲೆ ಜಾನಿ ಕುಳಿತು ಓಡಿಸಲು ಸಿದ್ಧರಾದರು. ಬೆಂಗಳೂರಿನ ಕೆಂಗೇರಿಯ ಬಯಲಿನಲ್ಲಿ ಪಂದ್ಯ. ಎಲ್ಲ ಸೇರಿದ್ದಾರೆ..., ಪತ್ರಕರ್ತರು, ಟಿವಿಯವರು, ಜನಜಂಗುಳಿ... ಒಟ್ಟು ಐದು ಕಿಲೋಮೀಟರ್ಗಳನ್ನ ಮೊದಲು ಯಾರು ಮುಗಿಸುತ್ತಾರೋ ಅವರೇ ವಿಜಯಿ. ಮುಕ್ತಾಯದ ಹಂತದಲ್ಲಿ ತೀರ್ಪುಗಾರರು ಕುಳಿತಿದ್ದಾರೆ. ಪಕ್ಕದಲ್ಲೇ ಬೆಂಗಳೂರಿನ ಗಲೀಜೆಲ್ಲ ಹರಿದುಹೋಗುವ ಹಳೆಯ ವೃಷಭಾವತಿ ನದಿ ನೊರೆ ನೊರೆಯಾಗಿ ತೇಲಿ ಬರುತ್ತಿದೆ. ಅದೇ ಕೊನೆಯ ಲೈನ್.

ರೋಬೊ ಹಾರ್ಸ್ ಮತ್ತು ಕ್ಯಾತೆ ಕತ್ತೆ ಯುದ್ಧಕ್ಕೆ ಸಿದ್ಧವಾಗಿ ನಿಂತಿವೆ. ರೆಫ್ರೀ ಒಬ್ಬರು ಹಸಿರು ನಿಶಾನೆ ತೋರಿಸಿ ಪಂದ್ಯ ಪ್ರಾರಂಭಿಸಿದರು. ಜಾನಿ, ರೋಬೊ ಹಾರ್ಸ್ ಕಿವಿಯಲ್ಲಿ "ದೇವರು ದೊಡ್ಡೋನು" ಎಂದು ವಾಯ್ಸ್ ಕಮ್ಯಾಂಡ್ ಕೊಟ್ಟ. ಮೇಲೆ ಕುಳಿತ ಕಲ್ಲೇಶಿ ಕ್ಯಾತೆ ಕತ್ತೆಯ ಪಕ್ಕೆಗೆ ತನ್ನ ಬಲಗಾಲಿನಿಂದ ಒದ್ದ. ಎರಡೂ ಓಟ ಕಿತ್ತವು. ಸ್ವಾಭಾವಿಕವಾಗಿ ರೋಬೊ ಹಾರ್ಸ್ ಮುಂದೆ, ಮೈಲು ದೂರದಲ್ಲಿ ಕ್ಯಾತೆ ಕತ್ತೆ....ಜಾನಿ ವಿಜಯದ ಗರ್ವದಿಂದ ಬೀಗುತ್ತಿದ್ದ.



ಅಮೇರಿಕದಲ್ಲಿ ಕೆಲಸ ಮಾಡಿದ ತನ್ನ ತಲೆಯೆಲ್ಲಿ? ಯಕಂಶ್ಚಿತ್ ದೇವರು ಮಾಡಿದ ಕತ್ತೆ ಎಲ್ಲಿ? ಈ ಕಲ್ಲೇಶಿಗೆ ಒಳ್ಳೆಯ ಬುದ್ಧಿ ಕಲಿಸಿದೆ. ರೋಬೊ ಹಾರ್ಸ್ ವಿಜಯದ ಗೆರೆಯ ಹತ್ತಿರ ಬರುತ್ತಿದೆ....ಏಕೋ ಏನೋ, ರೋಬೊ ಹಾರ್ಸ್ ನಿಲ್ಲಿಸಲು ಕೊಡಬೇಕಾದ ವಾಯ್ಸ್ ಕಮ್ಯಾಂಡ್ ಮರೆತು ಹೋಯಿತು ಜಾನಿಗೆ.ಎಷ್ಟು ಮಾಡಿದರೂ ನೆನಪಾಗುತ್ತಿಲ್ಲ...ಹೇಗಾದರೂ ಮಾಡಿ ಮುಕ್ತಾಯದ ಲೈನ್ನಲ್ಲಿ ನಿಲ್ಲಿಸಲೇ ಬೇಕು. ಇನ್ನೇನು ಮುಕ್ತಾಯದ ಲೈನ್ ಬರಬೇಕು.. ಜಾನಿಗೆ ನೆನಪಾಯಿತು. " ದೇವರು ಪಾಪ" ಜಾನಿ ಕೊಟ್ಟ ವಾಯ್ಸ್ ಕಮ್ಯಾಂಡ್. ರೋಬೊ ಹಾರ್ಸ್ ಗಕ್ಕನೆ ನಿಂತಿತು. ಹಿಂದೆಯೇ ಬರುತ್ತಿತ್ತು ಕ್ಯಾತೆ ಕತ್ತೆ. ಹೆಮ್ಮೆಯಿಂದ ಹಿಂದೆ ನೋಡಿದ ಜಾನಿ. ತಾನು ಗೆದ್ದೇ ಎಂಬ ಭಾವ. ತನ್ನ ಗೆಳೆಯ ಕಲ್ಲೇಶಿಯನ್ನು ಸೋಲಿಸಿದೆ. ಅಮೇರಿಕದ ಈ ತಲೆಯ ಮುಂದೆ ದೇವರು ಮಾಡಿದ ಕತ್ತೆ ಸಾಟಿಯೇ...

ವಿಜಯದ ಗೆರೆಯ ಮೇಲೆ ನಿಂತ ಜಾನಿ ಬಾಗಿ ಮುಂದೆ ನೋಡಿದ. ಎದಿರು ಬೆಂಗಳೂರಿನ ಗಲ್ಲಿಜನ್ನೆಲ್ಲ ಹೊತ್ತು ಹರಿಯುತ್ತಿರುವ ವೃಷಭಾವತಿ ನದಿ. ಜಾನಿಯ ಹೃದಯ ಬಾಯಿಗೆ ಬಂತು. ಬಗ್ಗಿ ನೋಡಿ ಜಾನಿ " ಅಬ್ಬಾ.. ದೇವರು ದೊಡ್ಡೋನು.." ಎಂದು ಬಿಟ್ಟ. ರೋಬೊ ಹಾರ್ಸ್ ಆ ಉದ್ಗಾರ ವನ್ನೇ ವಾಯ್ಸ್ ಕಮ್ಯಾಂಡ್ ಎಂದುಕೊಂಡು ಎದುರಿಗಿದ್ದ ಕೊಚ್ಚೆಯ ಕಂದಕಕ್ಕೆ ಹಾರಿ ಬಿಟ್ಟಿತು. ಬುರುಗುತ್ತಿರುವ ವೃಷಭಾವತಿಯ ನೊರೆಯಲ್ಲಿ ಜಾನಿ ಮತ್ತು ರೋಬೊ ಹಾರ್ಸ್ ತೇಲಿ ಹೋದರು. ಹಿಂದೆಯೇ ಬರುತ್ತಿದ್ದ ಕಲ್ಲೇಶಿ ಮತ್ತು ಕ್ಯಾತೆ ಕತ್ತೆ, ಕಣ್ಣು ಬಿಟ್ಟು ನೋಡುತ್ತಿದ್ದರು.

ಜಾನಿ, ರೋಬೊ ಹಾರ್ಸ್ ಗೆದ್ದು ಸೋತಿದ್ದರು... ಕಲ್ಲೇಶಿ ಮತ್ತು ಕ್ಯಾತೆ ಕತ್ತೆ ಸೋತು ಗೆದ್ದಿದ್ದರು



## ಡಾಕ್ಟರ್ ಕಾಲ್ ಮಾಡಿದ ಪಜೀತಿ!



ಸತ್ಯ ಪ್ರಸಾದ್

**ಸು**ಮಾರು ವರುಷಗಳ ಹಿಂದಿನ ಒಂದು ಸಣ್ಣ ಅನುಭವವನ್ನು ಹಂಚಿಕೊಳ್ಳುತ್ತೇನೆ. ಡಾ||.ರಾಮ್ ಬೆಂಗಳೂರು ನಮ್ಮ 'ವೈದ್ಯೋ ನಾರಾಯಣೋ ಹರಿ', ನನಗೆ ಒಂದು ಸಣ್ಣ ನೆಗಡಿ ಬಂದರೂ ಅವರ ದರುಶನವಿಲ್ಲದೆ ಹೋಗುವುದೇ ಇಲ್ಲ. ಅವರ ಕೈಗುಣವೂ ಹಾಗೆ, ಕೈ ಮುಟ್ಟಿ ಒಂದು ಶುಂಠಿ ಪೆಪ್ಪರ್ ಮೆಂಟರ್ ಕೊಟ್ಟರೂ ಎಂಥ ಜ್ವರವೂ ಮಾಯವಾಗುತ್ತದೆ. ಪ್ರತಿ ಬಾರಿ ಬೇಟಿಯಾದಾಗಲೂ 'ವ್ಯಾಯಾಮ ಮಾಡು, ಡಯಟ್ ಮಾಡು ಇತ್ಯಾದಿ' ಅವರ ಪ್ರೀತಿಯ ಬೈಗುಳ ಮಾಮೂಲಿ. ಒಮ್ಮೆ ಯಾಕೋ ECG ಮತ್ತು ರಕ್ತ ಪರೀಕ್ಷೆ ಮಾಡಲು ತಿಳಿಸಿದರು, ಅಂಜಿಕೆಯಿಂದಲೇ ಕೊಟ್ಟು ಬಂದೆ. ೩-೪ ದಿನವಾಗಿತ್ತು ಆಫೀಸ್ ನಲ್ಲಿ ಕೆಲಸ, ಯಾವುದೋ ಒಂದು ಮುಖ್ಯವಾದ ಮೀಟಿಂಗ್ನಲ್ಲಿ ಇದ್ದೆ, ಡಾಕ್ಟರ್ ಆಫೀಸ್ ನಿಂದ ಕಾಲ್ ಬಂತು. ಡವ ಡವ 'ಡಾಕ್ಟರ್ ನಿಮ್ಮ ಹತ್ತಿರ ಮಾತನಾಡಬೇಕಂತೆ' ಎಂದರು, ಮೈ ಬೆಚ್ಚಗಾಯಿತು, ಒಂದು ನಿಮಿಷವೆಂದು ತಕ್ಷಣ ಹೊರ ಓಡಿ ಬಂದೆ, ಕಾಲ್ ಕಟ್ ಆಯಿತು, ಮತ್ತೆ ಮತ್ತೆ ಫೋನ್ ಮಾಡಿದೆ.. ಡಾಕ್ಟರ್ ಬಿಜಿ ಎಂದರು. ಬಿಪಿ, ಶುಗರ್, ಕೊಲೆಸ್ಟ್ರಾಲ್, ಹಾರ್ಟ್ ಏನೋ ಎಡವಟ್ಟಾಗಿದೆಯೆಂದು ಒಳ ಮನಸ್ಸು ಹೇಳತೊಡಗಿತು, ಒಂದು ಗಳಿಗೆ ಕಣ್ಣು ಮಂಜಾಯಿತು. ಒಂದೊಂದು ಕ್ಷಣ ಯುಗದಂತಾಯಿತು. ಜೀವ ತಡೆಯಲಿಲ್ಲ, ಆಫೀಸ್, ಮೀಟಿಂಗ್ ಎಲ್ಲ ಬಿಟ್ಟು ಹತ್ತಿರದಲ್ಲೇ ಇದ್ದ ಡಾಕ್ಟರ್ ಆಫೀಸ್ ಕಡೆ ಡ್ರೈವ್ ಮಾಡಲು ಶುರುಮಾಡಿದೆ, ಎಡಗಣ್ಣು ಹೊಡೆಯುತ್ತಿತ್ತು, ಆಗ ತಾನೇ ಹುಟ್ಟಿದ್ದ ಮಗ ಧ್ಯಾನ್, ಇತ್ತೀಚೆಗೆ ಭೇಟಿಕೊಡದ ವೆಂಕಟರಮಣ ದೇವಸ್ಥಾನ, ಕೃಷ್ಣ ಮಠ ಎಲ್ಲವೂ ಜ್ಞಾಪಕವಾಯಿತು. ಕೊನೆಗೆ ಮಾನಸಿಕವಾಗಿ ಎಲ್ಲದಕ್ಕೂ ಸಿದ್ದವಾಗಿ ಅವರ ಕೋಣೆಗೆ ನುಗ್ಗಿದೆ.

'ಸಾರ್ ಏನೋ ಮಾತನಾಡಬೇಕಂತೆ...' ತುಂಬ ಆತಂಕದಿಂದ ಕೇಳಿದೆ

ಡಾಕ್ಟರ್ ನನ್ನ ನೋಡಿ ಕನ್ನಡಕ ಸರಿ ಮಾಡಿಕೊಳ್ಳುತ್ತಾ ...
'ಮರಿ 'ಸೂಪರ್' ಕನ್ನಡ ಸಿನಿಮಾಕ್ಕೆ ನಾನೂ ಬರುತ್ತೇನೆ, ಕೊನೆಯಲ್ಲಿ ಒಂದು ಸೀಟ್ ಹಿಡಿದಿಟ್ಟಿಕೊಂಡಿರು'.(ಆ ವಾರ ಉಪೇಂದ್ರನ 'ಸೂಪರ್' ಸಿನಿಮಾ ಆಯೋಜಿಸಿದ್ದೆವು).

ಒಂದು ಕ್ಷಣ ತಲೆ ತಿರುಗಿದಂತಾಯ್ತು... ಅವರ ಮೇಲಿನ ಸಲಿಗೆಯಿಂದ ಜಗಳ ಶುರು ಮಾಡಿದೆ 'ಸರ್ ಎಷ್ಟೊಂದು ಟೆನ್ಷನ್ ಮಾಡಿದ್ರಿ...ಎಲ್ಲ ಬಿಟ್ಟು ಬಂದೆ... '

ಆಗ ಅವರು ನಗುತ್ತಾ 'ನೀನು ಯಾಕೆ ಬರೋಕೆ ಹೋದೆ... ನಾನು ಫೋನ್ ನಲ್ಲಿಯೇ ಇದನ್ನು ಹೇಳುತ್ತಿದ್ದೆ ' ಅಂದರು...
ಬೇಸ್ತು ಬಿದ್ದ ನಾನು ತಪ್ಪು ನನ್ನದೇ ಎಂದು ಕೊನೆಗೆ ನನ್ನ ಆರೋಗ್ಯದ ಬಗ್ಗೆ ವಿಚಾರಿಸಿದೆ...
'ಕುದುರೆ ಕುದುರೆ ಇದ್ದ ಹಾಗೆ ಇದ್ದೀಯ... ' ಅಂದರು.. ನಗುತ್ತ ಹೊರ ಬಂದೆ.


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



# #ಲವ್_ಯು_ಗೊಂಬೆ....*

*"...ಅವಳ ಗಮನ ಆಕಡೆ ಸರಿದಾಗ ನನ್ನ ಫ್ರೆಂಡ್ ಬಿಡಿಸಿದ ಪೆನ್ಸಿಲ್ ಸ್ಕೆಚ್ ಮೇಲೆ ಇಟ್ಟು ಅದರ ಮೇಲೆ ನಾನೆ ಬಿಡಿಸುವಂತೆ ನಟಿಸುತ್ತಿದ್ದೆ.. "*



ದೀಪಕ್ ನಾಯ್ಕ ಕ್ಷತ್ರಿಯ

ಈ ಫೇಸ್ ಬುಕ್, ವಾಟ್ಸ್ ಅಪ್ ಬಂದ ಮೇಲೆ, ಮೊಬೈಲ್ ನ ೪ ಇಂಚ್ ಸ್ಕ್ರೀನ್ ನನ್ನ ಪ್ರಪಂಚ ಅಂತ ಅದರಲ್ಲೇ ಮುಳುಗಿರೋ ನಾನು, ಹೊರಗಡೆ ಹೋಗೋದು ತುಂಬಾ ಕಡಿಮೆ. ಕೆಲಸ ಮುಗಿದ ಮೇಲೆ ರೂಮ್ ಸೇರಿಕೊಂಡರೆ, ಹೊರಗೆ ಹೋಗೋದು ಮತ್ತೆ ಕೆಲಸಕ್ಕೆ ಹೋಗೋದಕ್ಕೆಂದೇ .. ಏಕತಾನತೆ ಬೋರ್ ಆದಾಗ, ಬೈಕ್ ರೈಡ್ ಮಾಡಿದ್ರೂ, ಅದು ಕಮ್ಮಿ ...

ಒಂದು ದಿನ ವಾರದ ರಜೆ .. ಇಂಟರ್ನೆಟ್ ಗೆ ಗರ ಬಡಿದಿತ್ತು.. ಸುಮ್ಮನೆ ಹೊರಗಡೆ ಸುತ್ತಾಡಿ ಬರೋಣ ಅಂತ ಹತ್ತಿರದಲ್ಲೇ ಇದ್ದ ಪಾರ್ಕಗೆ ಹೋದೆ. ಸಂಡೆ ಬೇರೆ, ಬಣ್ಣ ಬಣ್ಣದ ಚಿಟ್ಟೆಗಳ ಹಾರಾಟ ಸ್ವಲ್ಪ ಜೋರಾಗಿ ಇರುತ್ತೆ ಎನ್ನೋದು ನನ್ನ ಕಲ್ಪನೆ. ನನ್ನ ಕಲ್ಪನೆ ಹುಸಿಯಾಗಲಿಲ್ಲ. ಚಿಟ್ಟೆಗಳ ಹಾರಾಟ ಜೋರಾಗೆ ಇತ್ತು. ಎಲ್ಲರ ಮೇಲೆ ಕಣ್ಣಾಡಿಸುತ್ತಾ ಸಮಯ ಕಳೆಯುತ್ತಿರಬೇಕಾದರೆ, ನನ್ನ ಕಣ್ಣು ಅಲ್ಲೇ ಕಲ್ಲು ಬೆಂಚಿನ ಮೇಲೆ ಕುಳಿತ ಹುಡುಗಿಯ ಮೇಲೆ ಬಿತ್ತು. ಹತ್ತಿರ ಹೋದೆ, ಅವಳು ನನ್ನನು ನೋಡುತ್ತಿಲ್ಲ ಎನ್ನುವದನ್ನು ಖಾತ್ರಿ ಪಡಿಸಿ ಆ ಕಡೆ , ಈ ಕಡೆ ನೋಡುತ್ತಾ ಅವಳನ್ನು ನೋಡುತ್ತಿದ್ದೆ, ಆಕರ್ಷಕ ಸೌಂದರ್ಯ, ನನ್ನ ಕಣ್ಣುಗಳು ಅವಳಿಂದ ಕದಲುತ್ತಿಲ್ಲ, ನೀಳ ಕೇಶರಾಶಿ ... ತಲೆಯಿಂದ ಉಂಗುಷ್ಠದವರೆಗೂ ಕೊಂಕಿಲ್ಲದ ಮೈಮಾಟ, ಕಪ್ಪು ಕಂಗಳು, ಕೆಂಪಾದ ಗಲ್ಲ, ಅತ್ತ ಟ್ರೆಡಿಷನಲ್ ಅಲ್ಲದ ಮಾಡರ್ನ್ ಅಲ್ಲದ ಉಡುಗೆ .. ನನ್ನ ಮನದಲ್ಲಿ ಮಾತನಾಡುವ ಹಂಬಲ ಮೂಡತೊಡಗಿತು ... ಇಷ್ಟು ಸುಂದರ ಹುಡುಗಿ ಸಿಂಗಲ್ ಆಗಿರೋಕೆ ಹೇಗೆ ಸಾಧ್ಯ? ಅದು ಪಾರ್ಕಿನಲ್ಲಿ ಒಬ್ಬೆ ಬರೋದಂತು ಅಸಾಧ್ಯ, ಅವಳ boyfriend ಯಾರಾದ್ರೂ ಬಂದಿರಬಹುದು ಸ್ವಲ್ಪ ಹೊತ್ತು wait ಮಾಡೋಣಾ ಅಂತಾ ಅಲ್ಲೇ ಹತ್ತಿರದಲ್ಲೇ ಸುಳಿದಾಡುತ್ತಿದ್ದೆ .... .... ಅರ್ಧ ಗಂಟೆ ಕಳೆಯಿತು, ಯಾರು ಬಂದಿಲ್ಲ, ಇಷ್ಟು ಚೆಂದ ಹುಡುಗಿನ ಯಾವ ಹುಡುಗನು ಕಾಯಸಲ್ಲ ಅನ್ನೋ ನಂಬಿಕೆ ಅದಲ್ಲದೆ .. ಒಂಚೂರು ಸಮಯ ಸಿಕ್ಕರೆ ಸಾಕು ಮೊಬೈಲ್ ಲಿ boyfriend ಜೊತೆ ಚಾಟ್ ಮಾಡುವ ಹುಡುಗೀರು ಇರ ಬೇಕಾದರೆ ಅರ್ಧ ಗಂಟೆಯಿಂದ ಸುಮ್ಮನೆ ಕುಳಿತಿದ್ದಾಳೆ ಅಂದರೆ ಪಕ್ಕಾ ಸಿಂಗಲ್ಲೇ, ಒಮ್ಮೆ ಮಾತಾಡೋಣ ಅಂದು ಕೊಂಡೆ ಧೈರ್ಯ ಸಾಲಲಿಲ್ಲ. ಪಾರ್ಕನಲ್ಲಿ ತುಂಬಾ ಜನಾ ಓಡಾಡ್ತಿರ್ತಾರೆ, ಅವಳೇನಾದ್ರೂ ತಿರುಗಿ ಬಿದ್ರೆ ನನ್ನ ಕಥೆ ಅಷ್ಟೇ ... ಆದರೂ ಅವಳ ಸೌಂದರ್ಯ ಸೆರೆ ಹಿಡಿಯೋಣ ಅಂತಾ ಮೊಬೈಲ್ ತೆಗೆದು ಬೇರೆ ಕಡೆ ಫೋಟೋ ತೆಗೆಯೋ ಹಾಗೆ ಮಾಡುತ್ತಾ ಅವಳ picture click ಮಾಡಿದೆ,, ಅದನ್ನು ಅವಳು ನೋಡಿ ಬಿಟ್ಟಳು, ನನಗೆ ಹೆದರಿಕೆ, ಅವಳು ಎದ್ದು ನನ್ನ ಹತ್ತಿರ ಬಂದಳು ನನ್ನ ಮೊಬೈಲ್ ಕಸಿದು ಕೊಂಡು ಅವಳ ಫೋಟೋ ಡಿಲೀಟ್ ಮಾಡಿ ಮೊಬೈಲ್ ನನ್ನ ಕೈಗಿಟ್ಟಳು ನನ್ನ ಕಡೆಗೆ ಸಿಟ್ಟಿನ ಭಾವದಿ ನೋಡಿ ಅಲ್ಲಿಂದ ಹೋದಳು. ನಾನು ಬದುಕಿದೆ ಬಡ ಜೀವ ಅಂದುಕೊಂಡು ರೂಮಿಗೆ ಬಂದೆ ಡಿಲೀಟ್ ಮಾಡಿದ ಫೋಟೋನ dropbox ದಿಂದ ತೆಗೆದು ಸೇವ್ ಮಾಡಿದೆ.

ಕೋಪದ ನೋಟದಲ್ಲೂ ಅವಳ ಸೌಂದರ್ಯ ಎದ್ದು ಕಾಣುತಿತ್ತು. ಅವಳನ್ನೇ ಮತ್ತೆ ಮತ್ತೆ ನೋಡಬೇಕೆನಿಸುತ್ತಿತ್ತು. ಮರುದಿನ ಮತ್ತೆ ಪಾರ್ಕ್ ಗೆ ಹೋದೆ, ಅವಳು ಬಂದಿರಲಿಲ್ಲ. ದಿನಾ ಸಂಜೆ ಪಾರ್ಕ್ ಗೆ ಹೋಗಿ ಬರುತ್ತಿದ್ದೆ,ಅವಳು ಬರುತ್ತಾಳೋ ಎಂದು ಕಾಯುವುದು ನನ್ನ ಎಂದಿನ ದಿನಚರಿ ಆಗಿ ಹೋಗಿತ್ತು. ಮತ್ತೆ ರವಿವಾರ ನಾ ಡ್ಯೂಟಿ ಮುಗಿಸಿ ಪಾರ್ಕ್ ಗೆ ಹೋಗೋ ಮುಂಚೆಯೇ ಅದೇ ಕಲ್ಲುಬೆಂಚಿನ ಮೇಲೆ ಅವಳು ಕುಳಿತಿದ್ದಳು.ನನಗೆ ಎಲ್ಲಿಲ್ಲದ ಸಂತೋಷವಾಗಿ, ಮುಖ ಕಮಲದಂತೆ ಅರಳಿತ್ತು. ಅವಳ ಮುಂದಿನ ಬೆಂಚಿನ ಮೇಲೆ ಹೋಗಿ ಕುಳಿತೆ ಮಾತನಾಡಿಸುವ ತುಡಿತ, ಆದರೆ ಅವಳು ನನ್ನ ಕಡೆ ನೋಡುತ್ತಿಲ್ಲ. ನಾನು ಅವಳನ್ನೇ ನೋಡುತ್ತಿದ್ದೆ. ಅವಳು ನನ್ನೆಡೆಗೆ ನೋಡಿದಾಗ ಒಂದು smile ಕೊಟ್ಟು, ಕಿವಿ ಹಿಡಿದು sorry ಅಂದೆ. ಅವಳಿಗೆ ಕಿರಿಕಿರಿ ಅನಿಸಿತೇನೋ, ಅಲ್ಲಿಂದ ಎದ್ದು ಹೋದ್ಳು. ಛೆ ಚಾನ್ಸ್ ಮಿಸ್ ಆಯಿತು, ಬೇಜಾರು ಕೂಡ ಆಯಿತು. Next ಸಂಡೆ ಅವಳನ್ನಾ ಇಂಪ್ರೆಸ್ ಮಾಡ್ಲೇಬೇಕಂತ ರೂಮ್ ಗೆ ಬಂದು ತುಂಬಾ ಯೋಚಿಸಿದೆ.. ಒಂದು idea ಹೊಳೆಯಿತು... ನನ್ನ ಫ್ರೆಂಡ್ ಗೆ ಹೇಳಿ ಅವಳ ಪೆನ್ಸಿಲ್ ಸ್ಕೆಚ್ ರೆಡಿ ಮಾಡಿಸಿದೆ... next ಸಂಡೆ ಪಾರ್ಕ್ ಗೆ ಬೇಗ ಹೋಗಿ, ಸ್ಕೆಚ್ ಪ್ಯಾಡ್ ತಗೊಂಡು ಅವಳು ಕುಳಿತುಕೊಳ್ಳುವ ಬೆಂಚಿನ ಮುಂದಿನ ಬೆಂಚಿನ ಮೇಲೆ ಕುಳಿತೆ. ಅವಳು ಬರುತ್ತಿರುವುದನ್ನು ನೋಡಿ, ನಾನು ಏನೋ ಬಿಡಿಸುವ ತರ ಪೋಸ್ ಕೊಡುತ್ತಾ ಕುಳಿತೆ. ಅವಳು ಬಂದು ಖಾಯಂ ಆಗಿ ಕುಳಿತುಕೊಳ್ಳುವ ಬೆಂಚಿನ ಮೇಲೆ ಕುಳಿತಳು. ಅವಳ ಗಮನ ಆಕಡೆ ಸರಿದಾಗ ನನ್ನ ಫ್ರೆಂಡ್ ಬಿಡಿಸಿದ ಪೆನ್ಸಿಲ್ ಸ್ಕೆಚ್ ಮೇಲೆ ಇಟ್ಟು ಅದರ ಮೇಲೆ ನಾನೇ ಬಿಡಿಸುವಂತೆ ನಟಿಸುತ್ತಿದ್ದೆ.. ಅವಳು ನನ್ನ ನೋಡುತ್ತಿದ್ದದ್ದು ಗೊತ್ತಾದ ಕೂಡಲೇ ನಿಧಾನವಾಗಿ ಅವಳ ಕಡೆಗೆ ಆ ಸ್ಕೆಚ್ ನ್ನು ತೋರಿಸಿದೆ. ಅದನ್ನು ನೋಡುತ್ತಲ್ಲೇ ಅವಳ ಮುಖ ಕೆಂಪಾಯಿತು. ಅದು ಕೋಪದಿಂದ ಆದದ್ದು ನಾಚಿಕೆಯಿಂದ ಅಲ್ಲ ಎಂದು ತಿಳಿಯಲು ನನಗೆ ಹೆಚ್ಚು ಸಮಯ ಹಿಡಿಯಲಿಲ್ಲ. ನೇರವಾಗಿ ಹತ್ತಿರ ಬಂದು ಆ ಸ್ಕೆಚ್ ನ್ನು ಹರಿದು ಬಿಸಾಡಿ ಅಲ್ಲಿಂದ ಹೊರಟೇ ಬಿಟ್ಟಳು. ಒಂದು ಕ್ಷಣ, ಎದೆಗೆ ಜೋರಾಗಿ ಗುದ್ದಿದ ಹಾಗಾಯಿತು. ಅವಳು ಹರಿದು ಬಿಸಾಡಿದ ತುಂಡುಗಳನ್ನೆಲ್ಲಾ ತೆಗೆದುಕೊಂಡು ರೂಮಿಗೆ ಬಂದೆ. ತುಂಬಾ ಬೇಸರವಾಗಿ, ಹರಿದ ಕಾಗದದ ಚೂರುಗಳನ್ನೆಲ್ಲಾ ಮತ್ತೆ ಜೋಡಿಸಿದೆ. ಅದರ ಹಿಂಬದಿಗೆ ಹಾರ್ಟ್ shape ಮಾಡಿ ಅದರ ಮೇಲೆ ೪ ಸಾಲುಗಳನ್ನ ಬರೆದೆ.

ಮೌನದಲ್ಲಿ ಮಿಂದೇಳುತ್ತಿದೆ ನನ್ನ ಕನಸು
ನವತನವ ಬಯಸುತಿದೆ ನನ್ನ ಮನಸು
ನಲಿಯುವ ನೋವಿದು ಒಂಥರಾ ಸೊಗಸು
ಪ್ರೀತಿಯ ಭಾವನೆ ಹೇಗಿರುವುದು ತಿಳಿಸು
ಗೊಂಬೆ ನನ್ನಾ ನೀ ಪ್ರೀತಿಸು ......

next ಸಂಡೆ ಅವಳು ಬರುವ ಮೊದಲೇ ಅವಳು ಕುಳಿತು ಕೊಳ್ಳುವ ಬೆಂಚಿನ ಮೇಲೆ ಅದನಿಟ್ಟು, ಅವಳಿಗೆ ಕಾಣದ ಹಾಗೆ, ಮರದ ಮರೆಯಲ್ಲಿ ನಿಂತುಕೊಂಡೆ. ಅವಳು ಬಂದು ಬೆಂಚಿನ ಮೇಲೆ ನಾನಿಟ್ಟ, ಅವಳ ಜೋಡಿಸಿದ ಚಿತ್ರ ಮತ್ತು ಅದರಲ್ಲಿ ನಾ ಬರೆದ ಸಾಲುಗಳನ್ನು ನೋಡಿದಳು. ನನಗೋ ೩ನೇ ಬಾರಿ ಪರೀಕ್ಷೆ ಕಟ್ಟಿದ ಅನುಭವ. ರಿಸಲ್ಟಗಾಗಿ ಕಾಯುವ ವಿದ್ಯಾರ್ಥಿಯಂತೆ ನನ್ನ ಮನಸ್ಥಿತಿ. ಅವಳ ಕಂಗಳು ನನ್ನನೇ ಹುಡುಕುತಿತ್ತು, ನನಗೆ ಪಾಸಾದ ಖುಷಿ,ಮರದ ಮರೆಯಿಂದ ಅವಳ ಬಳಿ ಹೋದೆ. ಸದಾ ಕೋಪದ ಮುಖ ನೋಡಿದ ನನಗೆ, ಅವಳ ಮಂದಸ್ಮಿತ ಮುಖ ನೋಡಿ ನನಗಾದ ಖುಷಿಗೆ ಪಾರವೇ ಇರಲಿಲ್ಲ. ಅವಳು ನಕ್ಕಾಗ ಕೆನ್ನೆಯಲ್ಲಿ ಮೂಡುವ ಗುಳಿಯಲ್ಲಿ ಬಿದ್ದು ಸಾಯಬೇಕೆನಿಸಿತು. "ಹಾಯ್ I am ದೀಪಕ್ ಅಂತಾ ಕೈ ಮುಂದೆ ಚಾಚಿದೆ, ಅವಳು ನಗುತ್ತಾ "I am ಗೊಂಬೆ" ಅಂತಾ ಕೈ ಮಿಲಾಯಿಸಿದಳು. ಅವಳ ಸ್ಪರ್ಶದಿಂದ ನನ್ನ ಮೈಯಲ್ಲಿ ಮಿಂಚು ಸಂಚರಿಸಿದಂತಾಯಿತು.ಮಾತುಕತೆ ಪ್ರಾರಂಭವಾಯಿತು, ಅವಳ ಕೈ ಹಿಡಿದು ಪಾರ್ಕ್ ನಲ್ಲಿ ಸುತ್ತಾಡ ತೊಡಗಿದೆ. ನಾನು ಒಲವ ಗುಂಗಿನಲ್ಲಿ ಕಳೆದು ಹೋಗಿದ್ದೆ. ಅವಳು ಮಾತನಾಡುವಾಗಲೆಲ್ಲ ನಾನು ಅವಳನ್ನೇ ನೋಡುತ್ತಿದ್ದೆ. ನಾವಿಬ್ಬರು ಪಾರ್ಕನಲ್ಲಿ ನಡೆಯುತ್ತಿದ್ದರೆ, ಜನರೆಲ್ಲಾ ನಮ್ಮನ್ನು ವಿಚಿತ್ರವಾಗಿ ನೋಡುತ್ತಿದ್ದರು ... ಇಂತಹ ಸುಂದರ ಹುಡುಗಿ ಜೊತೆಯಿದ್ದರೆ ಎಲ್ಲರ ಕಣ್ಣು ಕುಕ್ಕದೆ ಇರುತ್ತದೆಯೇ ಎಂದು ನಾನೇ ಕಾಲರ್ ಟೈಟ್ ಮಾಡಿಕೊಂಡೆ .. ಸಂಡೆ ಮಾತ್ರ ಬರುತ್ತಿದ್ದವಳು,, ಮರುದಿನದಿಂದ ಡೈಲಿ ಸಂಜೆ ಪಾರ್ಕ್ ಗೆ ಬರ ತೊಡಗಿದಳು. ಅವಳು ಮೊಬೈಲ್ ಉಪಯೋಗಿಸುತ್ತಿರಲಿಲ್ಲ... ನನ್ನ ಮೊಬೈಲ್ನಲ್ಲಿ ಅವಳ ಬಹಳಷ್ಟು ಫೋಟೋಗಳಿದ್ದವು. ನನ್ನ ಜೊತೆ ಸೆಲ್ಫಿ ತೆಗೆಸಿಕೊಳ್ಳುವದೆಂದರೆ, ಅವಳಿಗೆ ಇನ್ನಿಲ್ಲದ ಖುಷಿ. ಒಂದು ವಾರ ಹಾಗೆ ಕಳೆಯಿತು, ಮದುವೆ ಆಗೋಣ ಅಂತಾ ಕೇಳಬೇಕೆನಿಸಿತು. ಅವಳಿಗಾಗಿ ಒಂದು ರಿಂಗ್ ಮಾಡಿಸಿದೆ. ಮದುವೆಗೆ ಪ್ರಪೋಸ್ ಮಾಡೋಣ ಅಂತ ಯೋಚಿಸಿ next day ಚೆನ್ನಾಗಿ ಡ್ರೆಸ್ ಮಾಡಿಕೊಂಡು ಪಾರ್ಕ್ ಗೆ ಹೋದೆ ಅವಳು ಬಂದಿರಲಿಲ್ಲ. ಯಾವಾಗಲು correct ಟೈಮ್ ಗೆ ಬಾರೋ ಅವಳು ಆ ದಿನ ಬರದೇ ಇರೋದನ್ನಾ ನೋಡಿ ಪಾರ್ಕ್ ನ ಮೂಲೆ ಮೂಲೆ ಹುಡುಕಿದೆ, ಹ್ಞೂ.. ಹ್ಞೂ.. ಅವಳಿಲ್ಲ ಸುಸ್ತಾಯಿತು .



ಅವಳ ನೋಡಬೇಕೆನಿಸಿ, ನನ್ನ ಮೊಬೈಲ್ ಲಲ್ಲಿ ಅವಳ ಫೋಟೋ ನೋಡೋಣ ಅಂತಾ gallery open ಮಾಡಿದ್ರೆ, ನನ್ನ ಕಣ್ಣುಗಳು ನಂಬುತ್ತಿಲ್ಲ, ಅವಳು ಫೋಟೋದಲ್ಲಿ ಇಲ್ಲಾ. ಎಲ್ಲಾ ಫೋಟೋ ಹುಡುಕಾಡಿದರೂ, ಎಲ್ಲಾ ಫೋಟೋದಿಂದ ಅವಳು ಕಾಣೆಯಾಗಿದ್ದಾಳೆ . ಸೆಲ್ಫಿ ಗಳಲ್ಲಿ ನಾನೊಬ್ಬನೇ ಇದ್ದೆ, ಇದೇನು ಕನಸಾ, ನನಸಾ, ಗೊತ್ತಾಗುತ್ತಿಲ್ಲಾ. ಪದೇ ಪದೇ ನೋಡಿದೆ, ನಂಬಲಾಗುತ್ತಿಲ್ಲಾ ಮತ್ತು ಏನೂ ತಿಳಿಯುತ್ತಿಲ್ಲ. ಪಾರ್ಕನ ಆಕಡೆ, ಈಕಡೆ ನೋಡಿದೆ, ಡೈಲಿ ನಮ್ಮನ್ನು ನೋಡುತ್ತಿದ್ದ ಒಂದಿಬ್ಬರನ್ನೂ ಕೇಳಿದೆ, ನನ್ನ ಜೊತೆ ಒಂದು ಹುಡುಗಿ ಇರುತ್ತಿದ್ದಳಲ್ಲಾ, ಅವಳನ್ನ ಎಲ್ಲಾದರೂ ನೋಡಿದ್ದೀರಾ ಅಂತ. ಅದಕ್ಕವರು ಹೇಳಿದ ಮಾತು ಕೇಳಿ ನನಗೆ ಮೂರ್ಛೆ ಹೋಗುವುದೊಂದೇ ಬಾಕಿ. "ನಿನ್ನ ಜತೆ ಯಾವ ಹುಡುಗಿಯೂ ಇರುತ್ತಿರಲಿಲ್ಲ, ನೀನೊಬ್ಬನೇ ಓಡಾಡುತ್ತಿರುತ್ತಿದ್ದೆ. ಒಬ್ಬನೇ ಮಾತನಾಡುತ್ತಿರುತ್ತಿದ್ದೆ" ಅಂದ್ರು. ನನಗೆ ಹುಚ್ಚೇನಾದ್ರು ಹಿಡಿತಾ ಅಂದುಕೊಂಡೆ 'ಛೆ ಇಲ್ಲ, ನನ್ನಾ friend ಗೆ ಕಾಲ್ ಮಾಡಿ, ಅವನು ಬಿಡಿಸಿದ ಪೆನ್ಸಿಲ್ ಸ್ಕೆಚ್ ನಿಜವಾದದ್ದು ಹಾಗು ನನ್ನ ಮೊಬೈಲಲ್ಲಿರೋ ಫೋಟೋ ನೋಡಿಯೇ ಅವನು ಬಿಡಿಸಿದ್ದು, ಅನ್ನೋದನ್ನ confirm ಮಾಡಿದೆ. ಅವಳು ಇದ್ದಿದ್ದು ನಿಜ, ಆಮೇಲೆ ಆದದ್ದೆಲ್ಲಾ ಭ್ರಮೆ! ನಾ ಸುಳ್ಳಾ ಅಥವಾ ನನ್ನ ಹುಚ್ಚು ಕಲ್ಪನೆ ಒಂದು ಗೊತ್ತಾಗದೆ, ತಲೆಯ ಮೇಲೆ ಕೈ ಇಟ್ಟು, ಅವಳು ಕುಳಿತು ಕೊಳ್ಳುತಿದ್ದ ಬೆಂಚಿನ ಹತ್ತಿರ ಬಂದೆ.

(ಮುಂದಿನ ಪುಟಕ್ಕೆ......)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

(...ಹಿಂದಿನ ಪುಟದಿಂದ)

ಅಲ್ಲಿ ಬೆಂಚಿನ ಮೇಲೆ ಒಂದು ಗೊಂಬೆ ಪಕ್ಕದಲ್ಲೊಂದು ಮಡಚಿಟ್ಟ ಬಣ್ಣದ ಕಾಗದ,ಬಿಡಿಸಿ ಓದಿದೆ, ಅದರಲ್ಲಿ ಅವಳು ಬರೆದ ಸಾಲುಗಳು.

ನಾನು ನಿನ್ನ ಕನಸು, ಕಲ್ಪನೆ, ಭ್ರಮೆ, ಊಹೆ, ಅಲ್ಲವೆ ಅಲ್ಲ. ನಾನು ನಿನ್ನ ಪ್ರೀತಿ, ಮನಸಿನ ಪ್ರೀತಿ, ನಿನ್ನ ಎದೆ ಬಡಿತದ ಸದ್ದು. ನಿನ್ನ ಒಲುವಿನ ಭಾವನೆ, ಕಣ್ಣಿಗೆ ಕಾಣದ ಅಗೋಚರ ಅವಿಸ್ಮರಣೀಯ ನೆನಪು, ಆ ನೆನಪು ನೆನೆಸಿಕೊಂಡಾಗಲೆಲ್ಲಾ, ನಾ ನಿನ್ನ ಜೊತೆಯಾಗಿರುವೆ, ನಾನು ನಿನ್ನ ನೆನಪಲ್ಲಿರುವುದೆ, ನಿನ್ನ ಉತ್ಕಟ ಪ್ರೀತಿಯ ಪರಮಾವಧಿ, ಆ ಪ್ರೀತಿಗೆ ಋಣಿ ನಾನು. ನಿನ್ನ ಜೊತೆಯಲ್ಲಿ ಒಂದು ಜೀವಿಯಾಗಿರದೇ, ನಿನ್ನ ನೆನಪುಗಳಲ್ಲಿ ಜೀವಂತವಾಗಿರುವ ನಾನು ನಿನ್ನ ಗೊಂಬೆ.

Miss you........

ಈ ಕಥೆಯನ್ನ ಯಾರು ನಂಬುವುದಿಲ್ಲಾ, ನಡೆದಿದ್ದು ನಿಜ! ಅದಕ್ಕೆ ಸಾಕ್ಷಿ ಅವಳು ಬಿಟ್ಟು ಹೋದ ಗೊಂಬೆ ಮಾತನಾಡುವ ಗೊಂಬೆ.



## ಕವನ

ಮಹೇಶ್ ಸಿರಿ

### "ಬಿಸಿಲು ಕುದುರೆ"

ಬಿಸಿಲು ಕುದುರೆಯಿದು ಓಡಿದೆ
ಪ್ರಗತಿಯ ದಾರಿಯ ಹಿಡಿದು
ದಾರಿ ಕಾಣದೆ ದಿಕ್ಕು ತಪ್ಪಿ
ನಡೆದಿದೆ ಪ್ರಳಯ ಊರನೆಡೆಗೆ

ಏರಿದೆ ಹಿಮ ಶಿಖರವನು
ಕರಗಿಸಿ ಹಿಮರಾಶಿಯನು
ನೀರಾಗಿ ಸೇರಿತು ಸಾಗರವನು
ಏಳುತ ಸುನಾಮಿಯ ಅಲೆಯಾಗಿ

ಮುಳುಗಿಸಿತು ನೀರಲಿ ನಮ್ಮನು
ಧರೆಯನು ಉಳಿಸುವ ಬರುವ ದಿನಗಳಿಗೆ..
ವನ ಗಿರಿಯಲಿ ಮಿಂಚಂತೆ ನುಗ್ಗಿ
ಗಿಡ ಮರಗಳನು ಕ್ಷಣದಲಿ ನುಂಗುತ

ಕಾಡು ಬರಿದಾಗಿ ನಭವ ತಡೆಯದೆ
ಮರೀಚಿಕೆಯ ಮಾಡಿ ಮಳೆಯ ಧಾರೆಯನು
ರೈತನ ಕಣ್ಣೆನಲಿ ನೋವನು ತಂದಿತು
ಧರೆಯ ಒಡಲ ಉರಿಯು ಏರುತಿರಲು

ಅಳಿವಿನ ದ್ವಾರಕೆ ನಾವು ಬಂದು ನಿಂತಿರಲು
ಅಲ್ಲಿಂದ ಹಿಂತಿರುಗಿ ಬರಬೇಕು ನಾವು
ವಿಕಾಸ ಪಥಕೆ ವಿಷಾನಿಲ ಸೂಸದೆ
ಕೊನೆಯಾಗದ ಗಾಳಿ, ನೀರು, ಬೆಳಕಲಿ..

## ಕವನ

ಕಾವ್ಯಾ ಕಡಮೆ ನಾಗರಕಟ್ಟೆ



### "ಎಳೀ ದೇವರು"

ನಗುವ ಓದ್ವ ಜಿಗಿವ ಕಾಡ್ವ
ಮುದ್ದು ಎಳೆಯ ದೇವರು
ಅಟ್ಟ ಹತ್ತಿ ಕೈಯ ಬಿಡುವ
ಭ್ಲೇಡು ಹುಡುಕಿ ದವಡೆಗಿಡುವ
ಮೆಟ್ಟಿಲ್ಹತ್ತಿ ಜಾರಿ ಬರುವ
ಸುತ್ತೋಡುತ ಹಾರ್ವ ಕುಣಿವ
ಪುಟ್ಟ ಪ್ರಾಣ ದೇವರು

ಚಿನ್ನಕಿಂತ ಮಣ್ಣು ಚೆನ್ನ
ಲಾಡುಗಿಂತ ದೀಪದ ಕುಡಿ
ಸೂಜಿ ಚಾಕು ಮೆಟಗತ್ತಿ
ಎಲ್ಲ ಬೇಡ್ವ ನಾಲಗೆ
ಭಾರವೆತ್ತ ಬಯಸುತಾ
ಬಟ್ಟು ಎಳೆದುಕೊಳ್ಳುತಾ

ಸಹಜ ಸಹನೆ ಕಾಯ್ವರು
ಸ್ನಿಗ್ಧ ಹರಣ ಭಾವ ವಲಯ
ಸ್ವರವು ಅದುವೆ ಮಧುರ ಲಯವು
ನಿಮ್ಮ ತೊದಲೆ ನಿಜದ ಭಾಷೆ
ನಮ್ಮದೆಲ್ಲ ತೊಡರು ನುಡಿಯು
ಹಾವ ಭಾವ ಜೀವಲೀಲೆ

ಕೌತುಕದಾ ನಾದವಿಲ್ಲೆ
ಪೀಪಿ ಸದ್ದಿಗುಕ್ಕಿ ನಗುವ ಗಂಟೆ
ಬಡಿಯೆ ಅತ್ತು ಕಿರುಚಿ ಏನದೆಲ್ಲ
ಬಣ್ಣವೂ ತಾಕಬೇಕು ಬೆರಳಿಗೆ
ಸೇರಬೇಕು ಕೇಳ್ವ ಎಲ್ಲ ಮಾತಿಗೆ
ತನ್ನದೊಂದು ತೀರ್ಪು ಜೊತೆಗೆ

ಮಂಡಿಯೂರ್ವ ಪುಟ್ಟ ದೇಹ
ಗೊಂಬೆ ಬೆರಳು ಹವಳದುಟಿ
ಮಾತದೆಲ್ಲ ಪದ್ಯಕುಟಿ ಬಲ್ಲೆನೇ
ಎಳೆಯ ಪದದ ನಂಟನು
ಓದ್ವ ಬರೆವ ಯಾವ ಭಾಷೆ
ಬಲ್ಲದೀ ನಿಘಂಟನು?

ಕಾವುದಿದೀ ನೆಲವು ನಭವು
ಮಲಗಿದಾಗ ಎಳೆಯ ದೇವ
ಎಳೆವುದಲ್ಲೆ ಇಳೆಯ ಜೀವ.

## ನಾವು ನೋಡಿದ ಸಿನೆಮಾ








Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಕಥಾ ಸಮಯ

# *ಅಹಲ್ಯೆಯೆಂಬ ಮತ್ತೊಬ್ಬ ಶಬರಿ*

*.....“ಹೊಸ ಜಾಗ, ಹೊಸ ಜನ, ಬೇರೆಯದ್ದೇ ಜಗತ್ತು, ಪಿತಾಮಹ, ದೇವಲೋಕ ಎಲ್ಲವನ್ನೂ ನೋಡಿ ಸವಿಯುವ ಅವಕಾಶವೆಂದು ತಿಳಿದು ಸಡಗರದಿಂದ ತಯಾರಿಗೆ ಬಿದ್ದೆ.”......*



ಶುಭಶ್ರೀ ಭಟ್ಟ

**ಅ**ದೊಂದು ಹಿಮಾಲಯದ ತಪ್ಪಲಿನ ಸುಂದರ ಮುಂಜಾವು. ಒಂದುಕಡೆ ಪರ್ವತದಂಚಿಂದ ಬಿಳಿಸೀರೆಯುಟ್ಟು, ಬೆಳ್ಳಿಗೆಜ್ಜೆ ತೊಟ್ಟು ನಲಿಯುತ್ತಾ, ಕುಣಿಯುತ್ತಾ, ಬಿಳಿನವಿಲು ನರ್ತಿಸಿದಂತೆ ಝುಳು-ಝುಳು ಹರಿಯುತ್ತಿರುವ ಗಂಗೆ, ಇನ್ನೊಂದೆಡೆ ಗೌತಮರ ಆಶ್ರಮ, ಅದರ ಪಕ್ಕ ಅಪರೂಪದ ನಾಗಪುಷ್ಪ, ಬ್ರಹ್ಮಕಮಲ, ಸೌಗಂಧಿಕಾ ಪುಷ್ಪಗಳಂತಹ ಪುಷ್ಪರಾಶಿಯನ್ನು ಹೊತ್ತ ತೊಪ್ಪಲು, ಅದರಿಂದ ಹೊರಬರುತ್ತಿರೋ ಪರಿಮಳ, ಪತಿಯ ಪೂಜೆಗೆಂದು ಹೂವು ಕೊಯ್ಯಲು ಬಂದವಳು ಮೈಮರೆತು ನಿಂತಿದ್ದೆ, ಸುತ್ತಲಿನ ಸೊಬಗನ್ನು ಬೆರಗಿನಿಂದ ಆಸ್ವಾದಿಸುತ್ತಿದ್ದೆ. ಆಗಲೇ ಕಾಣಿಸಿಕೊಂಡನವ, ಮೋಡಗಳ ರಥದಲ್ಲಿ ಕುಳಿತು ಎಲ್ಲಿಗೋ ತೆರಳುತ್ತಿದ್ದ. ಈಗ ನಮ್ಮ ಆಶ್ರಮದತ್ತ ಕಣ್ಣು ಹಾಯಿಸಲೂ ಭಯ ಅವನಿಗೆ, ನನಗೂ ಅವನ ಕಂಡಾಗಲೆಲ್ಲಾ ಏನೋ ಹೇಳಲಾರದ ಕಸಿವಿಸಿ. ಲಗುಬಗೆಯಿಂದ ಹೂವು ಕೊಯ್ದು, ಪತಿಯ ಧ್ಯಾನಕ್ಕೆ-ಪೂಜೆಗೆ ಅಣಿಮಾಡಿ, ನಾನೂ ಧ್ಯಾನಕ್ಕೆ ಕುಳಿತರೆ ಮನಸ್ಸು ಸ್ಥಿಮಿತ ತಪ್ಪಿತ್ತು. ಮಾತು ಕೇಳದೇ ಹಠ ಮಾಡುವ ಮಗುವಿನಂತೆ ನೆನಪು ಹಿಂದಕ್ಕೋಡಿತು...

## ಜನನ-ಬಾಲ್ಯ



ಸೃಷ್ಟಿಕರ್ತನಾದ ಬ್ರಹ್ಮನಿಗೆ ಸದಾ ಹೊಸತೊಂದು ಬಗೆಯ ಸೃಷ್ಟಿ ಪ್ರಯೋಗ ಮಾಡುವುದರಲ್ಲೇ ಆಸಕ್ತಿ. ಹೀಗಿರಲಿ ಒಂದು ದಿನ ಅವರಿಗೆ ಜಗತ್ತಿನಲ್ಲೇ ಅತೀ ಸುಂದರಳಾದ ಹೆಣ್ಣನ್ನು ಸೃಷ್ಟಿಮಾಡಬೇಕೆಂದು ಬಯಕೆಯುಂಟಾಯ್ತಂತೆ. ಜಗತ್ತಿನ ಸುಂದರ ಸ್ತ್ರೀಯರ ಸೌಂದರ್ಯ-ಲಾವಣ್ಯಗಳ ಮಿಶ್ರಣದಂತೆ ಇರುವ ಒಂದು ಮಗುವನ್ನು ಸೃಷ್ಟಿಸಿ, ಲೋಪವಿಲ್ಲದಿರುವ ಮಾಸದ ಚೆಲುವು ಎಂಬರ್ಥ ಬರುವ 'ಅಹಲ್ಯಾ' ಎಂಬ ಹೆಸರಿಟ್ಟರಂತೆ. ಹೀಗೇ ಸೃಷ್ಟಿಸಿದ ತಮ್ಮ ಮಾನಸಪುತ್ರಿಯನ್ನು ಬೆಳೆಸುವುದು ಹೇಗೆ? ಅದಕ್ಕೆ ಯೋಗ್ಯರಾದವರು ಯಾರು ಎಂಬ ಯೋಚನೆ ಕಾಡಿದೊಡನೆ, ನನ್ನ ಪಿತಾಮಹನಿಗೆ ನೆನಪಾಗಿದ್ದೇ, ವೇದಶಾಸ್ತ್ರಪಾರಂಗತರೂ, ಸಕಲಗುಣ ಸಂಪನ್ನರೂ ಆದ ಗೌತಮ ಋಷಿಗಳು. ತಕ್ಷಣ ಗೌತಮರನ್ನು ಕರೆಯಿಸಿ ಅವರ ಕೈಗೆ ನನ್ನನ್ನು ಕೊಟ್ಟು ಬೆಳೆಸಲು ತಿಳಿಸಿ, ನಾನು ಸುಂದರ ಯುವತಿಯಾಗಿ ಬೆಳೆದು ನಿಂತಾಗ ತಮ್ಮಲ್ಲಿ ಮತ್ತೆ ಕರೆತರುವಂತೆ ತಿಳಿಸಿ ಕಳುಹಿಸಿಕೊಟ್ಟರಂತೆ. ಇತ್ತ ವಿಧೇಯರಾದ ಗೌತಮರು ನನ್ನನ್ನು ಮಗುವಂತೆ ಮುಚ್ಚಟೆಮಾಡಿ, ವೇದಶಾಸ್ತ್ರದ ಅಧ್ಯಯನದ ಜೊತೆಗೆ ಸಂಸ್ಕಾರವಂತಳಾಗಿ ಬೆಳೆಸುತ್ತಿದ್ದರು. ಹುಟ್ಟಿದಾಗಲಿನಿಂದ ನನ್ನನ್ನು ಸಾಕಿ ಸಲಹುತ್ತಿರೋ ಗೌತಮರನ್ನು ನಾನು ತಂದೆಯ ಸ್ಥಾನದಲ್ಲಿಟ್ಟು ಗೌರವಿಸುತ್ತಿದ್ದೆ. ದಿನದಿಂದ ದಿನಕ್ಕೆ ನನ್ನ ಸೌಂದರ್ಯ ವೃದ್ಧಿಸುತ್ತಿತ್ತು, ಹುಣ್ಣಿಮೆಯ ಚಂದ್ರನೂ ನಾಚುವಂತ ರೂಪವತಿಯೆಂದು ಆಶ್ರಮದ ಗೆಳತಿಯರು ಹೊಗಳುತ್ತಿದ್ದರು. ಅವರ ಹೊಗಳುವಿಕೆಗೆ ಹುಸಿಮುನಿಸು ತೋರಿದಂತಾಡಿದರೂ ಮನ ಮತ್ತೆ-ಮತ್ತೆ ಸೌಂದರ್ಯದ ವರ್ಣನೆ ಕೇಳಬಯಸುತ್ತಿತ್ತು. ಒಂದು ದಿನ ಗೌತಮರು ಕರೆದು ನನ್ನನ್ನು ನನ್ನ ಪಿತಾಮಹ ಬ್ರಹ್ಮದೇವರಲ್ಲಿಗೆ ಕರೆದೊಯ್ಯುವುದಾಗಿ ತಿಳಿಸಿದರು. ಹೊಸ ಜಾಗ, ಹೊಸ ಜನ, ಬೇರೆಯದ್ದೇ ಜಗತ್ತು, ಪಿತಾಮಹ, ದೇವಲೋಕ ಎಲ್ಲವನ್ನೂ ನೋಡಿ ಸವಿಯುವ ಅವಕಾಶವೆಂದು ತಿಳಿದು ಸಡಗರದಿಂದ ತಯಾರಿಗೆ ಬಿದ್ದೆ. ಹಗಲೂ-ಇರುಳೂ ನೂರಾರು ಬಣ್ಣ ಬಣ್ಣದ ಕನಸುಗಳು. ಆಗ ತಾನೇ ಯೌವ್ವನವೂ ತೆಕ್ಕೆಮುರಿದು ಬಿದ್ದಿತ್ತು.

## ಯೌವ್ವನ-ಮದುವೆ

ಹದಿಹರೆಯದ ಹೊಸ್ತಿಲಲ್ಲಿ ಮೈದುಂಬಿಕೊಂಡು,ಕಣ್ತುಂಬುವಂತೆ ಎದುರು ನಿಂತ ತಮ್ಮ ಮಾನಸ ಪುತ್ರಿಯನ್ನು ನೋಡಿ ಪಿತಾಮಹ ಬ್ರಹ್ಮದೇವನಿಗೆ ಕ್ಷಣಕಾಲ ಮಾತೇ ಹೊರಡಲಿಲ್ಲ. ಮರುಕ್ಷಣ ನನ್ನ ತಲೆ ಅವರ ಪಾದದಡಿಯಿತ್ತು, ಅವರು ನನ್ನ ತಲೆ ಸವರುತ್ತಿದ್ದರು. ತನ್ನ ಮಾನಸ ಪುತ್ರಿ ಅಲೌಕಿಕ ಸುಂದರಿಯಾದರೂ, ಯಾವುದೇ ಪ್ರಲೋಭೆಗೊಳಗಾಗದೆ, ವಿಧೇಯನಾಗಿ ತನ್ನೆಡೆಗೆ ಅವಳನ್ನು ಕರೆತಂದ ಗೌತಮರ ಮೇಲೆ ಪಿತಾಮಹರಿಗೆ ವಿಶೇಷ ಅಭಿಮಾನ, ಅಕ್ಕರಾಸ್ಥೆಗಳುಂಟಾಗಿದ್ದವು. ನನ್ನ ಸೌಂದರ್ಯಕ್ಕೆ ಮರುಳಾಗಿ ನನ್ನ ವಿವಾಹವಾಗಲು ಪೈಪೋಟಿಗಿಳಿದಾಗ, ಪಿತಾಮಹರು ಒಂದು ಉಪಾಯ ಮಾಡಿದರು. ಸುರಾಸುರರಲ್ಲಿ ಯಾರು ಮೊದಲು ಜಗವನ್ನೆಲ್ಲಾ ಒಂದು ಪ್ರದಕ್ಷಿಣೆಗೈದು ಯಾರು ಮೊದಲು ತಲಪುವರೋ, ಅವರಿಗೆ ನನ್ನನ್ನು ಕೊಟ್ಟು ವಿವಾಹ ಮಾಡುತ್ತೇನೆ ಎಂದು ಘೋಷಿಸುವುದೇ ತಡ, ಎಲ್ಲರೂ ತಮಗೆ ತೋಚಿದ ಮಾರ್ಗದಲ್ಲಿ ಷರತ್ತನ್ನು ಮುಗಿಸಲು ಮುಗಿಬಿದ್ದರು, ಅದರಲ್ಲಿ ಇಂದ್ರ ಮೊದಲಿಗಿದ್ದ. ಸ್ತ್ರೀ ಲಂಪಟನಾದ ಇಂದ್ರನಿಗೆ ನನ್ನನ್ನು ವಿವಾಹ ಮಾಡಿಕೊಡುವುದು ಪಿತಾಮಹರಿಗೂ, ನನ್ನ ಸಹೋದರ ನಾರದರಿಗೂ ಒಂದಿನಿತೂ ಇಷ್ಟವಿರಲಿಲ್ಲ. ಆದರೆ ಯೌವ್ವನದ ಹೊಸ್ತಿಲಲ್ಲಿ ಕಾಲಿಟ್ಟ ನನಗೆ ಇದೆಲ್ಲದೂ ಆಕರ್ಷಕವಾಗಿತ್ತು. ಥಳ-ಥಳಿಸುವ ದೇವಲೋಕ, ಅಲ್ಲಿನ ವೈಭವದಲ್ಲಿ ಮೆರೆಯುವ ಜನರೆಲ್ಲಾ, ನನ್ನನ್ನು ವಿವಾಹವಾಗಲು ಬಯಸುತ್ತಿರುವುದು ವಯೋಸಹಜವಾದ ಆನಂದವಾಗಿತ್ತು. ಮನವು ನವಿಲಂತೆ ಕುಣಿಯುತ್ತಿತ್ತು ರೆಕ್ಕೆಬಿಚ್ಚಿ.ಇತ್ತ ನನ್ನನ್ನು ಪಿತಾಮಹನಿಗೊಪ್ಪಿಸಿ ತಮ್ಮ ಕರ್ತವ್ಯ ಮುಗಿಸಿದ ಗೌತಮರು ಭೂಲೋಕದತ್ತ ತೆರಳುವಾಗ ದಾರಿಯಲ್ಲಿ ಕಾಮಧೇನುವಿಗೆ ಪ್ರಸವ ವೇದನೆ ಶುರುವಾಗಿ, ಪುಟ್ಟ ಕರುವಿಗೆ ಜನ್ಮನೀಡಿತಂತೆ.

ರಕ್ತದ ಮುದ್ದೆಯಲ್ಲಿ ಬಿದ್ದುಕೊಂಡ ಆ ಎಳೆಗರುವನ್ನು ಶುದ್ಧಗೊಳಿಸಿ, ತಾಯಿ ಕಾಮಧೇನುವಿಗೆ ಯಥೇಚ್ಚ ಹುಲ್ಲು ನೀಡಿ, ಅದಕ್ಕೊಂದು ಪ್ರದಕ್ಷಿಣೆ ಮಾಡಿ ನಮಸ್ಕರಿಸಿ, ತಮ್ಮ ಆಶ್ರಮದತ್ತ ಮುನ್ನಡೆಯುತ್ತಿದ್ದರಂತೆ. ಇದನ್ನೆಲ್ಲಾ ತಮ್ಮ ತಪಃಶಕ್ತಿಯಿಂದ ನೋಡಿದ ಪಿತಾಮಹರು ಗೌತಮರನ್ನು ಮತ್ತೆ ತಮ್ಮೆಡೆಗೆ ಕರೆಸಿಕೊಂಡರು. ಕಾಮಧೇನುವಿನ ಪ್ರದಕ್ಷಿಣೆಯೂ ಒಂದೇ, ಜಗತ್ತಿನ ಪ್ರದಕ್ಷಿಣೆಯೂ ಒಂದೇ, ನಿಮ್ಮ ಬಿಟ್ಟರೇ ನನ್ನ ಮಗಳನ್ನು ಚೆನ್ನಾಗಿ ನೋಡಿಕೊಳ್ಳುವರಿಲ್ಲವೆಂದು ಹೊಗಳುತ್ತಾ, ಗೌತಮರಿಗೆ ನನ್ನ ಧಾರೆಯೆರೆದು ಕೊಟ್ಟರು,ನನ್ನ ಇಚ್ಛೆಯನ್ನು ಕೇಳುವ ಮನಸ್ಸೂ ಮಾಡದೇ. ಗೌತಮರನ್ನು ತಂದೆಯ ಸ್ಥಾನದಲ್ಲಿಟ್ಟು ಗೌರವದಿಂದಿದ್ದ ನನಗೆ ಅವರನ್ನು ಪತಿಯೆಂದು ಒಪ್ಪಲು ಸಾಧ್ಯವಾಗಲೇ ಇಲ್ಲ. ಬ್ರಹ್ಮ ಹೇಳಿದ್ದಕ್ಕೆ ವಿಧೇಯನಾಗಿ ಇವರು ನನ್ನನ್ನು ಕಟ್ಟಿಕೊಂಡರು. ತನ್ನದೇ ವಯಸ್ಸಿನವನಿಗೆ ತನ್ನ ಮಗಳನ್ನು ಧಾರೆಯೆರೆದು ಕೊಟ್ಟರೆ ಅವಳಿಗೇನೆನಿಸಬಹುದು? ಅವಳ ಇಷ್ಟಾನಿಷ್ಟಗಳೇನು ಎಂದು ತಿಳಿಯಲೂ ಪ್ರಯತ್ನಿಸಲಿಲ್ಲ. ಸುಂದರವಾಗಿ ನನ್ನ ಹುಟ್ಟಿಸಿದ್ದೊಂದು ಬಿಟ್ಟರೇ, ಇನ್ನೇನೂ ಮಾಡದ ಪಿತಾಮಹನ ಮೇಲಿದ್ದ ಗೌರವ-ಪ್ರೀತಿ ಕಡಿಮೆಯಾಗಿತ್ತು. ಅಷ್ಟರಲ್ಲಾಗಲೇ ಜಗತ್ತನ್ನು ಪ್ರದಕ್ಷಿಣೆ ಮಾಡಿ ಬಂದ ಸುರಾಸುರರೆಲ್ಲರೂ, ನಮ್ಮ ವಿವಾಹ ನೋಡಿ ದಂಗಾಗಿದ್ದರು. ಎಲ್ಲರಿಗಿಂತ ಮೊದಲು ಬಂದ ಇಂದ್ರನಂತೂ ಕುದಿಯತೊಡಗಿದ್ದ. ಆಡುವಂತಿಲ್ಲ, ನುಂಗುವಂತಿಲ್ಲ, ಸುಮ್ಮನೇ ಧುಮ್ಮಿಕ್ಕುತ್ತಾ ಹೋದ. ಅವನು ಹೋದೆಡೆ ಕ್ಷಣ ನೋಡಿದ ದೀರ್ಘ ನಿಟ್ಟುಸಿರೊಂದು ಹೊರಬಂತು. ಅಲ್ಲಿಗೆ ಎಲ್ಲಾ ಭಾವನೆಗಳಿಗೂ ಹೊರಗಟ್ಟಲ್ಪಟ್ಟವು. ನಾನು ಗೃಹಸ್ಥಾಶ್ರಮಕ್ಕೆ ಕಾಲಿಟ್ಟಿದ್ದೆ

## ಪ್ರೀತಿ-ಪ್ರಣಯ-ಶಾಪಗ್ರಹಣ

ಮದುವೆಯಾಗಿ ವರುಷವೇ ಕಳೆಯತ್ತಾ ಬಂದರೂ ಗೌತಮರಿಗೆ ನನ್ನೆಡೆಗೆ ಅದೇನಿರ್ಲಿಪ್ತಭಾವ. ಪತ್ನಿಯ ದರ್ಜೆಯೊಂದು ಸಿಕ್ಕಿದ್ದು ಬಿಟ್ಟರೆ ಮತ್ತ್ಯಾವ ಬದಲಾವಣೆಯೂ ಇಲ್ಲ. ನನಗೂ ಅಷ್ಟೇ ಅವರನ್ನು ತಂದೆಯ ಸ್ಥಾನದಿಂದ ಕೆಳಗಿಳಿಸಿ, ಪತಿಯೆಂಬ ಸಿಂಹಾಸನವನ್ನೇರಿಸಿ ಕುಳಿತಿದ್ದು ಬಿಟ್ಟರೇ ಮತ್ತ್ಯಾವ ವಿಶೇಷ ಪ್ರೇಮವೇನೂ ಉಕ್ಕಿ ಬರಲಿಲ್ಲ. ಆದರೆ ಅವರು ಹಾಕಿಕೊಟ್ಟ ಸಂಸ್ಕಾರದಲ್ಲಿ ನಡೆಯುತ್ತಿದ್ದ ನನಗೆ ಪತಿಯೇ ಪರದೈವವಾಗಿದ್ದರು. ಕೂಗುವ ವೇಳೆ ನದಿಯತ್ತ ತೆರಳಿ, ಪ್ರಾತ:ಕರ್ಮಾದಿಗಳನ್ನು ಮುಗಿಸಿ ಶುದ್ಧರಾಗಿ ಆಶ್ರಮದತ್ತ ಬಂದು ತಮ್ಮ ಎಂದಿನ ಧ್ಯಾನ-ಪೂಜೆಯನ್ನು ಮುಗಿಸುವ ವೇಳೆಗೆ, ನಾನೂ ಸ್ನಾನಾದಿಗಳನ್ನು ಮುಗಿಸಿ ಫಲಹಾರಾದಿಗಳನ್ನು ಉಪಹಾರಕ್ಕೆ ತಂದಿಡುತ್ತಿದ್ದೆ. ಅದೊಂದು ಕರಾಳದಿನವೆನ್ನಲೋ? ಕಣ್ತೆರೆಸಿದ ದಿನವೆನ್ನಲೋ ತಿಳಿಯದು. ಗೌತಮರು ಎಂದಿನಂತೆ ಕೋಳಿ ಕೂಗಿದೊಡನೆ ಎದ್ದು ನದಿ ತೀರಕ್ಕೆ ತೆರಳಿದ ಕೆಲ ನಿಮಿಷಕ್ಕೆ ಹಿಂತಿರುಗಿ ಬಂದರು. ಯಾವತ್ತೂ ಇಲ್ಲದ ಪ್ರೀತಿ-ಸಲುಗೆ ತೋರಿಸುತ್ತಾ ಬಳಿಸರಿದರು, ಸೆರಗು ಕೆಳಗೆ ಜಾರಿತ್ತು ,ನನ್ನ ಸೌಂದರ್ಯವನ್ನು ಬಗೆಬಗೆಯಾಗಿ ವರ್ಣಿಸುತ್ತಾ ಬಿಗಿದಪ್ಪಿದರು. ಮೈಯೆಲ್ಲಾ ನವಿರೆದ್ದಿತ್ತು..ತಪೋಶಕ್ತಿಯಿಂದ ಬಳಿ ಬಂದದ್ದು ಇಂದ್ರನೆಂದು ತಿಳಿದು, ಅವನಿಗೆ ಬುದ್ಧಿ ಹೇಳಿ ಸಾಗಹಾಕಲು ಯತ್ನಿಸಿದಷ್ಟೂ ಸಮೀಪಿಸುತ್ತಿದ್ದ. ನನ್ನ ಚೆಲುವನ್ನು ಹೊಗಳುತ್ತಾ ಅಟ್ಟಕ್ಕೇರಿಸಿ, ಮಾತಲ್ಲೇ ಮರಳು ಮಾಡಿ, ಅವನ ಮೋಡಿಗೆ ಮೈಮರೆತು ಎಚ್ಚೆತ್ತುಕೊಳ್ಳುವಷ್ಟರಲ್ಲಿ ನನ್ನನ್ನು ಸೂರೆಹೊಡೆದಿದ್ದ. ವಿವಾಹವಂತೂ ಆಗಲಿಲ್ಲ, ಕೊನೆಗೊಂದು ದಿನ ಅಹಲ್ಯೆಯನ್ನು ಸೌಂದರ್ಯವನ್ನು ಆಸ್ವಾದಿಸುವುದೇ ಎಂದು ಶಪಥ ಮಾಡಿ ಕುತಂತ್ರ ಮಾಡಿದ್ದನಂತೆ. ಗೌತಮರಿಗೆ ತಂತ್ರ ಮಾಡಿ ಕೇವಲ ಸೌಂದರ್ಯಕ್ಕಾಗಿ ನನ್ನನ್ನು ಅನುಭವಿಸಿದೆನೆಂದು ಇಂದ್ರ ಥರಥರನೆ ನಡುಗತೊಡಗಿದ್ದ. ಅವನ ಹೊಗಳಿಕೆಗೆ ಮರುಳಾಗಿ ಪತಿಗೆ ದ್ರೋಹ ಬಗೆದೆನಲ್ಲಾ ಎಂದೂ ನಾನೂ ಕಂಪಿಸುತ್ತಿದ್ದೆ. ಅವನನ್ನೂ ಹೊರನೂಕುವಷ್ಟರಲ್ಲಿ ಮರಳಿ ಬಂದ ಗೌತಮರು, ಕ್ಷಣಮಾತ್ರದೀ ನಡೆದಿದ್ದೆಲ್ಲವ ಗ್ರಹಿಸಿದರು. ಕೋಪೊದ್ರಿಕ್ತರಾದ ಗೌತಮರು, ಸ್ತ್ರೀಯಲ್ಲಿ ಅಪಾರ ಆಸಕ್ತಿ ಹೊಂದಿರುವ ಇಂದ್ರನಿಗೆ ಸಹಸ್ರಯೋನಿಯಾಗುವಂತೆ ಶಪಿಸಿದರು. ನಾನು ಅವರ ಕಾಲಿಗೆ ಬಿದ್ದು ಕ್ಷಮೆ ಕೇಳಿದೆ, ಬೇಡಿಕೊಂಡೆ, ಆದರೂ ಅವರ ಕೋಪ ಕಡಿಮೆಯಾಗಲಿಲ್ಲ. ನನ್ನ ಮುಖವನ್ನೂ ನೋಡದೆ, ನೆರಳೂ ತಾಕದಂತೆ ನಿಂತು 'ನಿನಗೆ ನಿನ್ನ ಸೌಂದರ್ಯದ ಮೇಲೆ ಅಪಾರ ಅಭಿಮಾನವಲ್ಲವೇ? ಇವತ್ತಿನಿಂದ ನಿನ್ನ ಸೌಂದರ್ಯ ಯಾರ ಕಣ್ಣಿಗೂ ಕಾಣದಿರಲಿ, ಕಲ್ಲಾಗು.. ಸಾಕ್ಷಾತ್ ವಿಷ್ಣು ಈ ಆಶ್ರಮಕ್ಕೆ ಕಾಲಿಡುವ ತನಕ ನಿನಗೆ ಈ ಶಾಪದಿಂದ ಮುಕ್ತಿಯಿಲ್ಲ'. ಎಂದು ಶಾಪವನ್ನಿತ್ತು ಹಿಮಾಲಯದತ್ತ ತೆರಳಿದರು. ನಾನು ಕಲ್ಲಾದೆ, ಜೊತೆಗೆ ನನ್ನ ಮನವೂ.. ಇಷ್ಟು ದಿನ ಆಶ್ರಮದಲ್ಲಿ ನನಗೆ ಗೌರವ ಕೊಡುತ್ತಿದ್ದವರೆಲ್ಲಾ, ನನ್ನನ್ನಿಂದು ತುಚ್ಛವಾಗಿ ಕಾಣತೊಡಗಿದರು. ಈ ಶಿಲೆಕಲ್ಲನ್ನು ನೋಡಿಕೊಂಡು ಹೋಗುವ ನೆಪ ಮಾಡಿ, ನಡೆದಿದ್ದೆಲ್ಲವುದಕ್ಕೆ ಉಪ್ಪು-ಖಾರ ಸೇರಿಸಿ ಹೇಳುತ್ತಾ ಢಂಗೂರ ಸಾರುತ್ತಿದ್ದರು. ಇತ್ತ ಜನರಾಡುವ ಮಾತಿಗೆ ಕಿವಿಯಾಗಿ ಕಿವುಡಾಗಿ ಶಿಲೆಯಲ್ಲೊಂದು ಶಿಲೆಯಾಗಿದ್ದೆ.

(ಮುಂದಿನ ಪುಟಕ್ಕೆ...)


Copyright © KCO – Brindavana

(.... ಹಿಂದಿನ ಪುಟದಿಂದ)

## ರಾಮಾಗಮನ-ಶಾಪಮುಕ್ತಿ

ಇದೆಲ್ಲಾ ಕಳೆದು ತುಂಬಾ ವರುಷಗಳೇ ಕಳೆಯಿತೋ ನಾ ತಿಳಿಯೆ. ಹಸಿವು,ಬಾಯರಿಕೆ, ತಿಂಗಳ ನೋವೆಲ್ಲಾ ಅನುಭವಿಸಿ ನರಳಿ ನರಳಿ ಕೊರಡಾಗಿದ್ದೆ. ಮೊದ ಮೊದಲು ನನ್ನ ಮನದಿಚ್ಛೆಯನ್ನೂ ಅರಿಯದೇ ಮದುವೆಯಾದಾಗಲಿನಿಂದ ಯಾವ ಸುಖವನ್ನೂ ನೀಡದೆ, ನಿಗ್ರಹಿಯಾಗಿದ್ದ ಪತಿಗೆ ತಕ್ಕ ಶಾಸ್ತಿ ಮಾಡಿದ್ದೆನೆಂದು ಬೀಗುತ್ತಿದ್ದೆ. ಸೌಂದರ್ಯವನ್ನು ಮಕರಂದ ಹೀರಿದ ದುಂಬಿಯಂತೆ ಹೀರಿ, ನಂತರ ಪರಿಸ್ಥಿತಿಯನ್ನು ಎದುರಿಸುವ ತಾಕತ್ತಿಲ್ಲದೇ ಥರಗುಟ್ಟುತ್ತಿದ್ದ ಹೆದರುಪುಕ್ಕಲ ಇಂದ್ರನ ಮೇಲೆ ಅಸಹ್ಯ ಹುಟ್ಟಿತ್ತು. ನನ್ನ ನೆರಳು ಬಿದ್ದರೂ ಅಪವಿತ್ರನಾಗುವೆನೆಂದು ದೂರದಿ ಬೆನ್ನಿ ತಿರುಗಿಸಿ ನಿಂತು ಶಾಪ ಹಾಕಿದ ಗೌತಮರ ಮೇಲೆ ಕೋಪಗೊಂಡೆ. ಕೊನೆಕೊನೆಗೆ ಕ್ಷಣಿಕ ಸುಖಕ್ಕಾಗಿ ಮೈಮರೆತು, ಕೈಹಿಡಿದವನೂ ಎಂತವನೇ ಆದರೂ ಅನುಸರಿಸಿಕೊಂಡು ಹೋಗಬೇಕಾದ ಪತ್ನಿ ಧರ್ಮ ಮರೆತದ್ದಕ್ಕೆ ತಳಮಳಿಸುತ್ತಿದ್ದೆ. ಕಾಲಕ್ರಮೇಣ ಮನವೊಂದು ಸ್ಥಿಮಿತಕ್ಕೆ ಬಂದ ಮೇಲೆ ನನ್ನ ತಪ್ಪೇನೆಂದು ಅರಿವಾಗಿತ್ತು. ಪಶ್ಚಾತ್ತಾಪದ ಬೇಗೆಯಲ್ಲಿ ಕುದಿಯತೊಡಗಿದ್ದೆ, ರಾಮನಿಗಾಗಿ ಕಾಯತೊಡಗಿದ್ದೆ.

ಅದೊಂದು ಸುದಿನ,ನನ್ನ ಜೀವನದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ದಿನ. ರಾಮನವತಾರದಲ್ಲಿದ್ದ ವಿಷ್ಣುವಿನ ಆಗಮನವಾಯ್ತು ನಮ್ಮ ಆಶ್ರಮದೊಳು. ಸ್ಪರ್ಶಮಾತ್ರದಿಂದ, ನಾನು ಶಾಪಮುಕ್ತಳಾದೆ. ಶಿಲೆಯಿಂದೆದ್ದು ಬಂದೆ ಪರಿಶುದ್ಧಳಾಗಿ, ಪಶ್ಚಾತ್ತಾಪದ ಬೆಂಕಿಯ ಪುಟಕ್ಕಿಟ್ಟ ಚಿನ್ನದಂತೆ. ಅನುದಿನವೂ, ಅನುಕ್ಷಣವೂ ನೊಂದಿದ್ದವಳಿಗೆ ಗೌತಮರ ಮಾತೆಲ್ಲವೂ ನೆನಪಿತ್ತು. ಯಾವಾಗ ಶಾಪಮುಕ್ತಳಾಗಿ ಗೌತಮರ ಸೇರುವೆನೋ?ಯಾವಾಗ ಅವರಲ್ಲಿ ಕ್ಷಮೆಯಾಚಿಸುವೆನೋ? ವಿಷ್ಣುವಿನ ಅವತಾರಿ ಯಾವಗ ಬರುವನೋ? ಎಂದೆಲ್ಲಾ ಪರಿತಪಿಸುತ್ತಿರುವ ನನಗೆ ಶಾಪದಿಂದ ಮುಕ್ತಿ ಸಿಕ್ಕಿತ್ತು. ಅದಾದ ಮೇಲೆ ಹಿಮಾಲಯದಲ್ಲಿ ಗೌತಮರನ್ನು ಸೇರಿ ಮರು ಜೀವನ ಶುರುಮಾಡಿದ್ದೆ. ಈಗ ನಾನು ಪತೀತೆಯಾಗದೇ ಪತಿವೃತೆಯಾಗಿದ್ದೆ...

●

ಕವನ



ಅನಿಲ್ ಭಾರಧ್ವಾಜ

### "ಬೇಸಿಗೆ"

(ಬೆಸುಗೆ ಚಿತ್ರದ ಹಾಡಿನ ಅಣುಕುವಾಡು)

ಬೇಸಿಗೆ...ಬೇಸಿಗೆ...ಬೇಸಿಗೆ...ಬೇಸಿಗೆ... || ಪ ||
ಬೆಂಗಳೂರಿನಲ್ಲಿ ಬೆಂದುಹೋಗೋ ಬೇಸಿಗೆ... || ಅ.ಪ ||

ಊರತುಂಬ ಹರಡಿದೆ ವಾಹನದ ಕಪ್ಪೊಗೆ
ಬಸ್ಸು-ಕಾರು ಹಾಕಿವೆ ಗಾಳಿ ಮೇಲೆ ಮುತ್ತಿಗೆ
ಮರಗಳು ನಡುಗಿವೆ ಗರಗಸದ ಕೂಗಿಗೆ
ಕೆಟ್ಟದೃಷ್ಟಿ ಬಿದ್ದಿದೆ ಉದ್ಯಾನ ನಗರಿಗೆ || ೧||

ಮನೆ ಅಂಗಳವಾಯಿತು ಮೂರುಮಹಡಿ ಮಾಳಿಗೆ
ಮಳೆನೀರು ಸೇರಿತು ದೊಡ್ಡಮೋರಿ ಹೊಟ್ಟೆಗೆ
ಛಾವಣಿ ಕಾರಿತು ಉಗ್ರಬೆಂಕಿಯ ಧಗೆ
ಫ್ಯಾನು-ಏಸಿ ಬೇಕೇ ಬೇಕು ಜನರ ಉಳಿವಿಗೆ || ೨||

ಹೆದರಿ ವಲಸೆ ಹೋದವು ಪುಟ್ಟ ಗುಬ್ಬಚ್ಚಿ ಕಾಗೆ
ಪಾರಿವಾಳದ ಧಾಳಿ ಅಪಾರ್ಟ್ಮೆಂಟಿನ ಕಿಟಕಿಗೆ
ಕೆರೆ-ಬಾವಿಗಳ ಬಲಿ ಐಟಿ-ಬಿಟಿ ಏಳಿಗೆಗೆ
ಬಡ್ಕೋಬೇಕು ನಮ್ಮ ರಾಜಕಾರಣಿ ಬುದ್ಧಿಗೆ || ೩||



ದೀಪಕ್ ನಾಯ್ಕ ಕ್ಷತ್ರಿಯ

ಕವನ

### *ಪಯಣ"

ನಿಧಾನ ಸಾಗು ಬದುಕೆ
ತೀರಿಸುವ ಋಣ ತುಂಬಾ
ಬಾಕಿ ಇದೆ,
ಅಳಿಸುವ ನೋವು
ಇನ್ನೂ ಇದೆ,
ಮಾಡುವ ಕೆಲಸ
ತುಂಬಾ ಇದೆ...

ಓಡುವ ಬರದಲ್ಲಿ ಕಳಚಿದ
ಕೊಂಡಿಗಳೆಷ್ಟೊ...
ಮುರಿದ ಮನಸುಗಳೆಷ್ಟೊ.
ಕಳಚಿದ ಕೊಂಡಿಗಳ
ಸೇರಿಸ ಬೇಕಿದೆ..
ಮುರಿದ ಮನಸುಗಳ
ನಗಿಸ ಬೇಕಿದೆ...

ಅಪೂರ್ಣ ಬಯಕೆಗಳ
ಪೂರ್ತಿಗೊಳಿಸಬೇಕಿದೆ...
ಕೆಲವು ಕರ್ತವ್ಯ
ಪಾಲಿಸಬೇಕಿದೆ...
ಎದೆಯೊಳಗೆ ಉಸಿರುಗಟ್ಟಿ
ಸತ್ತ ಹಲವು ಆಸೆಗಳ
ಗೋರಿ ಕಟ್ಟ ಬೇಕಿದೆ..

ಕೆಲವು ಗಟ್ಟಿ ಸಂಬಂಧ
ಬಿರುಕು ಬಿಟ್ಟವು..
ಕೆಲವು ಕೊಡಿಕೊಳ್ಳದೆ
ಬೇರ್ಪಟ್ಟವು...

ಆ ಸಂಬಂಧಗಳು ಮಾಡಿದ
ಗಾಯ ಇನ್ನೂ ಮಾಗಬೇಕಿದೆ.

ಜೊತೆ ನಡೆದವರಿಗೆ
ಜೊತೆ ನೀಡಬೇಕಿದೆ...
ಜೀವವಾದವರ ಜೊತೆ
ಜೀವಿಸ ಬೇಕಿದೆ...
ನನ್ನ ಬಿಟ್ಟು ಬದುಕಲಾರೆನು
ಎಂದವರ ಜೊತೆ
ಬದುಕಬೇಕಿದೆ...

ನಿಧಾನ ಸಾಗು ಬದುಕೆ..
ನನಗೆ ಇನ್ನೂ ಬದುಕಬೇಕಿದೆ..

—ದೀನಾಕ್ಷ..

**" ನಾವೆಷ್ಟು ಖುಷಿಯಾಗಿದ್ದೇವೆ ಎಂಬುದರ ಮೇಲೆ ಜೀವನದ ಸಾರ್ಥಕತೆ ನಿರ್ಧಾರವಾಗುವುದಿಲ್ಲ.**

**ನಮ್ಮಿಂದ ಎಷ್ಟು ಜನ ಸಂತೋಷವಾಗಿದ್ದಾರೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ.**

**ಸಾಧ್ಯವಾದಷ್ಟು ಎಲ್ಲರನ್ನೂ ಖುಷಿಯಾಗಿಡಲು ಪ್ರಯತ್ನಿಸೋಣ."**


Copyright © KCO – Brindavana

## ಒದುಗರ ಓಲೆಗಳು

Santosh Kadlebele

ಬೃಂದಾವನ ವಾಣಿ ತುಂಬಾ ಚೆನ್ನಾಗಿ ಬಂದಿದೆ. ಇದಕ್ಕೆ ಶ್ರಮಿಸಿದ ಎಲ್ಲ ಸಂಪಾದಕ ಮಂಡಳಿಗೂ ಹಾಗು ಕವನ, ಹಾಸ್ಯ, ಲೇಖನ ಬರೆದಂಥ ಎಲ್ಲ ಬರಹಗಾರಿಗೂ ಹೃದಪೂರ್ವಕ ವಂದನೆಗಳು

ಈ ತಂಪಾದ ಹೊತ್ತ್ನಲ್ಲಿ, ಇಂಪಾದ ಸಂಗೀತ ಹಾಗು ಬಿಸಿ ಬಿಸಿ ಚಹಾದ ಜೊತೆಗೆ ಕಂಪಾದ ಕನ್ನಡ ವಾಣಿ ಓದುವದು ಸ್ವರ್ಗಕ್ಕೆ ಕಿಚ್ಚು ಹಚ್ಚಲೆಂದ ಸರ್ವಜ್ಞ
🙏🙏🙏🙏🙏

11:51 AM

ಬೃಂದಾವನ ಯುಗಾದಿ ವಿಶೇಷ .. .. ಹಂಪಿ ವಿರುಪ್ವಾಕ್ಷ ಮಂದಿರ ಅದ್ಭುತವಾಗಿದೆ ಆಕರ್ಷಿಸಿದೆ .. ಓದಲು ಸಂಪಾದಕೀಯದಿಂದ ಶುರು ಮಾಡಿದ್ದೇನೆ... Congratulations to the Vani team

ಮಲ್ಲಿಕ್ ಪ್ರಸಾದ್

ನಮಸ್ಕಾರ ವಾಣಿ ಸ್ನೇಹಿತರೆ ..

ಬೃಂದಾವನ ವಾಣಿ ಬಹಳ ಚೆನ್ನಾಗಿ ಮೂಡಿ ಬಂದಿದೆ. ಎಷ್ಟೊಂದು ಲೇಖನ ಮತ್ತು ಕಥೆ , ಕವನಗಳು. ಒಂದೊಂದನ್ನು ಓದಿ ಸಂತೋಷ ಇಮ್ಮಡಿಸುತ್ತಿದೆ. ಧನ್ಯವಾದಗಳು ಮತ್ತು ಶುಭಾಶಯಗಳೊಂದಿಗೆ

...ಲಕ್ಷ್ಮಿ ಕೊಳಲ್.

## ನಮ್ಮ ಸಂಸ್ಕೃತಿ: ಬೆಂಗಳೂರು ಕರಗ





*ತಿದ್ದುಪಡಿ : ಕಳೆದ ಸಂಚಿಕೆಯಲ್ಲಿ ಉಷಾ ಬಸ್ರುರ ಅವರ ಹೆಸರು ತಪ್ಪಾಗಿದೆ. ಕ್ಷಮೆಯಿರಲಿ*

## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.
ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.
ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯನ್ನು ಆರಾಧಿಸಿ, ಕನ್ನಡದ ಕಂಪನ್ನು ಹರಡೋಣ.

**ಸೂಚನೆ:**

ನ್ಯೂಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು-ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ, ಬಾಲಪ್ರತಿಭೆ, ಕ್ರೀಡ, ಅಮೆರಿಕಾ ನಾ ಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ಅಮೆರಿಕಾ ನಾ ಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ, ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.

'ಬೃಂದಾವನ ವಾಣಿ' ಮತ್ತು 'ಬೃಂದಾವನ' ಕನ್ನಡ ಕೂಟ ಯಾವುದೇ ಒಂದು ರಾಜಕೀಯ ಪಕ್ಷವನ್ನು , ಧರ್ಮವನ್ನು ಅಥವಾ ಪಂಗಡವನ್ನು ಪ್ರತಿನಿಧಿಸುವುದಿಲ್ಲ . ನಮ್ಮ ಧ್ಯೇಯ ಕರ್ನಾಟಕ ರಾಜ್ಯ, ಕನ್ನಡ ಭಾಷೆ , ಸಂಸ್ಕೃತಿ ಹಾಗು ಕನ್ನಡಿಗರ ಅಭ್ಯುಧಯ ಮಾತ್ರ.


Copyright © KCO – Brindavana